# ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 32 | ಆಗಸ್ಟ್ 5–11, 2019 | ಪುಟ 16 | ರೂ.10/-

Web : www.janashakthi.co.in, e-mail : js_weekly@yahoo.com








# ಕನ್ನಡದಲ್ಲಿ 'ಬಂಡವಾಳ' ನಾಡೋಜ ಬರಗೂರು ರಾಮಚಂದ್ರಪ್ಪರವರಿಂದ ಲೋಕಾರ್ಪಣೆ



## ಹೆಡೆ ಎತ್ತುತ್ತಿದೆ ದ್ವೇಷದ ಸರ್ಪ



## ಜನವಾದಿ ಮಹಿಳೆಯರ 10ನೇ ರಾಜ್ಯ ಸಮ್ಮೇಳನ



## ಸೈದ್ಧಾಂತಿಕ ವಿರೋಧಿಗಳನ್ನು ಸದೆಬಡಿಯಲು ಯುಎಪಿಎ ತಿದ್ದುಪಡಿ

# ಎಸ್. ಜೈಪಾಲ್ ರೆಡ್ಡಿ ನಿಧನ – ಯೆಚುರಿ ಸಂತಾಪ



ಹಿರಿಯ ಕಾಂಗ್ರೆಸ್ ಮುಖಂಡ ಹಾಗೂ ಯುಪಿಎ ಸರಕಾರದಲ್ಲಿ ಮಂತ್ರಿಗಳಾಗಿದ್ದ ಎಸ್.ಜೈಪಾಲ್ ರೆಡ್ಡಿ ಜುಲೈ 28 ರಂದು ನಿಧನರಾಗಿದ್ದಾರೆ. ಅವರೊಬ್ಬ ಪ್ರಾಮಾಣಿಕ ಮತ್ತು ನೇರನುಡಿಯ ರಾಜಕಾರಣಿಯಾಗಿದ್ದರು ಎಂದು ಅವರೊಂದಿಗೆ ತನ್ನ ಸುಮಾರು ನಾಲ್ಕು ದಶಕಗಳ ನಿಕಟ ಒಡನಾಟವನ್ನು ನೆನಪಿಸಿಕೊಳ್ಳುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ. ತನ್ನ ದೀರ್ಘ ರಾಜಕೀಯ ಜೀವನದಲ್ಲಿ ಭಾರತದ ಜಾತ್ಯತೀತ ಪ್ರಜಾಸತ್ತಾತ್ಮಕ ಬುನಾದಿಯನ್ನು ಎತ್ತಿ ಹಿಡಿಯಲು ಮತ್ತು ಬಲಪಡಿಸಲು ಎಡಬಿಡದೆ ದೃಢತೆಯಿಂದ ಅವರು ದುಡಿದಿದ್ದಾರೆ. ಅವರು ತಮ್ಮ ಪಾಂಡಿತ್ಯ ಮತ್ತು ಅಧ್ಯಯನಕ್ಕೂ ಹೆಸರಾಗಿದ್ದವರು. ಅವರ ನಿಧನ ದೇಶದ ಜಾತ್ಯತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಒಂದು ದೊಡ್ಡ ನಷ್ಟ ಎನ್ನುತ್ತ ಅವರ ಕುಟುಂಬದ ಸದಸ್ಯರು ಮತ್ತು ಅಪಾರ ಅಭಿಮಾನಿಗಳು ಮತ್ತು ಗೆಳೆಯರ ತಂಡಕ್ಕೆ ಹಾರ್ದಿಕ ಸಂತಾಪವನ್ನು ಸೂಚಿಸಿದ್ದಾರೆ.

# ದಲಿತರ ಹಕ್ಕುಗಳಾಗಿ ಮತ್ತು ದಮನದ ವಿರುದ್ಧ ಐಕ್ಯ ಹೋರಾಟಕ್ಕೆ ದಲಿತ ಸಂಘಟನೆಗಳ ನಿರ್ಧಾರ

ಜುಲೈ 30 ರಂದು ನವದೆಹಲಿಯಲ್ಲಿ ದಲಿತ ಶೋಷಣ ಮುಕ್ತಿ ಮಂಚ್(ಡಿಎಸ್‌ಎಂಎಂ) ಮತ್ತಿತರ ದಲಿತ ಹಕ್ಕುಗಳಿಗಾಗಿ ಹೋರಾಡುತ್ತಿರುವ ಏಳು ಸಂಘಟನೆಗಳ ಮುಖಂಡರು ಸಭೆ ಸೇರಿ ಎನ್‌ಡಿಎ2 ಸರಕಾರ ಬಂದ ನಂತರ ದಲಿತರು ಮತ್ತು ಇತರ ದಮನಿತ ಸಮುದಾಯಗಳ ಬಡವರ ಮೇಲೆ ದಾಳಿಗಳು ಹೆಚ್ಚಿವೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಈ ಕುರಿತು ರಾಷ್ಟ್ರಪತಿಗಳಿಗೆ ಒಂದು ಮನವಿ ಪತ್ರ ಸಲ್ಲಿಸಬೇಕು, ದಲಿತರ ಹಕ್ಕುಗಳಿಗಾಗಿ ಸಕ್ರಿಯವಾಗಿರುವ ಇತರ ಸಂಘಟನೆಗಳನ್ನೆಲ್ಲ ಒಂದುಗೂಡಿಸಿ ರಾಷ್ಟ್ರೀಯ ಮಟ್ಟದಲ್ಲೂ ರಾಜ್ಯಗಳ ಮಟ್ಟದಲ್ಲೂ ದಲಿತರು ಮತ್ತು ಇತರ ದಮನಿತರ ಹಕ್ಕುಗಳಿಗಾಗಿ ಒಂದು ಬಲವಾದ, ಐಕ್ಯ ಆಂದೋಲನವನ್ನು ಆರಂಭಿಸಬೇಕು ಎಂದು ಸಭೆಯಲ್ಲಿ ನಿರ್ಧರಿಸಲಾಯಿತು.

ಡಿಎಸ್‌ಎಂಎಂನ ಅಧ್ಯಕ್ಷ ಕೆ.ರಾಧಾಕೃಷ್ಣನ್, ಕಾರ್ಯದರ್ಶಿ ರಾಮಚಂದ್ರ ಡೋಮ್, ಅಖಿಲ ಭಾರತ ಎಸ್‌ಸಿ/ಎಸ್‌ಟಿ ಸಂಘಗಳ ಒಕ್ಕೂಟದ ಅಧ್ಯಕ್ಷ ಉದಿತ್ ರಾಜ್, ಅಖಿಲ ಭಾರತ ಅಂಬೇಡ್ಕರ್ ಮಹಾಸಭಾದ ಅಶೋಕ ಭಾರತಿ, ಬಾಮ್‌ಸೆಫ್ ನ ಸುನೀತಾ ಕುಮಾರ್ ಮತ್ತು ಮುನ್ನಿ ಸಿಂಗ್, ಬಿಎಸ್‌ಎನ್‌ಎಸ್ ನ ಓಂವೀರ್ ಮತ್ತು ಬೀರ್ ಸಿಂಗ್, ರಾಷ್ಟ್ರೀಯ ದಲಿತ್ ಮಹಿಳಾ ಆಂದೋಲನದ ಸುಮೇಧ್ ಬೋಧ್ ಹಾಗೂ ಆವಾಮ್ ಸಂಘ್ ನ ಎಂ.ಎಲ್. ಖರೋಲಿಯ ಈ ಸಭೆಯಲ್ಲಿ ಭಾಗವಹಿಸಿದ್ದರು.

# ಸಾಕು, ನಿಲ್ಲಿಸಿ ಕಾಶ್ಮೀರದಲ್ಲಿ 'ಷಾಕ್ ಶುಶ್ರೂಷೆ': ಜಮ್ಮು-ಕಾಶ್ಮೀರ ರಾಜ್ಯಪಾಲರಿಗೆ ತರಿಗಾಮಿ ಆಗ್ರಹ

ಕಳೆದ ಕೆಲವು ವಾರಗಳಲ್ಲಿ ಕಾಶ್ಮೀರದಲ್ಲಿ ಅನಿಶ್ಚಿತತೆಯನ್ನು ಆಳಗೊಳಿಸಿರುವ ಸರಕಾರೀ ಆದೇಶಗಳ ಮೇಲಿನ ಗೊಂದಲವನ್ನು ಸ್ಪಷ್ಟೀಕರಿಸಬೇಕು ಎಂದು ಸಿಪಿಐ(ಎಂ) ಮುಖಂಡ ಮಹಮ್ಮದ್ ಯೂಸುಫ್ ತರಿಗಾಮಿ ರಾಜ್ಯಪಾಲರಿಗೆ ಹೇಳಿದ್ದಾರೆ. ಕಾಶ್ಮೀರದಲ್ಲಿ ಕಳೆದ ಕೆಲವು ದಿನಗಳಿಂದ ಊಹಾಪೋಹಗಳನ್ನು ಸೃಷ್ಟಿಸಿರುವ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ 'ಸರಕಾರಿ' ಆದೇಶಗಳು ಅಸಿಂಧು ಎಂದು ಜುಲೈ 30ರಂದು ರಾಜ್ಯಪಾಲರು ಹೇಳಿದ್ದಾರೆ.

ಹಾಗಿದ್ದರೆ ಕಾಶ್ಮೀರದಲ್ಲಿ ಅರೆ ಮಿಲಿಟರಿ ಪಡೆಗಳ ಇನ್ನೂ 100 ಕಂಪನಿಗಳನ್ನು ತಂದು ನಿಲ್ಲಿಸಲಾಗುತ್ತದೆ ಎಂಬುದು ಕೇವಲ ಸುಳ್ಳು ಊಹಾಪೋಹವೇ ಎಂದು ರಾಜ್ಯಪಾಲರು ಸ್ಪಷ್ಟೀಕರಿಸಬೇಕಾಗಿದೆ. "ಈ ಪಡೆಗಳನ್ನು ತಂದು ನಿಲ್ಲಿಸುವುದು ಉದ್ದೇಶಪೂರ್ವಕವಾದ ಮತ್ತು ಭದ್ರತಾ ಜಾಲದ ಅಗತ್ಯಗಳಿಗೆ ಸ್ಪಂದಿಸುವ ಕ್ರಮ" ಎಂದು ರಾಜ್ಯಪಾಲರ ಒಬ್ಬ ಸಲಹಾಗಾರರು ಹೇಳುತ್ತಿದ್ದರೆ, 'ಸರಕಾರೀ' ಆದೇಶಗಳು ಅಸಿಂಧು ಎನ್ನುವ ರಾಜ್ಯಪಾಲರ ಮಾತಿನ ಅರ್ಥವೇನು?

ಇನ್ನೊಂದು 'ಆದೇಶ', ಶ್ರೀನಗರದಲ್ಲಿ ಮಸೀದಿಗಳ ನಿರ್ವಹಣಾ ಸಮಿತಿಗಳ ವಿವರಗಳನ್ನು ಸಂಗ್ರಹಿಸಲು ಪೋಲೀಸರಿಗೆ ನಿರ್ದೇಶಿಸಲಾಗಿದೆ ಎಂಬುದು ಕೂಡ ಸುಳ್ಳು ಊಹಾಪೋಹವೇ ಎಂದೂ ತರಿಗಾಮಿ ಪ್ರಶ್ನಿಸಿದ್ದಾರೆ. ಸರಕಾರ ಈ ಗೊಂದಲವನ್ನು ನಿವಾರಿಸಬೇಕಾಗಿದೆ. ಮಾದಕದ್ರವ್ಯಗಳ ಪಿಡುಗನ್ನು ತಡೆಯಲು ಈ ಆದೇಶವನ್ನು ಹೊರಡಿಸಲಾಗಿದೆ ಎಂಬುದು ನಿಜವೇ? ಹಾಗಿದ್ದರೆ ಇದು ಶ್ರೀನಗರಕ್ಕೆ ಮಾತ್ರವೇ ಸೀಮಿತವಾಗಿರುವುದೇಕೆ ಮತ್ತು ಈಗ ಈ ತುರ್ತು ಏಕೆ? ಸರಕಾರದ ಉದ್ದೇಶ ಇದೇ ಆಗಿದ್ದರೆ ನಾಗರಿಕ ಸಮಾಜದ ಸದಸ್ಯರನ್ನು ವಿಶ್ವಾಸಕ್ಕೆ ತಗೊಂಡು ಸರಕಾರ ಈ ಕೆಲಸ ಮಾಡಬೇಕಲ್ಲವೇ?

ಈ ಎಲ್ಲ ಕಸರತ್ತುಗಳು ಯಾವ ಉದ್ದೇಶಕ್ಕಾಗಿ ಎಂದು ಜನ ತಿಳಿಯಬಯಸುತ್ತಾರೆ. ಉಗ್ರರ ಚಟುವಟಿಕೆ, ಕಲ್ಲೆಸೆತಗಳು ಮತ್ತು ಹಿಂಸಾಚಾರ ಕಡಿಮೆಯಾಗುತ್ತಿದೆ ಎಂದು ಸರಕಾರ ಹೇಳಿಕೊಳ್ಳುತ್ತಿರುವಾಗ ಕಾಶ್ಮೀರದಲ್ಲಿ ಹೆಚ್ಚುವರಿ ಅರೆಮಿಲಿಟರಿ ಪಡೆಗಳೇಕೆ? ಯಾಕೆ ಈ ರಂಗ ಪರೀಕ್ಷೆ?

"ಜನಗಳು ಈಗಾಗಲೇ ಹಿಂಸಾಚಾರಗಳಿಂದ ಸಂಕಟಗ್ರಸ್ತರಾಗಿದ್ದಾರೆ, ಒತ್ತಡಗಳಿಗೆ ಒಳಗಾಗಿದ್ದಾರೆ. ಈ ಭ್ರಮನಿರಸನ ಮತ್ತು ಹತಾಶೆಯ ಚಕ್ರದಿಂದ ಹೊರಬರಲು ವಿಶ್ವಾಸ ಮೂಡಿಸುವ ಕ್ರಮಗಳ ಅಗತ್ಯವಿದೆ. ಅದರ ಬದಲು ಮತ್ತೆ-ಮತ್ತೆ ಏಕೀ 'ಆಘಾತ ಶುಶ್ರೂಷೆ'(ಷಾಕ್ ಥೆರಪಿ)? ಬಹಳಷ್ಟಾಯಿತು, ಇನ್ನು ಸಾಕು, ಈ ಕಸರತ್ತುಗಳನ್ನು ನಿಲ್ಲಿಸಿ" ಎಂದು ಯೂಸುಫ್ ತರಿಗಾಮಿ ರಾಜ್ಯಪಾಲರನ್ನು ಆಗ್ರಹಿಸಿದ್ದಾರೆ

# ನವಂಬರ್ 25: ದಿಲ್ಲಿಯಲ್ಲಿ ಎನ್‌ಪಿಆರ್‌ಡಿ ಪ್ರತಿಭಟನಾ ಧರಣಿ

ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆ ಪಾಸಾಗಿ ಎರಡೂವರೆ ವರ್ಷಗಳಾಗಿದ್ದರೂ ಈ ಕಾಯ್ದೆಯಲ್ಲಿ ಹೇಳಿರುವ ವಿವಿಧ ಸಬಲೀಕರಣದ ಅಂಶಗಳ ಜಾರಿಯ ಬಗ್ಗೆ ಸರಕಾರದ ನಿಲುವು ಔದಾಸೀನ್ಯತೆಯಿಂದ ತುಂಬಿದೆ. ಹಲವು ರಾಜ್ಯಗಳು ಇನ್ನೂ ಈ ಕಾಯ್ದೆಯ ಜಾರಿಗೆ ನಿಯಮಾವಳಿಗಳನ್ನೂ ರೂಪಿಸಿಲ್ಲ. ಈ ಕಾಯ್ದೆಯ ಅಡಿಯಲ್ಲಿ ರಚಿಸಬೇಕಾದ ವಿವಿಧ ಸಮಿತಿ ಇತ್ಯಾದಿಗಳನ್ನು ಹೆಚ್ಚಿನ ರಾಜ್ಯಗಳಲ್ಲಿ ರಚಿಸಿಲ್ಲ. ಮುಖ್ಯ ಆಯುಕ್ತರು ಮುಂತಾದ ಹುದ್ದೆಗಳಿಗೆ ನೇಮಕಾತಿಗಳನ್ನೂ ಮಾಡಿಲ್ಲ ಎಂದು ಎರ್ನಾಕುಳಂನಲ್ಲಿ ಸಭೆ ಸೇರಿದ 'ರಾಷ್ಟ್ರೀಯ ಅಂಗವಿಕಲರ ಹಕ್ಕುಗಳ ವೇದಿಕೆ' (ಎನ್‌ಪಿಆರ್‌ಡಿ) ಕಾರ್ಯಕಾರಿ ಸಮಿತಿ ಬೇಸರ ವ್ಯಕ್ತಪಡಿಸಿದೆ.

ಬಜೆಟನಲ್ಲಿಯೂ ಅಂಗವಿಕಲರ ಪ್ರಶ್ನೆಗಳನ್ನು ಉಪೇಕ್ಷಿಸಲಾಗಿದೆ. ಈ ಕಾಯ್ದೆಯ ವಿವಿಧ ಅಂಶಗಳನ್ನು ಜಾರಿಗೊಳಿಸಲು ಅಗತ್ಯವಾದ ಹಣವನ್ನು ಬಜೆಟನಲ್ಲಿ ಕೊಟ್ಟಿಲ್ಲ. ಅಂಗವಿಕಲ ವ್ಯಕ್ತಿಗಳ ಸಬಲೀಕರಣ ಇಲಾಖೆಗೆ ನೀಡಿರುವ ಗ್ರಾಂಟ್‌ನಲ್ಲಿ ಕೇವಲ 134 ಕೋಟಿ ರೂ. ಏರಿಕೆಯಷ್ಟೇ ಆಗಿದೆ. ಈ ಹಲವಾರು ಪ್ರಶ್ನೆಗಳತ್ತ ಗಮನ ಸೆಳೆಯಲು ನವಂಬರ್ 25ರಂದು ದಿಲ್ಲಿಯಲ್ಲಿ 24 ಗಂಟೆಗಳ ಧರಣಿ ನಡೆಸಲು ಕಾರ್ಯಕಾರಿ ಸಮಿತಿ ನಿರ್ಧರಿಸಿದೆ.

ರಾಷ್ಟ್ರೀಯ ಶಿಕ್ಷಣ ಧೋರಣೆಯ ಕರಡಿನಲ್ಲೂ ಅಂಗ ವಿಕಲರ ವಿರುದ್ಧ ಈಗಿರುವ ಪಕ್ಷಪಾತ ಮುಂದುವರೆದಿದೆ. ಇಂತಹ ಮಹತ್ವದ ಧೋರಣೆ ರೂಪಿಸುವಾಗ ಅಂಗ ವಿಕಲರನ್ನು ಪ್ರತಿನಿಧಿಸುವ ಸಂಘಟನೆಗಳೊಡನೆ ಸಮಾಲೋಚಿಸಿಲ್ಲ ಮಾತ್ರವಲ್ಲ, ಸಂಬಂಧಪಟ್ಟ ಕೇಂದ್ರ ಸರಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣದ ಇಲಾಖೆಯೊಂದಿಗೂ ಸಮಾಲೋಚನೆ ನಡೆಸಿಲ್ಲ ಎಂದು ಕಾರ್ಯಕಾರಿ ಸಮಿತಿ ಖೇದ ವ್ಯಕ್ತಪಡಿಸಿದೆ. ವಿಶ್ವ ಸಂಸ್ಥೆಯ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿರ್ಣಯವನ್ನು ಮತ್ತು 2016ರ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆಯ ಅಂಶಗಳನ್ನೂ ಗಮನಕ್ಕೆ ತಗೊಂಡಿಲ್ಲ. ಶಿಕ್ಷಣದ ವ್ಯಾಪಾರೀಕರಣಕ್ಕೆ ಈ ಕರಡಿನಲ್ಲಿ ನೀಡಿರುವ ಒತ್ತು ಅಂಗ ವಿಕಲ ಮಕ್ಕಳ ಶಿಕ್ಷಣದ ಮೇಲೆ ಬಹಳಷ್ಟು ದುಷ್ಪರಿಣಾಮಗಳನ್ನು ಬೀರಲಿದೆ. ಶಿಕ್ಷಣದ ಹಕ್ಕು ಕಾಯ್ದೆ ಅಂಚಿಗೆ ಸರಿಸಲ್ಪಟ್ಟ ವಿಭಾಗಗಳಿಗೆ ಕೊಟ್ಟಿರುವ 25% ಮೀಸಲಾತಿಯನ್ನು ಈ ಕರಡು ತೆಗೆದುಹಾಕಿರುವುದನ್ನು ಕೂಡ ಎನ್‌ಪಿಆರ್‌ಡಿ ಬಲವಾಗಿ ವಿರೋಧಿಸಿದೆ.

ಅಂಗವಿಕಲ ವ್ಯಕ್ತಿಗಳಲ್ಲಿ ನಿರುದ್ಯೋಗ 65%ದಷ್ಟು ಇರುವುದರಿಂದ ಮತ್ತು ಖಾಸಗೀಕರಣದ ಪ್ರಮಾಣ ವಿಪರೀತವಾಗಿ ಹೆಚ್ಚುತ್ತಿರುವುದರಿಂದ ಖಾಸಗೀ ವಲಯಕ್ಕೂ ಮೀಸಲಾತಿಯನ್ನು ವಿಸ್ತರಿಸಬೇಕು ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಪ್ರಾತಿನಿಧ್ಯವನ್ನು ಕೊಡಬೇಕು ಎಂಬ ತನ್ನ ಬೇಡಿಕೆಯನ್ನು ಪುನರುಚ್ಚರಿಸಿರುವ ಎನ್‌ಪಿಆರ್‌ಡಿ ಕಾರ್ಯಕಾರಿ ಸಮಿತಿ ಈ ಕುರಿತಂತೆ ಎಲ್ಲ ರಾಜ್ಯ ಸರಕಾರಗಳಿಗೂ ಪತ್ರ ಬರೆಯಲು ಹಾಗೂ ಒಂದು ಪ್ರಚಾರಾಂದೋಲನವನ್ನು ಆರಂಭಿಸಲು ನಿರ್ಧರಿಸಿದೆ.

## ಅಕ್ಟೋಬರ್ 17, 2019ರಿಂದ ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನಾ ಶತಾಬ್ಧಿ

ಭಾರತ ಕಮ್ಯುನಿಸ್ಟ್ ಪಕ್ಷವನ್ನು ಅಕ್ಟೋಬರ್ 17, 1920ರಂದು ತಾಷ್ಕೆಂಟಿನಲ್ಲಿ ಸ್ಥಾಪಿಸಲಾಯಿತು. ಅಕ್ಟೋಬರ್ 17, 2019ರಿಂದ ಅಕ್ಟೋಬರ್ 17, 2020ರ ವರೆಗೆ ಈ ಶತಾಬ್ದಿಯ ಆಚರಣೆ ನಡೆಸಬೇಕು ಎಂದು ಪೊಲಿಟ್‌ಬ್ಯುರೊ ಇಡೀ ಪಕ್ಷಕ್ಕೆ ಕರೆ ನೀಡಿದೆ. ನಮ್ಮ ದೇಶದಲ್ಲಿ ಕಮ್ಯುನಿಸ್ಟ್ ಆಂದೋಲನದ ಶ್ರೀಮಂತ ಇತಿಹಾಸ, ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಅದರ ಕೊಡುಗೆಗಳು, ಮತ್ತು ಜನಗಳ ಬದುಕನ್ನು ಉತ್ತಮಪಡಿಸುವ ಸ್ವಾತಂತ್ರ್ಯೋತ್ತರ ಹೋರಾಟಗಳು ಹಾಗೂ ಕಾರ್ಮಿಕ ವರ್ಗದ, ರೈತಾಪಿಗಳ ಹಕ್ಕುಗಳಿಗೆ ಹೋರಾಟವನ್ನು ಎತ್ತಿ ತೋರಲಾಗುವುದು ಎಂದು ಅದು ಹೇಳಿದೆ.

(ಜುಲೈ 31 ರಂದು ನಡೆದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸಭೆಯ ಪೂರ್ಣ ಹೇಳಿಕೆ ಪುಟ 11–12 ರಲ್ಲಿದೆ)

# ತ್ರಿವಳಿ ತಲಾಖ್ ಮಸೂದೆಗೆ ಚರ್ಚೆಯಿಲ್ಲದೆ ಆತುರದ ಅಂಗೀಕಾರ –ಸಹಿ ಹಾಕದಿರಲು ರಾಷ್ಟ್ರಪತಿಗಳಿಗೆ ಎಐಡಿಡಬ್ಲ್ಯುಎ ಆಗ್ರಹ

ತ್ರಿವಳಿ ತಲಾಖ್ ಮಸೂದೆಯನ್ನು ರಾಜ್ಯಸಭೆಯಲ್ಲಿ ಆತುರಾತುರವಾಗಿ ಅಂಗೀಕರಿಸಲಾಗಿದೆ. ಇದನ್ನು ವಿರೋಧಿಸಿದ್ದ ಎನ್‌ಡಿಎ ಮಿತ್ರಪಕ್ಷಗಳಾದ ಜೆಡಿ(ಯು) ಮತ್ತು ಎಐಎಡಿಎಂಕೆ ಕೊನೆಗಳಿಗೆಯಲ್ಲಿ ಸಭಾತ್ಯಾಗ ಮಾಡುವ ಸಮಯಸಾಧಕ ಕ್ರಮ ಅನುಸರಿಸಿರುವುದರಿಂದ ಇದು ಸಾಧ್ಯವಾಯಿತು.

ಕುಟುಂಬ ಕಾನೂನಿಗೆ ಸಂಬಂಧಪಟ್ಟ ಎಲ್ಲ ವಿಷಯಗಳೂ ಸಿವಿಲ್ ವ್ಯಾಜ್ಯಗಳು. ಆದರೆ ಈ ಮಸೂದೆ ಒಂದು ಸಿವಿಲ್ ವ್ಯಾಜ್ಯವನ್ನು ಕ್ರಿಮಿನಲ್ ಮೊಕದ್ದಮೆಯಾಗಿ ಪರಿವರ್ತಿಸಿದೆ. ಆದ್ದರಿಂದ ಕಾನೂನಿನ ದೋಷವೂ ಇದರಲ್ಲಿದೆ. ವಾಸ್ತವವಾಗಿ ಇದರ ಹಿಂದಿರುವುದು ಕೋಮುವಾದಿ ಆಶಯ. ಇದು ದೇಶದಲ್ಲಿ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಹರಡಿಸುವ ಪ್ರಯತ್ನಗಳ ಸಂದರ್ಭದಲ್ಲಿ ಒಂದು ಕರಾಳ ಸ್ವರೂಪವನ್ನು ಪಡೆದಿದೆ. ಈ ಕಾರಣಕ್ಕಾಗಿ ಇದನ್ನು ವಿರೋಧಿಸಿಕೊಂಡು ಬಂದಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಇದನ್ನು ಒಂದು ಸ್ಥಾಯೀ ಸಮಿತಿಗೆ ಸಂಬಂಧಪಟ್ಟ ಎಲ್ಲರೊಂದಿಗೆ ಚರ್ಚಿಸಿ ಒಂದು ಉಪಯೋಗಕಾರಿಯಾದ ಮತ್ತು ಸರಿಯಾದ ಕಾಯ್ದೆ ರೂಪುಗೊಳ್ಳುವಂತೆ ಮಾಡಬೇಕು ಎಂಬ ಬೇಡಿಕೆಯನ್ನು ಸರಕಾರ ದುರಹಂಕಾರದಿಂದ ಧಿಕ್ಕರಿಸಿದೆ ಎಂದು ಟೀಕಿಸಿದೆ.

ಶಾಯರಾ ಬಾನೊ ಮೊಕದ್ದಮೆಯಲ್ಲಿ ಸುಪ್ರಿಂ ಕೋರ್ಟ್ ತ್ರಿವಳಿ ತಲಾಖ್ ಕಾನೂನುಬಾಹಿರ ಎಂದು ಈ ಮೊದಲೇ ತೀರ್ಪಿತ್ತಿರುವಾಗ, ಅದರಿಂದಾಗಿ ಮುಸ್ಲಿಂ ಮಹಿಳೆಯ ಹಕ್ಕುಗಳಿಗೆ ರಕ್ಷಣೆ ದೊರೆತಿರುವಾಗ ಇಂತಹ ಕಾಯ್ದೆಯ ಅಗತ್ಯವಾದರೂ ಏನಿತ್ತು? ಮುಸ್ಲಿಮ್ ಮಹಿಳೆ ಇದರಿಂದ ಮನೆಯೊಳಗೆ ಹಿಂಸಾಚಾರಕ್ಕೆ ಒಳಗಾದರೆ 498 ಎ ಸೆಕ್ಷನ್‌ನ ರಕ್ಷಣೆ ಇದೆ. ಆದರೆ ಅದನ್ನು ಬಲಪಡಿಸಬೇಕೆಂಬ ಆಗ್ರಹಗಳಿಗೆ ಸರಕಾರ ಸ್ಪಂದಿಸುತ್ತಿಲ್ಲ, ಮಾತ್ರವಲ್ಲ, ಅದನ್ನು ದುರ್ಬಲಗೊಳಿಸುವ ಪ್ರಯತ್ನಗಳೂ ನಡೆದಿವೆ ಎಂಬ ವಿರೋಧಾಭಾಸದತ್ತವೂ ಎಐಡಿಡಬ್ಲ್ಯುಎ ಗಮನ ಸೆಳೆದಿದೆ.

ಆದ್ದರಿಂದ ರಾಷ್ಟ್ರಪತಿಗಳು ಈ ಮಸೂದೆಗೆ ಅದು ಈಗಿರುವ ರೀತಿಯಲ್ಲಿ ಅದಕ್ಕೆ ಸಹಿ ಹಾಕಬಾರದು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ.




ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಸಂಪಾದಕೀಯ

# ಹೆಡೆ ಎತ್ತುತ್ತಿದೆ ದ್ವೇಷದ ಸರ್ಪ

'ನಾನು ದ್ವೇಷದ ರಾಜಕಾರಣ ಮಾಡುವುದಿಲ್ಲ' ಎನ್ನುತ್ತಾ ಗದ್ದುಗೆ ಏರಿದ ಬಿ.ಎಸ್. ಯಡಿಯೂರಪ್ಪ ಮಾಡಿದ ಮೊದಲ ಕೆಲಸ 'ಟಿಪ್ಪು ಜಯಂತಿ' ಆಚರಣೆಯನ್ನು ರದ್ದು ಪಡಿಸಿದ್ದು. ಯಡಿಯೂರಪ್ಪ ತುಂಬಾ ಅವಸರದಲ್ಲಿದ್ದಂತೆ ಭಾಸವಾಗುತ್ತದೆ. ರಾಜ್ಯದಲ್ಲಿ ಇರುವುದು ಯಡಿಯೂರಪ್ಪ ನೇತೃತ್ವದ ಏಕವ್ಯಕ್ತಿ ಸಚಿವ ಸಂಪುಟ. ಸದನದಲ್ಲಿ ಇರುವವರೆಲ್ಲರೂ ಶಾಸಕರೇ, ಅವರಾದರೂ ಟಿಪ್ಪು ಜಯಂತಿ ರದ್ದುಮಾಡಿದ ಸರ್ಕಾರದ ತೀರ್ಮಾನದ ಬಗ್ಗೆ ಚರ್ಚೆ ಮಾಡಬೇಡವೆ?

ಮೈಸೂರು ಹುಲಿ ಎಂದೇ ಹೆಸರುವಾಸಿಯಾಗಿದ ಟಿಪ್ಪು ಸುಲ್ತಾನ್ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡುತ್ತಾ ರಣರಂಗದಲ್ಲೇ ಮಡಿದ ಹುತಾತ್ಮ. ಸಂಘ ಪರಿವಾರದವರು ಆರೋಪಿಸುವಂತೆ ಆತ ಒಬ್ಬ ಮತಾಂಧನಾಗಿರಲಿಲ್ಲ. ಆತ ಆಧುನೀಕತೆಯನ್ನು ಮೈಗೂಡಿಸಿಕೊಂಡ ಒಬ್ಬ ಸಾಮ್ರಾಟನಾಗಿದ್ದನು. ಸಂಘ ಪರಿವಾರದವರು ಜನಾಂಗೀಯ ಹಂತಕ ಹಿಟ್ಲರ್‌ನನ್ನು ಗೌರವಿಸುತ್ತಾರೆ. ಆದರೆ ಟಿಪ್ಪು ಒಬ್ಬ ಮುಸಲ್ಮಾನ ಎಂಬ ಒಂದೇ ಕಾರಣಕ್ಕಾಗಿ ಆತನನ್ನು ದ್ವೇಷಿಸುತ್ತಾರೆ.

ಒಬ್ಬ ಅರಸನ ಇತಿಹಾಸವನ್ನು ನಾವು ಕೆದಕಿದರೆ, ಆತನಲ್ಲಿ ಮಾದರೀಯಾಗಬಲ್ಲ ಒಳ್ಳೆಯ ಗುಣಗಳು ಹಾಗೂ ಕೆಟ್ಟ ಪ್ರವೃತ್ತಿಗಳು ಒಟ್ಟಿಗೆ ನೋಡಸಿಗುತ್ತವೆ. ಅವುಗಳನ್ನು ವಸ್ತುನಿಷ್ಟವಾಗಿ ಅಧ್ಯಯನಮಾಡಿ ನಾವು ಸಂಬಂಧಪಟ್ಟ ವ್ಯಕ್ತಿಯ ಬಗ್ಗೆ ಒಂದು ಅಭಿಪ್ರಾಯಕ್ಕೆ ಬರಬಹುದು.

ಟಿಪ್ಪು ಲೂಟಿಕೋರ ಬ್ರಿಟಿಷರನ್ನು ದ್ವೇಷಿಸುತ್ತಿದ್ದನು. ಬ್ರಿಟಿಷರೊಂದಿಗೆ ಕೈಜೋಡಿಸುವ ತನ್ನ ಪ್ರಜೆಗಳನ್ನು ಆತ ಕಠಿಣ ಶಿಕ್ಷೆಗೆ ಒಳಪಡಿಸುತ್ತಿದ್ದನು. ಆದರೆ ಹಿಟ್ಲರ್‌ನಂತೆ ಒಂದು ಜಾತಿ ಜನಾಂಗದವರನ್ನು ದ್ವೇಷಿಸುತ್ತಿರಲಿಲ್ಲ. ತಾನು ಶ್ರಮಪಟ್ಟು ಕಟ್ಟಿ ಬೆಳೆಸಿದ ಸಾಮ್ರಾಜ್ಯ ಬ್ರಿಟಿಷರ ಪಾಲಾಗುವುದನ್ನು ತಡೆಯಲು ಹೋರಾಡುತ್ತಿದ್ದನು. ಕಿತ್ತೂರ ರಾಣಿ ಚೆನ್ನಮ್ಮರಂತೆ ಆತ ತನ್ನ ಸಂಸ್ಥಾನವನ್ನು ರಕ್ಷಿಸಲು ಬ್ರಿಟಿಷರ ವಿರುದ್ಧ ತನ್ನ ಜೀವದ ಹಂಗು ತೊರೆದು ಕಾದಾಡಿದನು. ಮುಸ್ಲಿಂ ದ್ವೇಷದ ಒಂದೇ ಕಾರಣಕ್ಕಾಗಿ ಆರೆಸ್ಸೆಸ್ ನಾಡಿನ ಜನರಲ್ಲಿ ಟಿಪ್ಪು ದ್ವೇಷವನ್ನು ಹರಡುತ್ತಿದೆ. ಆರೆಸ್ಸೆಸ್ಸಿನ ರಾಜಕೀಯ ತೋಳಿನಂತಿರುವ ಬಿಜೆಪಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಂದ್ದೆ ತಡ, ಟಿಪ್ಪು ಸುಲ್ತಾನ್ ಜಯಂತಿಯ ಆಚರಣೆಯನ್ನು ಅದು ರದ್ದುಪಡಿಸಿದೆ.

ಕರ್ನಾಟಕದಲ್ಲಿ ಬಿಜೆಪಿಯವರ ಕುದುರೆ ವ್ಯಾಪಾರದಿಂದಾಗಿ ರಾಜ್ಯದಲ್ಲಿ ಮತ್ತೆ ದ್ವೇಷದ ರಾಜಕಾರಣ ಹೆಡೆ ಎತ್ತುವಂತಾಗಿದೆ. ಮುಸಲ್ಮಾನರ ಮೇಲೆ ಅವರ ದಾಳಿ ದೌರ್ಜನ್ಯ ಹೆಚ್ಚಾಗಲಿದೆ. ಕೇಂದ್ರದಲ್ಲಿಯೂ, ರಾಜ್ಯದಲ್ಲಿಯೂ ಮತಾಂಧದ ಸರ್ಕಾರಗಳೇ ಅಧಿಕಾರದಲ್ಲಿ ಇರುವುದರಿಂದ ಇವರ ದ್ವೇಷ ಸಾಧನೆಯನ್ನು ಕೇಳುವವರೇ ಯಾರಿಲ್ಲದ ಪರಿಸ್ಥಿತಿ ಬರಲಿದೆ.

ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದ ಬೆನ್ನಲ್ಲೇ ರಾಜ್ಯಾದ್ಯಂತ ವಿವಿಧ ಗಲಭೆ ಪ್ರಕರಣಗಳಲ್ಲಿ ಹಿಂದೂ ಕಾರ್ಯಕರ್ತರ ವಿರುದ್ಧ ದಾಖಲಾಗಿರುವ ಮೊಕದ್ದಮೆಗಳನ್ನು ವಾಪಸ್ ಪಡೆಯಲು ಬಿಜೆಪಿ ಸರ್ಕಾರ ಮುಂದಾಗಿದೆ. ದೇಶದಾದ್ಯಂತ ಜೈಲುಗಳಲ್ಲಿ ಮುಗ್ಧ ಮುಸ್ಲಿಂ ಯುವಕರು ತಾವು ನಿರಪರಾಧಿಗಳೆಂದು ಸಾಬೀತುಪಡಿಸಲಾಗದೆ ಹತಾಶರಾಗಿ. ಕಾಲ ಕಳೆಯುತ್ತಿದ್ದಾರೆ. ಇತ್ತ ಗಲಭೆಗಳಲ್ಲಿ ಪ್ರತ್ಯಕ್ಷ ಪಾಲ್ಗೊಂಡ ಹಿಂದುತ್ವ ಕಾರ್ಯಕರ್ತರು ಮೊಕದ್ದಮೆಗಳಿಂದ ಬಿಡುಗಡೆ ಹೊಂದುತ್ತಾರೆ. ಇದೆಂತಹ ನ್ಯಾಯ?

'ಜೈ ಶ್ರೀ ರಾಮ್' ಎಂದು ಹೇಳಲು ನಿರಾಕರಿಸಿದ ಮುಸಲ್ಮಾನನನ್ನು ಹೊಡೆದು ಸಾಯಿಸಲಾಗುತ್ತದೆ. ವಿಶ್ವದಲ್ಲೇ ಅತಿ ಹೆಚ್ಚು ಗೋಮಾಂಸವನ್ನು ರಫ್ತು ಮಾಡಿ ಲಾಭಗಳಿಸುತ್ತಿರುವ ಮೋದಿ ಸರ್ಕಾರ ಹಸಿವು ನೀಗಿಸಲು ಅದೇ ಮಾಂಸವನ್ನು ತಿಂದವನನ್ನು ಸಾಮೂಹಿಕವಾಗಿ ಹೊಡೆದು ಸಾಯಿಸಲಾಗುತ್ತದೆ. ಎಲ್ಲಿಯ ವರೆಗೆ ಸಂಘ ಪರಿವಾರ ಇಂತಹ ಮತೀಯ ದ್ವೇಷದ ಕನ್ನೋಟವನ್ನು ತ್ಯಜಿಸುವುದಿಲ್ಲವೋ, ಅಲ್ಲಿಯವರೆಗೆ ದೇಶದಲ್ಲಿ ಭಯೋತ್ಪಾದನೆ ನಿಲ್ಲಲಾರದು.

ಇದೇ ಜುಲೈ 30 ರಂದು ವಿಧಾನಸಭೆಯಲ್ಲಿ ನೂತನ ಸ್ಪೀಕರ್‌ರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಸ್ವಾರಸ್ಯಕರವಾದ ಚರ್ಚೆಯೊಂದು ನಡೆದಿರುವುದು ಸಾರ್ವಜನಿಕ ಗಮನ ಸೆಳೆದಿದೆ. ಶಿರಸಿ ವಿಧಾನಸಭಾ ಕ್ಷೇತ್ರದ ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ ಅವಿರೋಧವಾಗಿ ಆಯ್ಕೆಯಾದರು. ನೂತನ ಸ್ಪೀಕರ್‌ರನ್ನು ಅಭಿನಂದಿಸಿ ಮಾತನಾಡಿದ ಹಿಂದಿನ ಸ್ಪೀಕರ್ ರಮೇಶ್‌ಕುಮಾರ್ 'ಮನುಸ್ಮೃತಿಯನ್ನು ಪ್ರತಿಪಾದಿಸುವ ಮತ್ತು ಅಂಬೇಡ್ಕರ್‌ವಾದದ ವಿರುದ್ಧ ದಿಕ್ಕಿನಲ್ಲಿರುವ ವಿಚಾರಧಾರೆಯ ಹಿನ್ನೆಲೆಯಿಂದ ಬಂದಿದ್ದೀರಿ. ನಿಮ್ಮ ಪರಿವಾರದ ಪ್ರಭಾವದಿಂದ ಹೊರ ಬರಬೇಕು, ಸಂವಿಧಾನಕ್ಕೆ ನಿಷ್ಠೆ ಇರಬೇಕು' ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸ್ಪೀಕರ್ ಕಾಗೇರಿಯವರು, 'ಸಂವಿಧಾನವನ್ನು ಭಗವದ್ಗೀತೆ ಎಂದೇ ನಂಬಿದ್ದೇನೆ. ಆದರ ಚೌಕಟ್ಟಿನಲ್ಲೇ ಕಾರ್ಯನಿರ್ವಹಿಸ್ತೇನೆ' ಎಂದರು. ಮುಖ್ಯಮಂತ್ರಿ ಯಡಿಯೂರಪ್ಪ, ಸ್ಪೀಕರ್ ಕಾಗೇರಿ ಹಾಗೂ ಆಳುವ ಪಕ್ಷದ ಹಲವಾರು ಶಾಸಕರು ಆರೆಸ್ಸೆಸ್, ಎಬಿವಿಪಿ ಹಿನ್ನೆಲೆಯೊಂದಿಗೆ ಬಂದವರಾಗಿದ್ದು ರಾಜ್ಯದಲ್ಲಿ ಕೋಮು ಸಾಮರಸ್ಯ ಕದಡುವ ಸಾಧ್ಯತೆಗಳೇ ಹೆಚ್ಚು. ಹಾಗಾಗದಿರಲಿ ಎಂಬುದೇ ರಮೇಶ್ ಕುಮಾರ್‌ರವರ ಸ್ಪಷ್ಟ ಮಾತುಗಳ ಹಿಂದಿನ ಕಳಕಳಿ. ●

## ಮಹಾದಾಯಿ ನ್ಯಾಯಾಧಿಕರಣದ ತೀರ್ಪಿನ ಅನ್ವಯ ರಾಜ್ಯಕ್ಕೆ ನೀರನ್ನು ಬಳಕೆ ಮಾಡುವ ಕುರಿತು...

(ಮಹಾದಾಯಿ ಕಳಸಾ ಬಂಡೂರಿ ಹೋರಾಟ ಸಮನ್ವಯ ಸಮಿತಿಯ ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪನವರಿಗೆ ಬರೆದ ಬಹಿರಂಗ ಪತ್ರ)

ತಾವುಗಳು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿ ನಾಲ್ಕನೆಯ ಬಾರಿಗೆ ಅಧಿಕಾರವಹಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ" ಮಹದಾಯಿ ಕಳಸಾ ಬಂಡೂರಿ ಹೋರಾಟ ಸಮನ್ವಯ ಸಮಿತಿ" ಇಂದ ಹೃದಯಪೂರ್ವಕವಾಗಿ ಅಭಿನಂದಿಸುತ್ತೇವೆ. ತಾವುಗಳು ತಮ್ಮ ರಾಜಕೀಯ ಜೀವನದಲ್ಲಿ ಜನಪರ, ರೈತಪರ ಹೋರಾಟಗಳಿಂದ ಇಂದು ಈ ಮಟ್ಟಕ್ಕೆ ಬೆಳೆದದ್ದು ಹೆಮ್ಮೆಯ ಸಂಗತಿ, ಮಾನ್ಯರಲ್ಲಿ ಈ ಮೂಲಕ ನಾವು ಕೇಳಿಕೊಳ್ಳುವದೇನೆಂದರೆ ಮಹದಾಯಿ ಹೋರಾಟ ನಿರಂತರವಾಗಿ ನಡೆದು 4 ವರ್ಷಗಳನ್ನು ಪೂರೈಸಿ 5 ನೇ ವರ್ಷದಲ್ಲಿ ಪಾದಾರ್ಪಣೆ ಮಾಡಿದ್ದು ಈ ಹೋರಾಟದ ಸಂದರ್ಭದಲ್ಲಿ 12 ಜನ ರೈತರು ತಮ್ಮ ಪ್ರಾಣ ತ್ಯಾಗ ಮಾಡಿದರು, ನೂರಾರು ಜನ ರೈತರು ಮತ್ತು ಹೋರಾಟಗಾರರು ಪೋಲಿಸರ ಲಾಠಿ ಏಟಿಗೆ ಬಲಿಯಾಗಿ ನರಕಯಾತನೆ ಅನುಭವಿಸಿದರು. ಇಷ್ಟಾದರೂ ಕೂಡಾ ಈ ಭಾಗದ ಜನರ ದಶಕಗಳ ಬೇಡಿಕೆ ಈಡೇರದೇ ಇರುವದು ತುಂಬಾ ನೋವಿನ ಸಂಗತಿಯಾಗಿದೆ. ಆದರೂ ಕೂಡಾ ನಮ್ಮನ್ನಾಳುವ ನಾಯಕರುಗಳ ಇಚ್ಚಾಶಕ್ತಿಯ ಕೊರತೆ ಇದರಲ್ಲಿ ಎದ್ದು ಕಾಣುತ್ತಿರುವದು ದುರ್ದೈವ.

ಆದ ಕಾರಣ ತಮ್ಮಲ್ಲಿ ನಾವು ವಿನಂತಿಸಿಕೊಳ್ಳುವುದೇನೆಂದರೆ, ತಾವುಗಳು ಬಹುದಿನಗಳಿಂದ ಈ ಹೋರಾಟವನ್ನು ಗಮನಿಸಿದ್ದೀರಿ, ಸರ್ವಪಕ್ಷಗಳ, ಮಠಾಧೀಶರ ಮತ್ತು ರೈತರ ನಿಯೋಗದಲ್ಲಿ ಸನ್ಮಾನ್ಯ ಪ್ರಧಾನಿಗಳ ಬಳಿ ಹೋದಾಗ ಯೋಜನೆಯ ಅಗತ್ಯತೆಯನ್ನು ಪ್ರಧಾನಿಗಳಿಗೆ ಮನವರಿಕೆ ಮಾಡಿಕೊಟ್ಟದ್ದನ್ನು ನಾವು ಮರೆಯುವಂತಿಲ್ಲ. ಆದ್ದರಿಂದ ಕರ್ನಾಟಕದಲ್ಲಿ, ಗೋವಾದಲ್ಲಿ, ಮಹಾರಾಷ್ಟ್ರದಲ್ಲಿ ಮತ್ತು ಕೇಂದ್ರದಲ್ಲಿ ಬಿಜೆಪಿ ಪಕ್ಷದ ಸರಕಾರಗಳಿರುದರಿಂದ ಈ ಯೋಜನೆಯನ್ನು ಸೌಹಾರ್ದತೆಯಿಂದ ಬಗೆಹರಿಸಲು ಇದು ಪರಿಪಕ್ವ ಸಮಯ ಕಾರಣ ತಾವುಗಳು ಆದಷ್ಟು ಬೇಗನೆ ಕೇಂದ್ರ ಸರಕಾರದಿಂದ ಅಧಿಸೂಚನೆ ಹೊರಡಿಸಿ ಕಾಮಗಾರಿ ಪ್ರಾರಂಭಿಸಿ ಉತ್ತರ ಕರ್ನಾಟಕದ ಜನರ ನಾಲ್ಕು ದಶಕಗಳ ಕನಸನ್ನು ನನಸು ಮಾಡಿ ಇತಿಹಾಸದ ಪುಟಗಳಲ್ಲಿ ದಾಖಲಾಗುವ ಈ ಮಹತ್ವದ ಕಾರ್ಯ ಮಾಡಬೇಕೆಂದು ಈ ಮೂಲಕ ಉತ್ತರ ಕರ್ನಾಟಕದ ರೈತರು, ಕನ್ನಡಪರ, ಮತ್ತು ಹೋರಾಟದಲ್ಲಿ ಪಾಲ್ಗೊಂಡ ಎಲ್ಲ ಸಂಘ ಸಂಸ್ಥೆಗಳ ಪರವಾಗಿ ತಮ್ಮಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇವೆ

ಅಮೃತ ಇಜಾರಿ, ಸಂಚಾಲಕ, ಮಹದಾಯಿ ಕಳಸಾ ಬಂಡೂರಿ ಸಮನ್ವಯ ಸಮತಿ. ಶಿವಣ್ಣ, ಹುಬ್ಬಳ್ಳಿ, ಮಹೇಶ ಪತ್ತಾರ, ಕುಮಾಸ್ವಾಮಿ ಹಿರೇಮಠ, ಹೇಮನಗೌಡ್ರ ಬಸನಗೌಡ್ರ, ಸಚಿನ್ ಗಾಣಿಗೇರ, ವಿನಯ ಗೋಕಾವಿ, ಅಶೋಕ ಹಾದಿಮನಿ, ದ್ಯಾಮಣ್ಣ ಜಂತಿ. ●

## ಬಡವರಿಗೆ ನಿವೇಶನ ಹಂಚಿಕೆಗೆ ಹಕ್ಕೊತ್ತಾಯ

ಅರ್ಜಿ ಸಲ್ಲಿಸಿದ ಬಡವರಿಗೆ ನಿವೇಶನ ಹಂಚಿಕೆದಮಾಡಬೇಕೆಂದು ಆಗ್ರಹಿಸಿ ಸಿಪಿಎಂ ಕಾರ್ಯಕರ್ತರು 25 ಜುಲೈ 2019 ರಂದು ಹೊಸಪೇಟೆ ನಗರಸಭೆ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ನಂತರ ಪೌರಾಯುಕ್ತ ವಿ. ರಮೇಶ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಸಿಪಿಎಂ ಮುಖಂಡ ಆರ್. ಭಾಸ್ಕರ್ ರೆಡ್ಡಿ, 'ನಿವೇಶನ ಕೊಡಬೇಕೆಂದು ಎಂಟು ಸಾವಿರ ಬಡವರು 2015 ರಲ್ಲಿ ನಗರಸಭೆಗೆ ಅರ್ಜಿ ಸಲ್ಲಿಸಿದ್ದಾರೆ. ಆದರೆ, ಇದುವರೆಗೆ ಅ ನಿಟ್ಟಿನಲ್ಲಿ ಯಾವುದೇ ಪ್ರಗತಿಯಾಗಿಲ್ಲ. ಸಾಮಾನ್ಯ ಸಭೆಯಲ್ಲೂ ಈ ಕುರಿತು ಚರ್ಚಿಸಿಲ್ಲ. ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆಬಡವರ ಬಗ್ಗೆ ಎಷ್ಟು ಕಾಳಜಿ ಇದೆ ಎನ್ನುವುದು ಇದು ತೋರಿಸುತ್ತದೆ' ಎಂದರು.



'ನಗರ ಸೇರಿದಂತೆ ತಾಲ್ಲೂಕಿನಾದ್ಯಂತ ಒಟ್ಟು ಒಂದು ಲಕ್ಷ ಜನರಿಗೆ ನಿವೇಶನ ಇಲ್ಲ. ನಗರಸಭೆ ಸಾವಿರ ಎಕರೆ ಭೂಮಿ ಖರೀದಿಸಿ, ನಿವೇಶನ ಮಾಡಿ ಅವುಗಳನ್ನು ಹಂಚಿಕೆ ಮಾಡಬೇಕು. ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಮನೆ ನಿರ್ಮಿಸಿಕೊಡುವ ಯೋಜನೆಗಳು ಜಾರಿಗೆ ಬಂದಿವೆ. ಫಲಾನುಭವಿಗಳಿಗೆ ನಿವೇಶನ ಕೊಟ್ಟ ನಂತರ ಆ ಯೋಜನೆಗಳಡಿ ಮನೆ ನಿರ್ಮಿಸಿಕೊಡಬೇಕು' ಎಂದು ಹಕ್ಕೊತ್ತಾಯ ಮಾಡಿದರು. 'ನಗರಸಭೆ ಫಾರಂ ನಂಬರ್ 3 ಸೇರಿದಂತೆ ಯಾವ ಕೆಲಸಗಳು ಸರಿಯಾಗಿ ಆಗುತ್ತಿಲ್ಲ. ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದೆ. ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ಕೂಡಲೇ ಅದಕ್ಕೆ ಕಡಿವಾಣ ಹಾಕಬೇಕು. ಸಕಾಲ ಯೋಜನೆಯಡಿ ನಿಗದಿಪಡಿಸಿದ ದಿನಾಂಕದೊಳಗೆ ಜನರ ಕೆಲಸ ಮಾಡಿಕೊಡಬೇಕು' ಎಂದು ಒತ್ತಾಯಿಸಿದರು.

ಮುಖಂಡರಾದ ಆರ್.ಎಸ್. ಬಸವರಾಜ, ಎಂ.ಜಂಬಯ್ಯ ನಾಯಕ, ಎಂ. ಗೋಪಾಲ್, ಎನ್. ಯಲ್ಲಾಲಿಂಗ, ವಿ. ಸ್ವಾಮಿ, ಶಕುಂತಲಮ್ಮ, ಕೆ. ನಾಗರತ್ನ, ಎ. ಕರುಣಾನಿಧಿ ಇದ್ದರು. ●




# ಉಡುಪಿಯಲ್ಲಿ ಭವಿಷ್ಯ ನಿಧಿ ಪಿಂಚಣಿದಾರರ ಧರಣಿ

ವರದಿ : ವಾ.ಉ.

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ಉಡುಪಿ ತಾಲೂಕು ಭವಿಷ್ಯನಿಧಿ ಪಿಂಚಣಿದಾರರ ಸಂಘದ ನೇತೃತ್ವದಲ್ಲಿ ಜುಲೈ 31ರಂದು ಉಡುಪಿಯ ಭವಿಷ್ಯನಿಧಿ ಕಚೇರಿಯ ಎದುರು ಪಿಂಚಣಿದಾರರು ಧರಣಿ ಸತ್ಯಾಗ್ರಹ ನಡೆಸಿದರು.

ಕೇಂದ್ರ ಸರಕಾರದ ಭವಿಷ್ಯನಿಧಿ ಇಲಾಖೆಯಲ್ಲಿ ಸಾವಿರಾರು ಕೋಟಿ ರೂಪಾಯಿ ಜಮೆಯಾಗುತ್ತಿದ್ದರೂ, ದುಡಿದು ನಿವೃತ್ತರಾದ ಪಿಂಚಣಿದಾರರಿಗೆ ಜುಜುಬಿ ಪಿಂಚಣಿ ನೀಡಲಾಗುತ್ತಿದೆ. ಜಮೆಯಾದ ಹಣದ ಬಡ್ಡಿಯಿಂದಲೇ ಯೋಗ್ಯ ಪಿಂಚಣಿ ನೀಡಬಹುದಾಗಿದೆ. ಭವಿಷ್ಯನಿಧಿ ವಾಪಾಸು ಪಡೆಯಲು ಮತ್ತು ಪಿಂಚಣಿ ಪಡೆಯಲು ಕಂಪೆನಿ ಕಾರ್ಡಿನಲ್ಲಿರುವ ಜನ್ಮ ದಿನಾಂಕವನ್ನು ದೃಢೀಕರಿಸಬೇಕು. ಹೊರತು ಆಧಾರ ಕಾರ್ಡಿನಲ್ಲಿರುವ ಜನ್ಮದಿನಾಂಕವನ್ನು ದೃಢೀಕರಿಸಬೇಕೇ ಹೊರತು ಆಧಾರ ಕಾರ್ಡಿನಲ್ಲಿರುವ ಜನ್ಮದಿನಾಂಕವನ್ನು ಪರಿಗಣಿಸಬಾರದು. ಪಿಂಚಣಿ ಹಣವನ್ನು ಕನಿಷ್ಠ ರೂ. 6000/–ಕ್ಕೆ ಹೆಚ್ಚಿಸಬೇಕು ಮತ್ತು ಕಾಲಕಾಲಕ್ಕೆ ಬೆಲೆಯೇರಿಕೆಗೆ ಅನುಗುಣವಾಗಿ ತುಟ್ಟಿಭತ್ಯೆ ಹೆಚ್ಚಿಸಬೇಕೆಂದು ಧರಣಿ ನಿರತರು ಆಗ್ರಹಿಸಿದರು.

ಧರಣಿಯನ್ನುದ್ದೇಶಿಸಿ ಭವಿಷ್ಯನಿಧಿ ಪಿಂಚಣಿದಾರರ ಸಂಘದ ರಾಜ್ಯ ಉಪಾಧ್ಯಕ್ಷ ಎಚ್. ನರಸಿಂಹ ಮಾತನಾಡಿದರು. ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ಪಿ. ವಿಶ್ವನಾಥ ರೈ, ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಸಂಘದ ಉಡುಪಿ ತಾಲೂಕು ಸಂಘದ ಅಧ್ಯಕ್ಷೆ ಲಲಿತಾ, ಕಾರ್ಯದರ್ಶಿ ಉಮೇಶ್ ಕುಂದರ್, ಖಜಾಂಚಿ ಸುಂದರ, ಕಾರ್ಮಿಕ ಮುಖಂಡರಾದ ಕೆ. ಲಕ್ಷ್ಮಣ್, ಕವಿರಾಜ್, ನಳಿನಿ, ಸಂಜೀವ ಉಪಸ್ಥಿತರಿದ್ದರು. ಸಭೆಯ ಬಳಿಕ ಉಡುಪಿ ಕಾರ್ಮಿಕ ಭವಿಷ್ಯನಿಧಿ ಕಚೇರಿಯ ಆಯುಕ್ತರ ಮೂಲಕ ಪ್ರಧಾನ ಮಂತ್ರಿಗೆ ಮನವಿ ಸಲ್ಲಿಸಲಾಯಿತು.

# ಸಿಐಟಿಯು ಮೂಡಬಿದ್ರಿ ವಲಯ ಸಮ್ಮೇಳನ :



'1990ರ ದಶಕದ ನಂತರ ದೇಶದೆಲ್ಲೆಡೆ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳು ಹೆಚ್ಚೆಚ್ಚು ಜಾರಿಗೊಳ್ಳುತ್ತಿದ್ದು, ಪ್ರಸ್ತುತ ಕಾಲಘಟ್ಟದಲ್ಲಿ ತೀವ್ರ ವೇಗವನ್ನು ಪಡೆಯುತ್ತಿದೆ. ಅಮೇರಿಕನ್ ಸಾಮ್ರಾಜ್ಯಶಾಹಿಗಳು ಭಾರತವನ್ನು ಕಿರಿಯ ಪಾಲುದಾರರನ್ನಾಗಿಸುವ ಮೂಲಕ ಜಾಗತಿಕ ಬಂಡವಾಳಶಾಹಿಗಳು ಭಾರತವನ್ನು ತನ್ನ ಮಾರುಕಟ್ಟೆಯನ್ನಾಗಿ ನಿರೂಪಿಸಿ, ದೇಶದ ಸಾರ್ವಜನಿಕ ಉದ್ದಿಮೆಗಳನ್ನೇ ನಾಶಗೊಳಿಸಿ ಕೋಟ್ಯಾಂತರ ಸಂಖ್ಯೆಯ ದುಡಿಯುವ ವರ್ಗದ ಬದುಕಿಗೆ ಕೊಡಲಿಪೆಟ್ಟನ್ನು ನೀಡಿದ್ದಾರೆ. ಅದಕ್ಕೆ ಪೂರಕವಾಗಿ ಕೇಂದ್ರದ ನರೇಂದ್ರಮೋದಿ ಸರಕಾರದ ನೋಟು ರದ್ದತಿ, ಜಿಎಸ್‌ಟಿ ಯಂತಹ ಕ್ರಮಗಳಿಂದಾಗಿ ಲಕ್ಷಾಂತರ ಕೈಗಾರಿಕೆಗಳು ಮುಚ್ಚಿದ್ದು, ಕಾರ್ಮಿಕ ವರ್ಗ ಉದ್ಯೋಗಗಳನ್ನು ಕಳೆದುಕೊಂಡು ನಿರುದ್ಯೋಗದ ಕೂಪಕ್ಕೆ ಬಿದ್ದಿದೆ. ಕಳೆದ 45 ವರ್ಷಗಳಲ್ಲೇ ನಿರುದ್ಯೋಗ ಸಮಸ್ಯೆಯು ಇಂದು ಭೀಕರವಾಗಿ ಕಾಡುತ್ತಿದೆ. ಜೀವನಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿದೆ. ಶಿಕ್ಷಣ, ಆರೋಗ್ಯ, ರೈಲ್ವೇ, ರಕ್ಷಣೆ ಸೇರಿದಂತೆ ಎಲ್ಲಾ ರಂಗಗಳನ್ನು ಹಾಗೂ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸುವ ಮೂಲಕ ದೇಶದ ಅರ್ಥಿಕತೆಯನ್ನೇ ವಿನಾಶದತ್ತ ಕೊಂಡೊಯ್ಯುತ್ತಿದೆ' ಎಂದು ಸಿಐಟಿಯು ಕರ್ನಾಟಕ ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಅಭಿಪ್ರಾಯ ಪಟ್ಟರು.

ಅವರು ಮೂಡಬಿದ್ರೆಯ ಸಮಾಜ ಮಂದಿರದ ಕಾಂ.ಬಿ. ಮಾಧವ ವೇದಿಕೆಯಲ್ಲಿ ಜರುಗಿದ ಸಿಐಟಿಯು 3ನೇ ಮೂಡಬಿದ್ರೆ ವಲಯ ಸಮ್ಮೇಳನವನ್ನು ಉದ್ಘಾಟಿಸುತ್ತಾ ಈ ಮಾತುಗಳನ್ನು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಿಐಟಿಯು ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು ಮಾತನಾಡುತ್ತಾ, 'ದೇಶದ ಸ್ವಾತಂತ್ರ್ಯ, ಸಮಗ್ರತೆ, ಸೌಹಾರ್ದತೆಯನ್ನು ಉಳಿಸಿ ಬೆಳೆಸುವಲ್ಲಿ ಹಾಗೂ ಇಡೀ ದೇಶವನ್ನು ಒಂದಾಗಿ ನಿಲ್ಲುವಂತೆ ಮಾಡುವಲ್ಲಿ ಕಾರ್ಮಿಕ ವರ್ಗದ ಪಾತ್ರವೇ ಪ್ರಧಾನವಾಗಿದೆ. ಅಂತಹ ಕಾರ್ಮಿಕ ವರ್ಗದ ಮಧ್ಯೆ ಕೋಮುವಾದದ ವಿಷಬೀಜವನ್ನು ಬಿತ್ತಿ ಅನ್ಯೆಕ್ಯತೆಯನ್ನು ಸೃಷ್ಟಿಸುವ ಮೂಲಕ ದೇಶವನ್ನೇ ಒಡೆಯಲು ವ್ಯವಸ್ಥಿತ ಪಿತೂರಿ ನಡೆಯುತ್ತಿದೆ. ಧಾರ್ಮಿಕ ಘೋಷಣೆಗಳನ್ನು ಕೂಗುವ ಮೂಲಕ ಭಾವನಾತ್ಮಕ ವಿಚಾರಗಳನ್ನು ಕೆರಳಿಸಿ ದೇಶ ಪ್ರೇಮದ ಸರ್ಟಿಫಿಕೇಟ್ ನೀಡಲಾಗುತ್ತಿದೆ. ಹೀಗಾಗಿ ಇಡೀ ದೇಶವೇ ಬಲಪಂಥೀಯ ಫ್ಯಾಸಿಸ್ಟ್ ವಿಚಾರಧಾರೆಯತ್ತ ವಾಲುವ ಮುಖಾಂತರ ದೇಶದ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯೇ ಅಪಾಯದ ಅಂಚಿನಲ್ಲಿದೆ. ಇಂತಹ ಸಂದರ್ಭದಲ್ಲಿ ದೇಶವನ್ನು ಉಳಿಸಲು ಇಡೀ ಕಾರ್ಮಿಕ ವರ್ಗ ಒಂದಾಗಿ ನಿಲ್ಲಬೇಕಾಗಿದೆ. ಕಾರ್ಮಿಕ ವರ್ಗದ ಸಂಕೇತವಾದ ಕೆಂಬಾವುಟವನ್ನು ಇನ್ನಿಲ್ಲವಾಗಿಸಲು ದೇಶದ ಬಂಡವಾಳಶಾಹಿಗಳು ವ್ಯವಸ್ಥಿತ ಹುನ್ನಾರ ನಡೆಸುತ್ತಿದ್ದಾರೆ. ದುಡಿಯುವ ವರ್ಗ ಎಲ್ಲಿಯವರೆಗೆ ಜೀವಂತವಾಗಿ ಇರುತ್ತೋ ಅಲ್ಲಿಯವರೆಗೆ ಕೆಂಬಾವುಟ ಸದಾ ಕಾಲ ಆಕಾಶದೆತ್ತರಕ್ಕೆ ಹಾರಾಡುತ್ತಿರುತ್ತದೆ' ಎಂದು ಹೇಳಿದರು.

ಕರ್ನಾಟಕ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಯಾದವ ಶೆಟ್ಟಿಯವರು ಮಾತನಾಡುತ್ತಾ, 'ದೇಶವನ್ನಾಳುವ ನರೇಂದ್ರ ಮೋದಿ ಸರಕಾರದ ಜನವಿರೋಧಿ ನೀತಿಗಳಿಂದ ದೇಶಕ್ಕೆ ಅನ್ನ ನೀಡುವ ರೈತ, ಸಂಪತ್ತನ್ನು ಸೃಷ್ಟಿಸುವ ಕಾರ್ಮಿಕ, ಸೇವೆ ಮಾಡುವ ನೌಕರ, ಕೂಲಿ ಕೆಲಸ ಮಾಡುವ ಶ್ರಮಜೀವಿ ವರ್ಗ ತೀವ್ರ ಸಂಕಷ್ಟಕ್ಕೆ ಒಳಗಾಗಿದೆ. ದುಡಿಯುವ ವರ್ಗದ ಐಕ್ಯ ಚಳುವಳಿಯಿಂದ ಮಾತ್ರವೇ ಸರಕಾರದ ನೀತಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯ' ಎಂದು ಹೇಳಿದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಸಿಐಟಿಯು ದ.ಕ. ಜಿಲ್ಲಾ ಕಾರ್ಯದರ್ಶಿ ರಾಧಾ ಮೂಡಬಿದ್ರೆಯವರು ಮಾತನಾಡುತ್ತಾ, 'ಮುಂದಿನ ದಿನಗಳಲ್ಲಿ ಮೂಡಬಿದ್ರೆ ತಾಲೂಕಿನಲ್ಲಿ ವಿವಿಧ ವಿಭಾಗದ ಕಾರ್ಮಿಕರನ್ನು ಸಂಘಟಿಸುವ ಮೂಲಕ ಬಲಿಷ್ಠವಾದ ಕಾರ್ಮಿಕ ಚಳುವಳಿಯನ್ನು ಕಟ್ಟಲು ಮುಂದಾಗಬೇಕೆಂದು' ಹೇಳಿದರು.

ಪ್ರಾರಂಭದಲ್ಲಿ ಸಿಐಟಿಯು ಹಿರಿಯ ಮುಖಂಡರಾದ ಸುಂದರ ಶೆಟ್ಟಿಯವರು ಧ್ವಜಾರೋಹಣ ಮಾಡುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಸಿಐಟಿಯು ಮೂಡಬಿದ್ರೆ ವಲಯ ಅಧ್ಯಕ್ಷರಾದ ರಮಣಿ ಮೂಡಬಿದ್ರೆಯವರು ವಹಿಸಿದ್ದರು. ವೇದಿಕೆಯಲ್ಲಿ ಸಿಐಟಿಯು ಮೂಡಬಿದ್ರೆ ವಲಯದ ಮುಖಂಡರಾದ ಶಂಕರ ವಾಲ್ಪಾಡಿ, ಗಿರಿಜಾ, ಲಕ್ಷ್ಮೀ, ಮಹಮ್ಮದ್ ತಸ್ರೀಫ್, ವಿಶ್ವನಾಥ ಮುಂತಾದವರು ಉಪಸ್ಥಿತರಿದ್ದರು.

ಬಳಿಕ ನಡೆದ ಪ್ರತಿನಿಧಿ ಅಧಿವೇಶನದಲ್ಲಿ ಹಲವಾರು ಸಂಘಟನಾತ್ಮಕ ವಿಷಯಗಳ ಬಗ್ಗೆ ಚರ್ಚಿಸಿ, ಮುಂದಿನ 3 ವರ್ಷಗಳ ಅವಧಿಗೆ ನೂತನ ಸಮಿತಿಯನ್ನು ಸಮ್ಮೇಳನವು ಆಯ್ಕೆಗೊಳಿಸಿತು. ನೂತನ ಅಧ್ಯಕ್ಷರಾಗಿ ರಮಣಿ ಮೂಡಬಿದ್ರೆ, ಪ್ರಧಾನ ಕಾರ್ಯದರ್ಶಿಯಾಗಿ ರಾಧಾ ಮೂಡಬಿದ್ರೆ, ಖಜಾಂಚಿಯಾಗಿ ಮಹಮ್ಮದ್ ತಸ್ರೀಫ್ ರವರು ಸರ್ವಾನುಮತದಿಂದ ಆಯ್ಕೆಗೊಂಡರು.

–ರಾಧಾ ಮೂಡಬಿದ್ರೆ






## ಸಿಐಟಿಯು ಗುರುಪುರ ವಲಯ ಸಮ್ಮೇಳನ :

# ದೇಶವನ್ನು ಕಾಯುವ ಚೌಕಿದಾರರಿಂದಲೇ ದೇಶವನ್ನು ಮಾರಾಟ ಮಾಡುವ ಹುನ್ನಾರ – ವಸಂತ ಆಚಾರಿ

'ಕಳೆದ 5 ವರ್ಷಗಳ ಅವಧಿಯಲ್ಲಿ ನಿರಂತರವಾಗಿ ಕಾರ್ಮಿಕ ವಿರೋಧಿ ನೀತಿಗಳನ್ನು ಜಾರಿಗೊಳಿಸಿ ಜನಸಾಮಾನ್ಯರ ಬದುಕಿಗೆ ತೀವ್ರ ಸಂಕಷ್ಟವನ್ನು ತಂದೊಡ್ಡಿದ ನರೇಂದ್ರ ಮೋದಿ ಸರಕಾರವು ಪ್ರತೀ ಹಂತದಲ್ಲೂ ಜನತೆಗೆ ಮೋಸಗೊಳಿಸುತ್ತಾ ಬಂದಿದೆ. ನೋಟು ಅಮಾನ್ಯೀಕರಣದ ಹೆಸರಿನಲ್ಲಿ ಭ್ರಷ್ಟಾಚಾರ ತಡೆಗಟ್ಟುವುದಾಗಿ, ಭಯೋತ್ಪಾದನೆ ನಿಲ್ಲಿಸುವುದಾಗಿ, ಕಳ್ಳ ನೋಟು ಪತ್ತೆ ಹಚ್ಚುವುದಾಗಿ, ವಿದೇಶದಲ್ಲಿರುವ ಕಪ್ಪು ಹಣ ತರುವುದಾಗಿ ಬೊಗಳೆ ಬಿಟ್ಟ ಪ್ರಧಾನಿಯವರು ಅದ್ಯಾವುದನ್ನು ಎಳ್ಳಷ್ಟೂ ಸಾಧಿಸಲು ಸಾಧ್ಯವಾಗಿಲ್ಲ. ಬದಲಾಗಿ ಲಕ್ಷಾಂತರ ಉದ್ಯೋಗಗಳು ನಷ್ಟವಾಗಿ ಇಡೀ ಕಾರ್ಮಿಕ ವರ್ಗವೇ ಸಂಕಷ್ಟದ ಸುಳಿಗೆ ಸಿಲುಕಿದೆ. ಒಂದೇ ದೇಶ ಒಂದೇ ತೆರಿಗೆಯ ಹೆಸರಿನಲ್ಲಿ ಜಿಎಸ್‌ಟಿ ಯನ್ನು ಜಾರಿಗೊಳಿಸಿ ವಿಪರೀತ ತೆರಿಗೆಯನ್ನು ವಿಧಿಸುವ ಮೂಲಕ ದುಡಿಯುವ ವರ್ಗಕ್ಕೆ ಹಾಗೂ ಮಧ್ಯಮ ವರ್ಗದ ಜನತೆಗೆ ಇನ್ನಷ್ಟು ಹೊರೆಯನ್ನು ಹೊರಿಸಿದೆ. ಕಾರ್ಮಿಕ ಕಾನೂನುಗಳ ತಿದ್ದುಪಡಿಯಿಂದಾಗಿ ಸವಲತ್ತುಗಳನ್ನೇ ನಿರಾಕರಣೆ ಮಾಡಲಾಗುತ್ತಿದೆ. ದೇಶದ ಕಲ್ಪವೃಕ್ಷದಂತಿರುವ ಸಾರ್ವಜನಿಕ ಉದ್ದಿಮೆಗಳನ್ನು ಕಾರ್ಪೋರೇಟ್ ಕಂಪೆನಿಗಳಿಗೆ ಮಾರಲು ಹೊರಟಿದೆ. ಇದರಿಂದಾಗಿ ಇಡೀ ದೇಶವನ್ನು ಕಾಯುವ ಕಾವಲುಗಾರ ತಾನೆಂದು ಬೀಗುವ ನರೇಂದ್ರ ಮೋದಿಯವರು ಇಂದು ಇಡೀ ದೇಶವನ್ನೇ ಮಾರಲು ಹೊರಟಿರುವುದು ಆತಂಕಕಾರಿ ಸಂಗತಿಯಾಗಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕಾರ್ಮಿಕ ವರ್ಗ ಒಂದಾಗಿ ನಿಂತು ಪ್ರಬಲ ಚಳುವಳಿಯನ್ನು ರೂಪಿಸಿ ದೇಶವನ್ನು ಉಳಿಸಲು ಕಟಿಬದ್ಧರಾಗಬೇಕಾಗಿದೆ' ಎಂದು ➔

# ಪಂಜಿಮೊಗರು ಡಿವೈಎಫ್ಐ ನಿಂದ ಡೆಂಗ್ಯೂ ವಿರುದ್ಧ ಅಭಿಯಾನ



ಜಿಲ್ಲಾಡಳಿತ, ನಗರ ಪಾಲಿಕೆ, ಆರೋಗ್ಯ ಇಲಾಖೆಯ ಡೆಂಗ್ಯೂ ವಿರುದ್ದ ಅಭಿಯಾನದ "ಡೆಂಗೆ ಡ್ರೈವ್ ಡೇ" ದಿನವಾದ ಇಂದು ಡಿವೈಎಫ್ಐ ಪಂಜಿಮೊಗರು ಘಟಕದ ವತಿಯಿಂದ ಪಂಜಿಮೊಗರು ವಾರ್ಡ್‌ನಾದ್ಯಂತ ವಾಹನ ಮೈಕ್ ಪ್ರಚಾರ, ಮನೆ ಮನೆ ಭೇಟಿ ಮಾಡಿ ಜನಜಾಗ್ರತಿ ನಡೆಸಲಾಯಿತು.

ಪ್ರಚಾರ ಅಭಿಯಾನವನ್ನು ವಿದ್ಯಾನಗರದಲ್ಲಿ ಸ್ಥಳೀಯ ಕಾರ್ಪೊರೇಟರ್ ದಯಾನಂದ ಶೆಟ್ಟಿ ಉದ್ಘಾಟಿಸಿದರು. ಡೆಂಗ್ಯೂ ಜಿಲ್ಲೆಯಾದ್ಯಂತ ವ್ಯಾಪಕವಾಗಿ ಹರಡುತ್ತಿದೆ. ಡೆಂಗ್ಯೂ ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವುದೇ ಸದ್ಯ ನಮ್ಮ ಜವಾಬ್ದಾರಿ ಮನೆ ಸುತ್ತಮುತ್ತ ಹಿತ್ತಲಿನಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳವುದು, ಟೈರ್, ಬಾಟಲ್ ಮುಂತಾದವುಗಳನ್ನು ತೆರವುಗೊಳಿಸಿ ಸೊಳ್ಳೆಗಳು ಸಂತಾನೋತ್ಪತ್ತಿ ನಡೆಸದಂತೆ ಜಾಗ್ರತೆ ವಹಿಸಿಬೇಕು... ಉಪಯೋಗಕ್ಕಿಲ್ಲದ ಪಾತ್ರೆಗಳನ್ನು ಮಗುಚಿ ಹಾಕಬೇಕು... ಬಳಕೆಯ ನೀರು ಸಂಗ್ರಹಿಸುವ ಪಾತ್ರೆಗಳನ್ನು ಮುಚ್ಚಿಡಬೇಕೆಂದು ತಿಳಿಸಿದರು.. ಸೊಳ್ಳೆಗಳು ಕಚ್ಚದಂತೆ ಎಚ್ಚರ ವಹಿಸುವುದು ಸೊಳ್ಳೆ ನಿರೋಧಕ, ಸೊಳ್ಳೆ ಪರದೆ ಇತ್ಯಾದಿಗಳನ್ನು ಬಳಸಿ ನಮ್ಮನ್ನು ನಾವು ಕಾಪಾಡಿಕೊಳ್ಳುವ ಅಗತ್ಯತೆ ಇದೆ ಎಂದರು ಅಭಿಯಾನದ ಭಾಗವಾಗಿ ಮನೆ ಮನೆ ಭೇಟಿ, ಸೊಳ್ಳೆ ಉತ್ಪತ್ತಿಯಾಗುವ ಕುರಿತು ಮಾಹಿತಿ, ಸೊಳ್ಳೆ ಬೆಳೆಯುತ್ತಿದ್ದ ಪ್ರದೇಶಗಳ ಸ್ವಚ್ಛತೆ ನಿಂತ ನೀರನ್ನು ತೆರವುಗೊಳಿಸಲಾಯಿತು... ವಾರ್ಡ್ನಾದ್ಯಂತ ವಾಹನ ಮೂಲಕ ಧ್ವನಿವರ್ದಕದಲ್ಲಿ ಪ್ರಚಾರ ನಡೆಸಲಾಯಿತು.. ಪ್ರಚಾರ ಅಭಿಯಾನದ ಮುಂದಾಳತ್ವವನ್ನು ಡಿವೈಎಫ್ಐ ಪಂಜಿಮೊಗರು ಘಟಕದ ಅನಿಲ್ ಡಿಸೋಜ, ಖಲೀಲ್, ಮುಸ್ತಾಫ, ಹನುಮಂತ, ಆಕಾಶ್, ಶರಣ್‌ದೀಪ್ ಇನ್ನಿತರರು ಇದ್ದರು.





# ಕಟ್ಟಡ ಕಾರ್ಮಿಕ ಸಂಘದ ಕಚೇರಿ ಉದ್ಘಾಟನೆ ಮತ್ತು ಕಾರ್ಮಿಕರಿಗೆ ಅಧ್ಯಯನ ತರಬೇತಿ



ಇಂದು ಉಡುಪಿ ಜಿಲ್ಲೆಯ ಬೈಂದೂರು ತಾಲೂಕಿನ ಕಟ್ಟಡ ಕಾರ್ಮಿಕ ಸಂಘ(CWFI)ದ ನೂತನ ಕಚೇರಿ ಉದ್ಘಾಟನಾ ಸಮಾರಂಭ ಹಾಗೂ ಕಾರ್ಮಿಕರಿಗೆ ಅಧ್ಯಯನ ಶಿಭಿರವನ್ನು ನೂತನ ಕಚೇರಿಯಲ್ಲಿ ಏರ್ಪಡಿಸಲಾಗಿತ್ತು. ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ ಸಂಘದ ಕಚೇರಿಯನ್ನು ಉದ್ಘಾಟಿಸಿ ಕಟ್ಟಡ ಕಾರ್ಮಿಕರ ಪರಿಸ್ಥಿತಿ, ಇರುವ ಸೌಲಭ್ಯಗಳು, ಮೋದಿ ಸರಕಾರ ಜಾರಿ ಮಾಡುತ್ತಿರುವ ಸಾಮಾಜಿಕ ಸುರಕ್ಷತಾ ಕಾಯ್ದೆಯ ಪರಿಣಾಮಗಳು ಹಾಗೂ ಸಂಘಟನೆ ಮಹತ್ವ ಕುರಿತು ಉಪನ್ಯಾಸ ನೀಡಿದರು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಶಂಕರ್ ಸಭೆಯನ್ನು ಉದ್ಘಾಟಿಸಿ ಮಾತನಾಡಿ ಬೈಂದೂರು ಪ್ರದೇಶದಲ್ಲಿ ಕಾರ್ಮಿಕ ಚಳವಳಿಯಲ್ಲಿ ಬಲಿಷ್ಟಗೊಳಿಸಲು ಮತ್ತು ದುಡಿಯುವ ವರ್ಗದ ರಾಜಕೀಯವನ್ನು ಜನರ ಮಧ್ಯೆ ಪ್ರಚಾರ ಮಾಡಲು ಕರೆ ನೀಡಿದರು. ಸಿಐಟಿಯು ಕುಂದಾಪುರ ತಾಲೂಕು ಅಧ್ಯಕ್ಷರಾದ ಹೆಚ್. ನರಸಿಂಹ, ಕೃಷಿಕೂಲಿಕಾರರ ಸಂಘದ ನಾಗರತ್ನ, ಅಕ್ಷರ ದಾಸೋಹ ನೌಕರರ ಸಂಘದ ಜಯಶ್ರೀ ಪಡುವರಿ, ಅಂಗವಿಕಲರ ಸಂಘದ ಜಿಲ್ಲಾಧ್ಯಕ್ಷ ಮಂಜುನಾಥ ಹೆಬ್ಬಾರ ಮೊದಲಾದವರು ಶುಭಕೋರಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ರಾಜೀವ ಪಡುಕೋಣೆ ವಹಿಸಿದ್ದರು. ಕಾರ್ಯದರ್ಶಿ ಗಣೇಶ ತೊಂಡೆಮಕ್ಕಿ ಎಲ್ಲರನ್ನು ಸ್ವಾಗತಿಸಿದರು ಉಪಾಧ್ಯಕ್ಷರಾದ ವೆಂಕಟೇಶ ಕೋಣಿ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಕೊನೆಯಲ್ಲಿ ಶ್ರೀಧರ ಉಪ್ಪುಂದ ವಂದನೆ ಸಲ್ಲಿಸಿದರು.

**ವರದಿ : ವೆಂಕಟೇಶ ಕೋಣಿ**



# ಡಿವೈಎಫ್ಐ ಬಿ.ಸಿ ರಸ್ತೆ ಘಟಕ ಸಮ್ಮೇಳನ

ಯುವಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳೆದಾಗ ಮೂಲಭೂತವಾದ ತಡೆದು ದೇಶವನ್ನು ರಕ್ಷಿಸಲು ಸಾಧ್ಯವಿದೆ ಎಂದು ಡಿವೈಎಫ್ಐ ತಾಲೂಕು ಉಪಾಧ್ಯಕ್ಷ ಸುರೇಶ್ ಕಲ್ಲಾಗರ ಜುಲೈ 30 ಕುಂದಾಪುರ ಬಿ.ಸಿ. ರಸ್ತೆ ಘಟಕ ಆಶೀರ್ವಾದ ಹಾಲ್ ನಲ್ಲಿ ಸಮ್ಮೇಳನ ಉಧ್ಘಾಟಿಸಿ ಮಾತನಾಡಿದರು.

ಘಟಕ ಕಾರ್ಯದರ್ಶಿ ರವಿ ವಿ.ಎಂ ವಾರ್ಷಿಕ ವರದಿ ಮಂಡಿಸಿದರು. ಸ್ಥಳೀಯ ಸಮಸ್ಯೆಗಳ ಕುರಿತು ಚರ್ಚಿಸಿ ಪರಿಹಾರಕ್ಕೆ ಆಗ್ರಹಿಸಲಾಯಿತು. ಸಮ್ಮೇಳನದ ಅಧ್ಯಕ್ಷತೆ ಘಟಕ ಅಧ್ಯಕ್ಷ ಮಂಜುನಾಥ ಶೋಗನ್ ವಹಿಸಿದರು. ವೇದಿಕೆಯಲ್ಲಿ ಶೇಖರ ಡಿ, ಸಂತೋಷ ಕಲ್ಲಾಗರ ಇದ್ದರು.

➔ ಸಿಐಟಿಯು ಕರ್ನಾಟಕ ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಕಾರ್ಮಿಕ ವರ್ಗಕ್ಕೆ ಕರೆ ನೀಡಿದರು.

ಅವರು ಕೈಕಂಬದಲ್ಲಿರುವ ಶ್ರೀರಾಮ ಸಭಾಂಗಣದ ಕಾಂ. ಬಿ. ಮಾಧವ ವೇದಿಕೆಯಲ್ಲಿ ಜರುಗಿದ ಸಿಐಟಿಯು 3ನೇ ಗುರುಪುರ ವಲಯ ಸಮ್ಮೇಳನವನ್ನು ಉದ್ಘಾಟಿಸುತ್ತಾ, ಈ ಮಾತುಗಳನ್ನು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಿಐಟಿಯು ದ.ಕ. ಜಿಲ್ಲಾಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ, 'ದ.ಕ.ಜಿಲ್ಲೆಯಲ್ಲಿ ಕಾರ್ಮಿಕ ವರ್ಗದ ಚಳುವಳಿಗೆ ದೀರ್ಘ ಕಾಲದ ಇತಿಹಾಸವಿದ್ದು, ವಿವಿಧ ವಿಭಾಗದ ಕಾರ್ಮಿಕರ ನೋವು ನಲಿವುಗಳಿಗೆ ಸ್ಪಂದಿಸಿದ ಸಿಐಟಿಯು ಪರಿಣಾಮಕಾರಿಯಾದ ಹೋರಾಟಗಳನ್ನು ಸಂಘಟಿಸಿ ಕಾರ್ಮಿಕ ವರ್ಗದ ಪಕ್ಷಪಾತಿಯಾಗಿ ದುಡಿದಿದೆ. ಮುಂದಿನ ದಿನಗಳಲ್ಲಿ ಕಾರ್ಮಿಕ ವರ್ಗದ ಚಳುವಳಿಯನ್ನು ಪ್ರಬಲಗೊಳಿಸಲು ತಲುಪದಿರುವ ಕಾರ್ಮಿಕರನ್ನು ತಲುಪಲು ಸಾಧ್ಯವಾಗಬೇಕಾಗಿದೆ' ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಸಿಐಟಿಯು ದ.ಕ. ಜಿಲ್ಲಾ ಉಪಾಧ್ಯಕ್ಷರಾದ ಯು.ಬಿ. ಲೋಕಯ್ಯರವರು ಮಾತನಾಡುತ್ತಾ, 'ಆಳುವ ವರ್ಗದ ನೀತಿಗಳಿಂದಾಗಿ ಕಂಗೆಟ್ಟಿರುವ ಕಾರ್ಮಿಕ ವರ್ಗದ ಆಕ್ರೋಶ ಭುಗಿಲೆದ್ದು ಸಮಾಜದ ಬದಲಾವಣೆಗೆ ನಾಂದಿ ಹಾಡಬೇಕೆಂದು' ಆಶಯ ವ್ಯಕ್ತಪಡಿಸಿದರು.

ಪ್ರಾರಂಭದಲ್ಲಿ ಸಿಐಟಿಯು ಗುರುಪುರ ವಲಯಾಧ್ಯಕ್ಷರಾದ ಗಂಗಯ್ಯ ಅಮೀನ್ ರವರು ಧ್ವಜಾರೋಹಣ ಮಾಡುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಿದರು. ವೇದಿಕೆಯಲ್ಲಿ ಸಿಐಟಿಯು ಗುರುಪುರ ವಲಯ ಪ್ರಧಾನ ಕಾರ್ಯದರ್ಶಿ ಸದಾಶಿವದಾಸ್, ಸಿಐಟಿಯು ದ.ಕ.ಜಿಲ್ಲಾ ಸಮಿತಿ ಸದಸ್ಯರಾದ ವಸಂತಿ ಕುಪ್ಪೆಪದವು, ನೋಣಯ್ಯ ಗೌಡರವರು ಉಪಸ್ಥಿತರಿದ್ದರು.

**–ಸದಾಶಿವದಾಸ್**



## ಏಜೆನ್ಸಿದಾರರ ಮತ್ತು ಚಂದಾದಾರರ ಗಮನಕ್ಕೆ

ಏಜೆನ್ಸಿದಾರರಿಂದ ದೊಡ್ಡ ಮೊತ್ತದ ಪತ್ರಿಕೆಯ ಹಣ ಬಾಕಿಯಿದ್ದು ಪತ್ರಿಕೆಯನ್ನು ಹೊರ ತರುವುದು ಅಸಾಧ್ಯವಾಗಿದೆ. ಹೆಚ್ಚಿನ ಏಜೆನ್ಸಿ ಬಾಕಿ ಹಣವನ್ನು ಉಳಿಸಿಕೊಂಡಿರುವವರು ತಕ್ಷಣವೇ ಬಾಕಿಯನ್ನು ಪಾವತಿ ಮಾಡದಿದ್ದರೆ ಪ್ರತಿಕೆಯನ್ನು ಮುದ್ರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಿಮ್ಮಿಂದ ಬರಬೇಕಾದ ಬಾಕಿ ಹಣವನ್ನು ಕೂಡಲೇ ಕಳುಹಿಸಬೇಕೆಂದು ಕೋರಲಾಗಿದೆ.

ಅನೇಕ ನಮ್ಮ ವಾರ್ಷಿಕ ಚಂದಾದಾರರ ಚಂದಾ ಅವಧಿ ಮುಗಿದಿದ್ದು ಅವರು ಕೂಡಲೇ ವಾರ್ಷಿಕ ಚಂದಾ ಪಾವತಿ ಮಾಡಿ ಚಂದಾಗಳನ್ನು ನವೀಕರಿಸಬೇಕೆಂದು ಕೋರುತ್ತೇವೆ.

**–ಸಂಪಾದಕರು**



# ಪೊನ್ನಂಪೇಟೆ ತಾಲೂಕು ಗ್ರಾಮ ಪಂಚಾಯತ್ ನೌಕರರ ಸಮಾವೇಶ

ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ (ಸಿಐಟಿಯು) ಪೊನ್ನಂಪೇಟೆ ತಾಲೂಕು ಸಮಾವೇಶವು ದಿನಾಂಕ 12 ಜುಲೈ 2019 ರಂದು ಪೊನ್ನಂಪೇಟೆ ಗ್ರಾಮ ಪಂಚಾಯಿತಿ ಸಭಾಂಗಣದಲ್ಲಿ ನಡೆಯಿತು. ಸಭೆಗೆ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ (ಸಿಐಟಿಯು) ರಾಜ್ಯ ಕಾರ್ಯದರ್ಶಿ ಜಿ. ರಾಮಕೃಷ್ಣ ರವರು ಪಾಲ್ಗೊಂಡು ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತ ಗ್ರಾಮ ಪಂಚಾಯಿತಿ ನೌಕರರ ಸಂಘದ ನಿರಂತರವಾದ ಹೋರಾಟದ ಭಾಗವಾಗಿ ನೌಕರರ ವೇತನವನ್ನು ಹೆಚ್ಚಿಸಲು ಸಾಧ್ಯವಾಗಿದೆ. 1985ರಲ್ಲಿ ಪ್ರಾರಂಭವಾದ ಗ್ರಾಮ ಪಂಚಾಯತ್ ನೌಕರರ ಸಂಘ, ಕಾರ್ಮಿಕರ ವಿವಿಧ ಬೇಡಿಕೆಗಳಿಗಾಗಿ ತ್ಯಾಗಮಯವಾದ ಹೋರಾಟಕದ ಫಲವಾಗಿ ಹಲವಾರು ಸವಲತ್ತುಗಳನ್ನು ಪಡೆಯಲು ಸಾಧ್ಯವಾಗಿದೆ. 3000 ಸಾವಿರವಿದ್ದ ಬಿಲ್ ಕಲೆಕ್ಟರ್ ವೇತನ 13,680 ಹೇರಿಕೆ ಮಾಡಲು ಸಾಧ್ಯವಾಗಿದೆ. ಇನ್ನಿತರ ಕಾರ್ಮಿಕರ ವೇತನವು ಸಹ ಹೆಚ್ಚಿಸಲು ಸಾಧ್ಯವಾಗಿದೆ. ಬಿಲ್ ಕಲೆಕ್ಟರ್ ನಿಂದ 80 ರಷ್ಟು ಕಾರ್ಯದರ್ಶಿಯಾಗಿ, ಬೆರಳಚ್ಚು–ಕ್ಲರ್ಕಗಳಿಗೆ 20 ಶೆ. ಭಡ್ತಿ ಸಾಧ್ಯವಾಗಿದೆ. ಗ್ರಾಮ ಪಂಚಾಯತ್ ನೌಕರಿಗೆ ಪಿಂಚಣಿ ಕೊಡಿಸಲು ಸಾಧ್ಯವಾಗಿದೆ. ಇನ್ನೂ ಮುಂದಿನ ದಿನಗಳಲ್ಲಿ ಹಲವಾರು ಬೇಡಿಕೆಗಳಿಗಾಗಿ ಹೋರಾಟ ತೀವ್ರಗೊಳಿಸಬೇಕಾಗಿದ್ದು, ಸಂಘಟನೆಯನ್ನು ಬಲಗೊಳಿಸಲು ಕರೆ ನೀಡಿದರು. ಜಿಲ್ಲಾ ಅಧ್ಯಕ್ಷ ಪಿ.ಆರ್. ಭರತ್ ರವರು ಸಭೆಯಲ್ಲಿ ಹಾಜರಿದ್ದು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ವೇದಿಕೆಯಲ್ಲಿ ಮಡಿಕೇರಿ ತಾಲೂಕು ಸಮಿತಿ ಪದಾಧಿಕಾರಿ ಜತ್ತಪ್ಪ ಉಪಸ್ಥಿತರಿದ್ದರು. ಬಿಲ್ ಕಲೆಕ್ಟರ್ ನಿಂದ ಭಡ್ತಿ ಹೊಂದಿದ 8 ಜನರನ್ನು ಸನ್ಮಾನಿಸಲಾಯಿತು. ನೂತನ ಪೊನ್ನಂಪೇಟೆ ತಾಲೂಕು ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಕೆ.ಜೆ.ಹರೀಶ್, ಕಾರ್ಯದರ್ಶಿಯಾಗಿ ಟಿ.ಜಿ. ಸಜಿತ, ಖಜಾಂಚಿಯಾಗಿ ಜಮುನ, 15 ಜನರ ಸಮಿತಿಯನ್ನು ರಚಿಸಲಾಯಿತು. ●

# ಸೋಮವಾರ ಪೇಟೆ ತಾಲೂಕು ಗ್ರಾಮ ಪಂಚಾಯತ್ ನೌಕರರ ಸಮಾವೇಶ

ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘ (ಸಿಐಟಿಯು ಸಂಯೋಜಿತ) ಸೋಮವಾರ ಪೇಟೆ ತಾಲೂಕು ಸಮಾವೇಶವು ಮೂರ್ತಿ ರವರ ಅಧ್ಯಕ್ಷತೆ ಯಲ್ಲಿ ನಡೆಯಿತು.

ಸಮಾವೇಶವನ್ನು ಜಿಲ್ಲಾ ಅಧ್ಯಕ್ಷ ಪಿ.ಆರ್. ಭರತ್ ಉದ್ಘಾಟಿಸಿ ಮಾತನಾಡಿ 1985ರಲ್ಲಿ ಎನ್.ಕೆ. ಉಪಾಧ್ಯಾಯ ರವರ ನೇತೃತ್ವದಲ್ಲಿ ಅಲ್ಲವಾರು ವರ್ಷದ ದೀರ್ಘ ಹೋರಾಟದ ಭಾಗವಾಗಿ ಇಂದು ನೌಕರರು ವಿವಿಧ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವಾಗಿದ್ದು ಇನ್ನೂ ಅಲ್ಲವು ಬೇಡಿಕೆಗಳಿಗಾಗಿ ಹೋರಾಟವು ಇನ್ನಷ್ಟು ಬಲಿಷ್ಠ ವಾಗಿ ಕಟ್ಟಿಬೆಳಸಲು ಸಂಘಟನೆ ಯನ್ನು ಬಲಪಡಿಸಬೇಕಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಶನಿವಾರ ಸಂತೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯಾದ ತಮ್ಮಯ್ಯ ಆಚಾರ್ಯ, ಆಲೂರು ಸಿದ್ದಾಪುರ ಸಿ.ಐ.ಟಿ.ಯು ಅಧ್ಯಕ್ಷರಾದ ಚೆನ್ನಕೇಶರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಿರಂಗಾಲ ಗ್ರಾಮ ಪಂಚಾಯತ್ನ ಕುಮಾರ್, ಬೆಟ್ಟದಳ್ಳಿ ಗ್ರಾಮ ಪಂಚಾಯತಿಯ ಮಂಜಪ್ಪ, ಶಾಂತಳ್ಳಿ ಪಂಚಾಯತಿಯ ಕೃಷ್ಣಪ್ಪ,ದುಂಡಳ್ಳಿ ಪಂಚಾಯಿತಿಯ ದೇವರಾಜ್, ನಿಡ್ತ ಪಂಚಾಯತಿಯ ಧರ್ಮಪ್ಪರವರು ಬಿಲ್ ಕಲೆಕ್ಟರ್ ಹುದ್ದೆಯಿಂದ ಕಾರ್ಯದರ್ಶಿ ಹುದ್ದೆಗೆ ಭಡ್ತಿಹೊಂದಿದ್ದು ಇವರುಗಳಿಗೆ ಬೀಳ್ಕೊಡಲಾಯಿತು.

ಸಮಾವೇಶದಲ್ಲಿ ಅಧ್ಯಕ್ಷರಾಗಿ ನವೀನ್, ಕಾರ್ಯದರ್ಶಿ ವಸಂತ್, ಖಜಾಂಚಿಯಾಗಿ ಮೂರ್ತಿ ರವರನೊಳಗೊಂಡ 13 ಜನರ ಸೋಮವಾರ ಪೇಟೆ ತಾಲೂಕು ಸಮಿತಿಯನ್ನು ರಚಿಸಲಾಯಿತು. ●



# ಉಚಿತ ಆರೋಗ್ಯ ಮಾಹಿತಿ ತಪಾಸಣೆ ಶಿಬಿರ



ಕುಂದಾಪುರ: 30 ಜುಲೈ 2019 ಆರೋಗ್ಯ ಕಾಪಾಡಿಕೊಳ್ಳಲು ವೈದ್ಯರು ಬೇಕಾಗಿಲ್ಲ ಆದರೆ ಅನಾರೋಗ್ಯಪೀಡಿತರಾದಾಗ ಅವಶ್ಯಕವಾಗಿ ವೈದ್ಯರ ಸಲಹೆ ಪಡೆದು ಗುಣಮುಖರಾಗಬೇಕು. ಸರಕಾರಿ ಆಸ್ಪತ್ರೆಯಿಂದ ರೋಗ ತಡೆಗಟ್ಟುವ ಬಗ್ಗೆ ಆರೋಗ್ಯ ಕಾಪಾಡಿಕೊಳ್ಳಲು ಹಲವಾರು ಕಾರ್ಯಕ್ರಮಗಳಲ್ಲಿ ಮಾಹಿತಿ ನೀಡುತ್ತಾ ಮಾತನಾಡಿದರು.



ಅವರು ಕುಂದಾಪುರದ ಬಿ.ಸಿ ರಸ್ತೆ ಘಟಕ ಮತ್ತು ಸಾರ್ವಜನಿಕ ಆಸ್ಪತ್ರೆ ಸಹಯೋಗದಲ್ಲಿ ಆಶೀರ್ವಾದ ಹಾಲ್ ನಲ್ಲಿ ಜರುಗಿದ ಉಚಿತ ಪೈಲೇರಿಯ ಮತ್ತು ಮಧುಮೇಹ ತಪಾಸಣಾ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.

ಸಮಾಜದಲ್ಲಿ ಪ್ರತಿಯೊಬ್ಬರು ಆರೋಗ್ಯವಂತರಾಗಿರಿಸಲು ಜಾಗ್ರತೆಗೊಳಿಸಲು ಸಂಘಸಂಸ್ಥೆಗಳು ಮುಂದೆ ಬಂದಾಗ ಆರೋಗ್ಯವಂತ ಸಮಾಜ ನಿರ್ಮಿಸಲು ಸಾಧ್ಯ ಅಂತಹ ಕೆಲಸವನ್ನು ಡಿವೈಎಫ್ಐ ಯುವಜನ ಸಂಘಟನೆ ನಿರಂತರವಾಗಿ ಮಾಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಶಿಬಿರದಲ್ಲಿ ಮುಖ್ಯ ಅತಿಥಿಯಾಗಿ ಸಿಐಟಿಯು ಮುಖಂಡ ಸುರೇಶ್ ಕಲ್ಲಾಗರ ಮಾತನಾಡಿದರು. ಆರೋಗ್ಯ ಸಹಾಯಕರಾದ ಸಂತೋಷ್ ಉಪಸ್ಥಿತರಿದ್ದರು. ಡಿವೈಎಫ್ಐ ಘಟಕ ಕಾರ್ಯದರ್ಶಿ ರವಿ ವಿ.ಎಂ ಪ್ರಾಸ್ತಾವಿಕ ಮಾತನಾಡಿದರು.



ಪೈಲೇರಿಯ ತಪಾಸಣಾ ಶಿಬಿರವು ಅತೀ ಮುಖ್ಯವಾದದು ಎಂದು ಸಾರ್ವಜನಿಕ ಆಸ್ಪತ್ರೆಯ ಹಿರಿಯ ಆರೋಗ್ಯ ನಿರೀಕ್ಷಕರಾದ ಸದಾನಂದ ವಿ ರವರು ಜನರಿಗೆ ಮುಂಜಾಗ್ರತ ಕ್ರಮದ ಕುರಿತು ಶಿಬಿರದ ಅಧ್ಯಕ್ಷತೆ ಮಂಜುನಾಥ ಶೋಗನ್ ವಹಿಸಿದ್ದರು. ಸಂತೋಷ ದೋಣಿಮನೆ ಅತಿಥಿಗಳನ್ನು ಗೌರವಿಸಿದರು. ರಾಘವೇಂದ್ರ ಡಿ. ಸ್ವಾಗತಿಸಿದರು. ಸಂತೋಷ ಕಲ್ಲಾಗರ ಕಾರ್ಯಕ್ರಮ ನಿರೂಪಿಸಿದರು. ಗ್ರಾಮದ ನೂರಾರು ಜನರು ಶಿಬಿರದ ಪ್ರಯೋಜನ ಪಡೆದರು.

**ಸನ್ಮಾನ ಕಾರ್ಯಕ್ರಮ**

ಹಲವಾರು ವರ್ಷಗಳಿಂದ ಸರಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿ, ನಿರಂತರ ಆರೋಗ್ಯದ ಮಾಹಿತಿ ನೀಡಿ ಜನರಲ್ಲಿ ಜಾಗ್ರತಿ ಮೂಡಿಸಲು ಸಹಕರಿಸಿ ಇದೇ ಸಂಧರ್ಭದಲ್ಲಿ ನಿವೃತ್ತಿಯಾಗಿ ಕೊನೆ ಕಾರ್ಯಕ್ರಮ ನಡೆಸಿಕೊಟ್ಟ ಸದಾನಂದ ವಿ ರವರಿಗೆ ಡಿವೈಎಫ್ಐ ಮಾಜಿ ಮುಖಂಡರಾದ ಶಂಕರ್ ಆನಗಳ್ಳಿ, ಅಣ್ಣಪ್ಪ ಮೆಂಡನ್ ಸಂಘಟನೆಯಿಂದ ಗೌರವ ಸ್ಮರಣಿಕ ನೀಡಿ ಸನ್ಮಾನಿಸಿದರು. ಈ ಕಾರ್ಯಕ್ರಮದಲ್ಲಿ ಡಿವೈಎಫ್ಐ ತಾಲೂಕು ಕಾರ್ಯದರ್ಶಿ ರಾಜೇಶ್ ವಡೇರಹೋಬಳಿ, ಶೇಖರ ಡಿ., ಕೃಷ್ಣಾನಂದ ಶ್ಯಾನುಭೋಗ ಉಪಸ್ಥಿತರಿದ್ದರು. ಉದಯ ಟೈಲರ್ ವಂದನಾರ್ಪಣೆ ಮಾಡಿದರು. ●



# ಯುಎಪಿಎ ತಿದ್ದುಪಡಿ ಮಸೂದೆ: ಸೈದ್ಧಾಂತಿಕ ವಿರೋಧಿಗಳನ್ನು ಸದೆಬಡಿಯಲು ಅಪಾಯಕಾರಿ ಅಸ್ತ್ರ

**ಮುಂಬಯಿಯಲ್ಲಿ ನಡೆದ ಭಯೋತ್ಪಾದನೆ ದಾಳಿಯ ಹಿನ್ನೆಲೆಯಲ್ಲಿ 2008ರ ಡಿಸೆಂಬರ್‌ನಲ್ಲಿ ಯುಪಿಎ ಸರಕಾರ ಯುಎಪಿಎಗೆ ತಿದ್ದುಪಡಿ ತಂದು ಭಯೋತ್ಪಾದನೆ ತಡೆ ಕಾನೂನಿನ (ಪೋಟಾ) ಕೆಲವು ಕರಾಳ ನಿಯಮಗಳನ್ನು ವಾಪಸ್ ಜಾರಿ ಮಾಡಿತ್ತು. ಸಿಪಿಐ(ಎಂ) ಆಗ ಎಚ್ಚರಿಸಿದ್ದಂತೆ, ಯುಎಪಿಎಯನ್ನು ಈ ಕರಾಳ ನಿಯಮಗಳನ್ನು ಅಳವಡಿಸುವ ಮೂಲಕ ನಿರಂತರವಾಗಿ ದುರುಪಯೋಗಪಡಿಸಿಕೊಳ್ಳಲಾಗಿದೆ. ಈಗ ಮೋದಿ ಸರಕಾರ ಇನ್ನೂ ಮುಂದೆ ಹೋಗಿ ಇನ್ನಷ್ಟು ಕಠಿಣ ಮತ್ತು ಹಾನಿಕರ ನಿಯಮಗಳನ್ನು ಅಳವಡಿಸುತ್ತಿದ್ದು, ಈ ತಿದ್ದುಪಡಿಗಳ ಮೂಲಕವಾಗಿ ಒಂದು ರಾಷ್ಟ್ರೀಯ ಭದ್ರತಾ ಪ್ರಭುತ್ವದ ಸರ್ವಾಧಿಕಾರಶಾಹಿ ವಿನ್ಯಾಸವನ್ನು ಬಲಗೊಳಿಸಿದೆ. ಅದನ್ನು ಸೈದ್ಧಾಂತಿಕ ವಿರೋಧಿಗಳ ವಿರುದ್ಧ ಒಂದು ಅಸ್ತ್ರವನ್ನಾಗಿಯೂ ಬಳಸಿಕೊಳ್ಳಲಾಗುತ್ತದೆ.**



*** ಪ್ರಕಾಶ್ ಕಾರಟ್**

ಕಾನೂನುಬಾಹಿರ ಚಟುವಟಿಕೆಗಳ ತಡೆ (ಯುಎಪಿಎ) ತಿದ್ದುಪಡಿ ಮಸೂದೆಯು ಯಾವ ದೃಷ್ಟಿಯಲ್ಲಿ ನೋಡಿದರೂ ಒಂದು ಅಪಾಯಕಾರಿಯಾದ ಶಾಸನವಾಗಿದೆ.. ಈ ಮಸೂದೆಯನ್ನು ಲೋಕಸಭೆ ಅಂಗೀಕರಿಸಿದ್ದು, ಅದೀಗ ರಾಜ್ಯಸಭೆಯ ಪರಿಶೀಲನೆಗೆ ಬರಲಿದೆ.

ಸಂಸತ್ತು ಈಗಾಗಲೇ ಅಂಗೀಕರಿಸಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ತಿದ್ದುಪಡಿ ಮಸೂದೆಯ ಜೊತೆಜೊತೆಗೆ ಈ ಎರಡೂ ಕ್ರಮಗಳು ಭಯೋತ್ಪಾದನೆ ವಿರುದ್ಧದ ಹೋರಾಟದ ಹೆಸರಿನಲ್ಲಿ ಕಾನೂನುಗಳನ್ನು ಇನ್ನಷ್ಟು ಕರಾಳಗೊಳಿಸಲಿವೆ. ಈ ಕಾನೂನು ಒಕ್ಕೂಟತತ್ವ, ನಾಗರಿಕರ ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ಸ್ವಾತಂತ್ರ್ಯದ ಮೇಲಿನ ಆಕ್ರಮಣವಾಗಿದೆ. ಯುಎಪಿಎ ತಿದ್ದುಪಡಿಗಳು ಮೂರು ಕ್ಷೇತ್ರಗಳಿಗೆ ಸಂಬಂಧಿಸಿದ್ದಾಗಿವೆ.

ಮೊದಲನೆಯದಾಗಿ, ಎನ್‌ಐಎ ತನಿಖೆ ನಡೆಸುತ್ತಿರುವ ಪ್ರಕರಣಗಳಲ್ಲಿ ಆಸ್ತಿ ವಶಪಡಿಸಿಕೊಳ್ಳಲು ಅಥವಾ ಜಪ್ತಿ ಮಾಡುವ ಅಧಿಕಾರವನ್ನು ಎನ್‌ಐಎ ಮಹಾನಿರ್ದೇಶಕರಿಗೆ ನೀಡಲಾಗುತ್ತದೆ. ಮೂಲ ಕಾನೂನಿನಲ್ಲಿರುವಂತೆ ಈ ರೀತಿ ಮಾಡಲು ಸಂಬಂಧಪಟ್ಟ ರಾಜ್ಯ ಸರಕಾರಗಳ ಪೊಲೀಸ್ ಮುಖ್ಯಸ್ಥರ ಅನುಮತಿ ಪಡೆಯಬೇಕಾದ ಅಗತ್ಯವನ್ನು ಇದು ಇಲ್ಲವಾಗಿಸುತ್ತದೆ. ಪೊಲೀಸ್ ಮತ್ತು ಕಾನೂನು ಮತ್ತು ಸುವ್ಯವಸ್ಥೆ ರಾಜ್ಯಕ್ಕೆ ಸಂಬಂಧಿಸಿದ ವಿಷಯವಾಗಿದ್ದು ಈ ಕ್ರಮವು ರಾಜ್ಯಗಳ ಅಧಿಕಾರಗಳ ಮೇಲಿನ ಇನ್ನೊಂದು ಅತಿಕ್ರಮಣವಾಗಿದೆ.

ತೀವ್ರ ದುರುಪಯೋಗಕ್ಕೆ ಹಾದಿ ಮಾಡಿಕೊಡಲಾಗುವ ಎರಡನೇ ತಿದ್ದುಪಡಿಯು ವ್ಯಕ್ತಿಯೊಬ್ಬರನ್ನು 'ಭಯೋತ್ಪಾದಕ' ಎಂದು ಘೋಷಿಸಲು ಸರಕಾರಕ್ಕೆ ಅಧಿಕಾರ ನೀಡಲಿದೆ. ಪ್ರಸ್ತುತ ಕಾನೂನಿನಲ್ಲಿ ಸಂಘಟನೆಗಳು ಅಥವಾ ಸಂಸ್ಥೆಗಳನ್ನು ಮಾತ್ರ ಭಯೋತ್ಪಾದಕ ಎಂದು ಸಾರಲು ಅವಕಾಶವಿದೆ.

ಈಗಿನ ತಿದ್ದುಪಡಿಯು ಮೂಲಕ, ಹೊಸ ಶೆಡ್ಯೂಲ್‌ನಲ್ಲಿ ವ್ಯಕ್ತಿಯೊಬ್ಬರನ್ನು ಭಯೋತ್ಪಾದಕ ಎಂದು ಪಟ್ಟಿ ಮಾಡುವ ಅಧಿಕಾರ ಗೃಹ ಖಾತೆಗೆ ಸಿಗಲಿದೆ. ಈಗಾಗಲೇ ಹಾಲಿ ಕಾನೂನಿನಲ್ಲಿ ಭಯೋತ್ಪಾದಕ ಸಂಘಟನೆಗಳಲ್ಲಿ ಸಕ್ರಿಯರಾಗಿರುವ, ಅಥವಾ ಭಯೋತ್ಪಾದನೆ ಚಟುವಟಿಕೆಗಳಿಗೆ ನೆರವಾಗುವ ವ್ಯಕ್ತಿಗಳನ್ನು ನಿಭಾಯಿಸುವುದಕ್ಕೆ ಸಂಬಂಧಿಸಿ ಸಾಕಷ್ಟು ನಿಯಮಾವಳಿಗಳಿವೆ. ಆದ್ದರಿಂದ ಯಾವುದೇ ಒಬ್ಬ ವ್ಯಕ್ತಿಯನ್ನು ಭಯೋತ್ಪಾದಕ ಎಂದು ಘೋಷಿಸಲು ಸರಕಾರಕ್ಕೆ ಅಧಿಕಾರ ನೀಡುವ ಅಗತ್ಯವಾದರೂ ಏನಿದೆ?. ಯಾವುದೇ ಸೂಕ್ತ ಪ್ರಕ್ರಿಯೆಯ ಮೂಲಕ ವ್ಯಕ್ತಿಗತವಾಗಿ ಯಾವುದೇ ವ್ಯಕ್ತಿಯನ್ನು ಭಯೋತ್ಪಾದಕ ಎಂದು ಘೋಷಿಸಲಾಗುವುದಿಲ್ಲ. ಯಾವುದೇ ನ್ಯಾಯಾಲಯ ಆ ಕೆಲಸ ಮಾಡಲಾಗದು. ಸಾಕ್ಷ್ಯಗಳನ್ನು ಪರಿಶೀಲಿಸಿ ಶಿಕ್ಷೆ ನೀಡುವುದಷ್ಟೆ ನ್ಯಾಯಾಲಯಗಳ ಕೆಲಸ.

ಕೆಲವು ವ್ಯಕ್ತಿಗಳನ್ನು ಭಯೋತ್ಪಾದಕರ ಪಟ್ಟಿಗೆ ಸೇರಿಸುವ ಮೂಲಕ ಸರಕಾರವು ಅಂಥ ವ್ಯಕ್ತಿಗಳನ್ನು ಸಮಾಜದ ದೃಷ್ಟಿಯಲ್ಲಿ ಕೀಳಾಗಿಸುತ್ತದೆ. ಭಯೋತ್ಪಾದಕರೆಂದು ಘೋಷಿಸಲಾಗುವ ವ್ಯಕ್ತಿಗಳು ಉದ್ಯೋಗ ಕಳೆದುಕೊಳ್ಳುವುದು ಮತ್ತು ಸಾಮಾಜಿಕ ಬಹಿಷ್ಕಾರದಂಥ ನೋವಿಗೆ ಒಳಗಾಗುತ್ತಾರೆ. ಸರಕಾರವನ್ನು ಪ್ರಶ್ನಿಸುವ ಅಥವಾ ವಿರೋಧಿಸುವ ಅಥವಾ ಕ್ರಾಂತಿಕಾರಿ ಸಿದ್ಧಾಂತಗಳನ್ನು ಅಂಗೀಕರಿಸುವ ವ್ಯಕ್ತಿಗಳನ್ನು ಸದೆಬಡಿಯಲು ಸರಕಾರಕ್ಕೆ ಅಸ್ತ್ರ ಒದಗಿಸುವುದು ಇದರ ಉದ್ದೇಶವೆಂದು ಕಾಣುತ್ತದೆ.

ಗೃಹ ಸಚಿವ ಅಮಿತ್ ಷಾ ಲೋಕಸಭೆಯಲ್ಲಿ ನಡೆದ ಚರ್ಚೆಯ ವೇಳೆ ಉದ್ದೇಶ ಏನೆಂಬುದನ್ನು ಬಹಿರಂಗಪಡಿಸಿದ್ದಾರೆ. "ಭಯೋತ್ಪಾದನೆ ಸಾಹಿತ್ಯ ಮತ್ತು ಯುವಜನರ ತಲೆಯಲ್ಲಿ ಭಯೋತ್ಪಾದನೆ ಸಿದ್ಧಾಂತವನ್ನು ಬಿತ್ತಲು ಪ್ರಯತ್ನಿಸುವ ಜನರಿದ್ದಾರೆ. ಬಂದೂಕುಗಳು ಭಯೋತ್ಪಾದನೆ ಸೃಷ್ಟಿಸುವುದಿಲ್ಲ. ಭಯೋತ್ಪಾದನೆಯನ್ನು ಹರಡುವುದನ್ನು ಪ್ರಚಾರ ಮಾಡಲು ಹರಡುವ ಉನ್ಮಾದವೇ ಭಯೋತ್ಪಾದನೆಯ ಮೂಲಕಾರಣವಾಗಿದೆ" ಎಂದು ಅಮಿತ್ ಷಾ ಹೇಳಿದ್ದಾರೆ.

'ಭಯೋತ್ಪಾದಕ ಸಾಹಿತ್ಯ' ಮತ್ತು 'ಭಯೋತ್ಪಾದಕ ಸಿದ್ಧಾಂತ' ಎಂಬ ಪದಗಳನ್ನು ಪ್ರಸ್ತುತ ಪರಿಸ್ಥಿತಿಯನ್ನು ಪ್ರಶ್ನಿಸುವ ಯಾವುದೇ ಬಗೆಯ ಸಾಹಿತ್ಯಕ್ಕೆ ಸಂಬಂಧಿಸಿ ವ್ಯಾಖ್ಯಾನಿಸಬಹುದಾಗಿದೆ. ಭಗತ್ ಸಿಂಗ್ ಅವರ ಆತ್ಮಚರಿತ್ರೆಯ ಪುಸ್ತಕವನ್ನು ಹೊಂದಿದ್ದ ಕಾರಣಕ್ಕಾಗಿ ವ್ಯಕ್ತಿಯೊಬ್ಬರ ಮೇಲೆ ದೇಶದ್ರೋಹದ ಆರೋಪ ಹೊರಿಸಿದ ಕುಖ್ಯಾತ ಪ್ರಕರಣವೊಂದು ಕೆಲವೇ ವರ್ಷಗಳ ಹಿಂದೆ ನಡೆದಿತ್ತು. ಮಾರ್ಕ್ಸ್‌ವಾದಿ ಸಾಹಿತ್ಯ ಹೊಂದಿರುವ ಯಾವುದೇ ಟ್ರೇಡ್ ಯೂನಿಯನ್ ಕಾರ್ಯಕರ್ತ ಅಥವಾ ಎಡಪಂಥೀಯ ಕರಪತ್ರಗಳನ್ನು ಹಂಚುವ ಒಬ್ಬ ರಾಜಕೀಯ ಕಾರ್ಯಕರ್ತರನ್ನು ಅಮಿತ್ ಷಾರ ವ್ಯಾಖ್ಯಾನದ ಪ್ರಕಾರ ಭಯೋತ್ಪಾದಕ ಎಂದು ಆರೋಪಿಸಬಹುದಾಗಿದೆ.

"ನಗರ ಮಾವೋವಾದಿಗಳ ಪರವಾಗಿ ಕೆಲಸ ಮಾಡುವವರನ್ನು ನಾವು ಬಿಡುವುದಿಲ್ಲ" ಎಂದೂ ಅಮಿತ್ ಷಾ ಲೋಕಸಭೆಯಲ್ಲಿ ಹೇಳಿದ್ದಾರೆ. ಯುಎಪಿಎಯನ್ನು ಹೇಗೆ ಸುಧಾ ಭಾರದ್ವಾಜ್‌ರಂಥ ಕಾರ್ಯಕರ್ತರ ವಿರುದ್ಧ ಬಳಸಲಾಗಿದೆ ಎನ್ನುವುದನ್ನು ನಾವು ಈಗಾಗಲೇ  ನೋಡಿದ್ದೇವೆ. ಈಗ ಈ ತಿದ್ದುಪಡಿಯು ಮೂಲಕ ಇಂಥ ವ್ಯಕ್ತಿಗಳನ್ನು ಭಯೋತ್ಪಾದಕ ಎಂದು ಪಟ್ಟಿ ಮಾಡಬಹುದಾಗಿದೆ.

ಭಯೋತ್ಪಾದನೆ ಅಪರಾಧಗಳ ತನಿಖೆ ನಡೆಸುವ ಅಧಿಕಾರಿಗಳ ಹಂತವನ್ನು ಬದಲಾಯಿಸಲು ಮೂರನೇ ತಿದ್ದುಪಡಿ ಅವಕಾಶ ಕಲ್ಪಿಸುತ್ತದೆ. ಪ್ರಸಕ್ತ, ಇಂಥ ಅಪರಾಧಗಳ ತನಿಖೆಯನ್ನು ಎನ್‌ಐಎ ಸಂಸ್ಥೆಯ ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ಡಿವೈಎಸ್‌ಪಿ) ಮಾಡುತ್ತಾರೆ. ಕಾನೂನಿಗೆ ಮಾಡಲಾದ ತಿದ್ದುಪಡಿ ಪ್ರಕಾರ ಈಗ ಆ ಅಧಿಕಾರವನ್ನು ಎನ್‌ಐಎಯ ಇನ್ಸ್‌ಪೆಕ್ಟರ್‌ಗೆ ನೀಡಲಾಗುತ್ತದೆ. ಹೆಚ್ಚುತ್ತಿರುವ ಪ್ರಕರಣಗಳ ಹೊರೆಯನ್ನು ನಿಭಾಯಿಸಲು ಎನ್‌ಐಎಯಲ್ಲಿ ಸಾಕಷ್ಟು ಡಿವೈಎಸ್‌ಪಿಗಳು ಇಲ್ಲ ಎಂಬ ನೆಪವನ್ನು ಇದಕ್ಕೆ ನೀಡಲಾಗಿದೆ. ಇನ್ಸ್‌ಪೆಕ್ಟರ್‌ಗಳಿಗೆ ತನಿಖೆಯ ಜವಾಬ್ದಾರಿ ವಹಿಸುವುದರಿಂದ ಅಧಿಕಾರದ ದುರುಪಯೋಗವಾಗುವ ಸಾಧ್ಯತೆ ಹೆಚ್ಚಾಗಿದೆ.

ಎನ್‌ಐಎ ಕಾನೂನಿಗೆ ತಿದ್ದುಪಡಿಗಳನ್ನು ಮಾಡಿರುವುದರಿಂದ ಈ ಸಂಸ್ಥೆಯ ಅಧಿಕಾರಗಳು ಹೆಚ್ಚಾಗಿವೆ. ಅದರ ಕಾರ್ಯವ್ಯಾಪ್ತಿಯೂ ಹೆಚ್ಚಿದೆ. ರಾಜ್ಯ ಪೊಲೀಸರ ವ್ಯಾಪ್ತಿಗೆ ಬರುವ ಸೈಬರ್ ಅಪರಾಧಗಳು, ಖೋಟಾ ನೋಟು ಮುದ್ರಣ ಮತ್ತು ನಿರ್ಬಂಧಿತ ಶಸ್ತ್ರಾಸ್ತ್ರಗಳ ತಯಾರಿಕೆ ಅಥವಾ ಮಾರಾಟದಂಥ ವಿಷಯಗಳನ್ನು ಕೂಡ ಈಗ ಎನ್‌ಐಎ ವ್ಯಾಪ್ತಿಗೆ ತರಲಾಗಿದೆ. ಎನ್‌ಐಎ ಒಂದು ಅತಿ ಕೇಂದ್ರೀಕೃತ ಸಂಸ್ಥೆಯಾಗುತಿದ್ದು ರಾಜ್ಯ ಸರಕಾರಗಳು ಮತ್ತು ರಾಜ್ಯ ಪೊಲೀಸ್ ಅಧಿಕಾರಿಗಳ ಅಧಿಕಾರಗಳ ಮೇಲೆ ಸವಾರಿ ಮಾಡಲಿದೆ.

ಮುಂಬಯಿಯಲ್ಲಿ ನಡೆದ ಭಯೋತ್ಪಾದನೆ ದಾಳಿಯ ಹಿನ್ನೆಲೆಯಲ್ಲಿ 2008ರ ಡಿಸೆಂಬರ್‌ನಲ್ಲಿ ಯುಪಿಎ ಸರಕಾರ ಯುಎಪಿಎಗೆ ತಿದ್ದುಪಡಿ ತಂದು ಭಯೋತ್ಪಾದನೆ ತಡೆ ಕಾನೂನಿನ (ಪೋಟಾ) ಕೆಲವು ಕರಾಳ ನಿಯಮಗಳನ್ನು ವಾಪಸ್ ಜಾರಿ ಮಾಡಿತ್ತು. ಉದಾಹರಣೆಗೆ, ಯುಎಪಿಎ ನಿಯಮಗಳನ್ವಯ ಆರೋಪಿತನಾದ ವ್ಯಕ್ತಿಯನ್ನು ಜಾಮೀನುರಹಿತವಾಗಿ ವಶದಲ್ಲಿ ಇರಿಸಿಕೊಳ್ಳಬಹುದಾಗಿದ್ದ ಅವಧಿಯನ್ನು ಗರಿಷ್ಠ 90 ದಿನದಿಂದ 180 ದಿನಕ್ಕೆ ಹೆಚ್ಚಿಸಲಾಯಿತು. ಇಂಥ ನಿಯಮಗಳನ್ನು ತೀವ್ರವಾಗಿ ವಿರೋಧಿಸಿದ್ದ ಸಿಪಿಐ (ಎಂ) ಮಸೂದೆಯಲ್ಲಿನ ಅಂಥ ನಿಯಮಗಳಿಗೆ ತಿದ್ದುಪಡಿಗಳನ್ನು ಸೂಚಿಸಿತ್ತು. ಭಯೋತ್ಪಾದನೆ ಅಪರಾಧ ಪ್ರಕರಣಗಳ ತನಿಖೆಯನ್ನು ಹೊಸದಾಗಿ ರಚನೆಯಾದ ಎನ್‌ಐಎ ಮೂಲಕ ಮಾಡುವ ಪ್ರಕ್ರಿಯೆಯಲ್ಲಿ ರಾಜ್ಯ ಸರಕಾರಗಳನ್ನು ಒಳಗೊಳಿಸಲು ಕೇಂದ್ರ ಸರಕಾರ ನಿರಾಕರಿಸಿದ್ದನ್ನು ಕೂಡ ಸಿಪಿಐ (ಎಂ) ಬಲವಾಗಿ ವಿರೋಧಿಸಿತ್ತು.

ನಿರೀಕ್ಷಿಸಿದಂತೆ, ಯುಎಪಿಎಯನ್ನು ಈ ಕರಾಳ ನಿಯಮಗಳನ್ನು ಅಳವಡಿಸುವ ಮೂಲಕ ನಿರಂತರವಾಗಿ ದುರುಪಯೋಗಪಡಿಸಿಕೊಳ್ಳಲಾಗಿದೆ. ಈಗ ಮೋದಿ ಸರಕಾರ ಇನ್ನೂ ಮುಂದೆ ಹೋಗಿ ಇನ್ನಷ್ಟು ಕಠಿಣ ಮತ್ತು ಹಾನಿಕರ ನಿಯಮಗಳನ್ನು ಅಳವಡಿಸುತ್ತಿದ್ದು ಅದು ನಾಗರಿಕರ ಹಕ್ಕುಗಳು ಮತ್ತು ಸ್ವಾತಂತ್ರ್ಯದ ಮೇಲಿನ ದಾಳಿಯಾಗಿದೆ.

ಮೋದಿ ಸರಕಾರ ಈ ತಿದ್ದುಪಡಿಗಳ ಮೂಲಕವಾಗಿ ಒಂದು ರಾಷ್ಟ್ರೀಯ ಭದ್ರತಾ ಪ್ರಭುತ್ವದ ಸರ್ವಾಧಿಕಾರಶಾಹಿ ವಿನ್ಯಾಸವನ್ನು ಬಲಗೊಳಿಸಿದೆ. ಅದನ್ನು ಸೈದ್ಧಾಂತಿಕ ವಿರೋಧಿಗಳ ವಿರುದ್ಧ ಒಂದು ಅಸ್ತ್ರವನ್ನಾಗಿಯೂ ಬಳಸಿಕೊಳ್ಳಲಾಗುತ್ತದೆ.

ಪ್ರಜಾಪ್ರಭುತ್ವವನ್ನು ಉಳಿಸುವ ಹೋರಾಟವು ಈ ಕರಾಳ ಕಾನೂನುಗಳಿಂದ ಮುಕ್ತಿ ಪಡೆಯುವ ಹೋರಾಟವನ್ನು ಒಳಗೊಳ್ಳಬೇಕು.

ಅನು: ವಿಶ್ವ

## ರಾಷ್ಟ್ರೀಯ ಭದ್ರತಾ ಪ್ರಭುತ್ವ ಎಂದರೇನು?

ಇದೂ ಒಂದು ರೀತಿಯ ಪೋಲಿಸ್ ಪ್ರಭುತ್ವ, ಮೇಲ್ನೋಟಕ್ಕೆ ಪ್ರಜಾಪ್ರಭುತ್ವದಂತೆ ಕಾಣುವ, ಆದರೆ ಹೆಚ್ಚು ಗೋಪ್ಯತೆಯಿಂದ ಕೂಡಿದ ಪ್ರಭುತ್ವ  ಎಂದು ರಾಜಕೀಯ ಶಾಸ್ತ್ರದಲ್ಲಿ ಹೇಳಲಾಗುತ್ತದೆ. ಅದು ಭಿನ್ನಾಭಿಪ್ರಾಯ ಹೊಂದಿರುವವರನ್ನು ಜೈಲಿಗೆ ಹಾಕುವುದಿಲ್ಲ, ಆದರೆ ಅವರಿಗೆ ಕೆಲಸ ಸಿಗದಂತೆ ಮಾಡಬಲ್ಲದು. "ವಿರೋಧಿ" ಗಳನ್ನು ಸುತ್ತುವರೆದು ಮುಗಿಸಿಬಿಡುವುದಿಲ್ಲ, ಬದಲಿಗೆ 'ಕಾಣೆ"ಯಾಗಿಸಬಲ್ಲದು. ಸೈದ್ಧಾಂತಿಕವಾಗಿಯೂ, ಆಚರಣೆಯಲ್ಲಿ ಕಂಡು ಬಂದಿರುವಂತೆಯೂ ಇದು ನಾಗರಿಕ ಹಕ್ಕುಗಳು ಮತ್ತು ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯನ್ನು ಗಂಭೀರವಾಗಿ ಬಾಧಿಸಿದೆ ಎಂದು ಇದರ ಅಧ್ಯಯನ ಮಾಡಿದವರು ಹೇಳುತ್ತಾರೆ. ರಾಷ್ಟ್ರದ ಹೆಸರಲ್ಲಿ ಆಳುವ ವರ್ಗಗಳ ಆಂತರಿಕ ಭದ್ರತೆಯನ್ನು ಬಲಗೊಳಿಸುವ ಪ್ರಭುತ್ವ.



ವ್ಯಂಗ್ಯಚಿತ್ರ: ಪಿ. ಮಹಮ್ಮದ್

# ಬರಗಾಲದ ಬವಣೆಗೆ ಮಹಿಳೆ ಬಲಿ – ಮರಿಯಂ ಧವಳೆ ಆತಂಕ



ದೇಶ ಹಾಗೂ ರಾಜ್ಯ ಬರಗಾಲದಲ್ಲಿ ಸಿಲುಕಿರುವ ಕಾರಣ ಮಹಿಳೆಯರ ಮೇಲೆ ಒತ್ತಡ ಹೆಚ್ಚುತ್ತಿದ್ದು, ಆಹಾರ, ಉದ್ಯೋಗ ಇಲ್ಲದೇ ಪರದಾಡುತ್ತಿದ್ದಾರೆ. ಬರಗಾಲದ ಬವಣೆಗೆ ಮಹಿಳೆ ಬಲಿಪಶು ಆಗುತ್ತಿದ್ದಾಳೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಪ್ರಧಾನ ಕಾರ್ಯದರ್ಶಿ ಮರಿಯಂ ಧವಳೆ ಆತಂಕ ವ್ಯಕ್ತಪಡಿಸಿದರು. ಅವರು ಮಂಡ್ಯ ಸಿಲ್ವರ್ ಜ್ಯೂಬಿಲಿ ಪಾರ್ಕ್ ನಲ್ಲಿ 10 ನೇ ರಾಜ್ಯ ಸಮ್ಮೇಳನ ಅಂಗವಾಗಿ ಏರ್ಪಡಿಸಿದ್ದ ಬಹಿರಂಗ ಸಭೆ ಉದ್ಘಾಟಿಸಿ ಮಾತಾನಾಡುತ್ತಿದ್ದರು. ಅವರು ಮುಂದುವರಿದು ಇಡೀ ದೇಶದಲ್ಲಿ ದ್ವೇಷದ ವಾತಾವರಣ ಹೆಚ್ಚುತ್ತಿದೆ. ಇಂತಹ ಪರಿಸ್ಥಿತಿ ಗುಂಪು ಹತ್ಯೆಗಳನ್ನು ವ್ಯಾಪಕಗೊಳಿಸುತ್ತಿದೆ. ದಲಿತರಿಗೆ, ಅಲ್ಪಸಂಖ್ಯಾತರಿಗೆ, ಆದಿವಾಸಿಗಳಿಗೆ, ಮಹಿಳೆಯರಿಗೆ ಅಸುರಕ್ಷತೆ ಕಾಡುತ್ತಿದೆ. ಇತ್ತೀಚಿನ ದಿನಗಳಲ್ಲಿ ಮೈನರ್ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ, ದೌರ್ಜನ್ಯ, ಲೈಂಗಿಕ ಕಿರುಕುಳ ಹೆಚ್ಚುತ್ತಿದೆ. ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ, ಕಠುವಾ ಮುಂತಾದ ಹಲವು ಕಡೆ ಅತ್ಯಾಚಾರ ಆರೋಪಿಗಳಿಗೆ ರಕ್ಷಣೆ ನೀಡುತ್ತಿದೆ ಎಂದು ಆರೋಪಿಸಿದರು. ಮನೆಯಿಂದ ಆಟ ಆಡಲು ಹೊರ ಹೋದರೆ ಮನೆಯಲ್ಲಿ ತಾಯಿ ನಿರಾತಂಕವಾಗಿ ಇರಲು ಸಾಧ್ಯವಿಲ್ಲ ಅಂತಹ ಪರಿಸ್ಥಿತಿ ದೇಶದಲ್ಲಿ ನಿರ್ಮಾಣ ಆಗಿದೆ. ಘನತೆ, ಸ್ವಾವಲಂಬನೆಯಿಂದ ಬದುಕ ಬೇಕಾದ ಮಹಿಳೆಯರ ಸ್ಥಿತಿ ಚಿಂತಾಜನಕವಾಗಿದೆ. ಈ ಪರಿಸ್ಥಿತಿ ನಿವಾರಿಸದ ಬಿಜೆಪಿ, ಶಾಸಕರ ಖರೀದಿ ಯಲ್ಲಿ ತೊಡಗಿದೆ ಎಂದು ಟೀಕಿಸಿದರು. ಭಿನ್ನಾಭಿಪ್ರಾಯ, ಟೀಕೆಯನ್ನು ಸಹಿಸದೇ ಸುಳ್ಳು ಪ್ರಕರಣಗಳಲ್ಲಿ ಸಿಲುಕಿಸಿ ಜೈಲಿಗೆ ತಳ್ಳಲಾಗುತ್ತಿದೆ.ಈ ರೀತಿ ಬಲಿಪಶು ಆಗಿರುವ ಸಂಜೀವ್ ಭಟ್ ರವರನ್ನು ಉಳಿಸಿಕೊಳ್ಳಲು ಹೋರಾಡುತ್ತಿರುವ ಶ್ವೇತಾ ಭಟ್ ಜೊತೆ ಜೆಎಂಎಸ್ ನಿಲ್ಲಲಿದೆ ಎಂದು ಘೋಷಿಸಿದರು.

ನಂತರ ಮಾತಾನಾಡಿದ ಜೆಎಂಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಗೌರಮ್ಮ, ಬರಗಾಲದಿಂದ ಬಸವಳಿಯುತ್ತಿರುವ ಜನರಿಗೆ ರೇಷನ್ ನೀಡಲು ಹೆಬ್ಬೆಟ್ಟು ಗುರುತು ಕೇಳಿ ರೇಷನ್ ನಿಂದ ವಂಚಿಸಲಾಗುತ್ತಿದೆ. ಹೆಬ್ಬೆಟ್ಟು ಹೊಂದಾಣಿಕೆ ಆಗದೇ ಸಾವಿರಾರು ಜನ ರೇಷನ್ ಸಿಗದೇ ಹಸಿವಿನಿಂದ ನರಳುತ್ತಿದ್ದಾರೆ. ಉಚಿತ ಗ್ಯಾಸ್ ಎಂದು ಹೇಳಿ ಸಿಲಿಂಡರ್ ಕೊಟ್ಟ ಉಜ್ವಲ ಯೋಜನೆ ಗ್ಯಾಸ್ ಖರೀದಿಗೆ ಸಬ್ಸಿಡಿ ನೀಡುತ್ತಿಲ್ಲ. 800–900 ಕೊಟ್ಟು ಗ್ಯಾಸ್ ಖರೀದಿ ಸಾಧ್ಯವಾಗದೇ ಸೌದೆಯನ್ನೇ ಅವಲಂಬಿಸಬೇಕಾಗಿದೆ ಎಂದು ವಿಷಾದಿಸಿದರು. ನಂತರ ಮಾತನಾಡಿದ ಜೆಎಂಎಸ್ ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ವಿಮಲಾ ರವರು, ಚುನಾವಣೆಯಲ್ಲಿ ಗೆದ್ದವರು ಜನರ ಸಮಸ್ಯೆ ಬಗೆಹರಿಸಲು ಆಸಕ್ತಿ ತೋರುತ್ತಿಲ್ಲ.ನೆನ್ನೆ ಮೊನ್ನೆವರೆಗೆ ಮೈತ್ರಿ ಸರ್ಕಾರ ಇತ್ತು. ಕೆಲವು ಶಾಸಕರು ಬಾಂಬೆ ಹೋಟೆಲ್ ಸೇರಿ ಯಡಿಯೂರಪ್ಪ ಸರ್ಕಾರ ಬಂದಿದೆ. ಹೋಟೆಲ್ ಗಳಲ್ಲಿ ಮಜಾ ಮಾಡುವವರು ಜನ ಪ್ರತಿನಿಧಿಗಳಲ್ಲ, ಹಣ ಪ್ರತಿನಿಧಿಗಳು ಎಂದು ಕಟುವಾಗಿ ಟೀಕಿಸಿ ಮುಂದಿನ ಉಪ ಚುನಾವಣೆಯಲ್ಲಿ ಅಂತವರಿಗೆ ಬುದ್ದಿ ಕಲಿಸಬೇಕೆಂದು ಕರೆ ನೀಡಿದರು. ನಂತರ ಮಾತನಾಡಿದ ಜೆಎಂಎಸ್ ರಾಜ್ಯ ಖಜಾಂಚಿ ದೇವಿ ರವರು ಉದ್ಯೋಗ ಖಾತರಿ ಯೋಜನೆ ಅಡಿ ಕೆಲಸ ಮಾಡಿರುವ ಮಹಿಳೆಯರಿಗೆ ಮೂರು ತಿಂಗಳಾದರೂ ಕೂಲಿ ಪಾವತಿಸುತ್ತಿಲ್ಲ. ಇದರಿಂದ ಸಾಲದ ಕಂತು ಕಟ್ಟಲು, ಜೀವನ ಮಾಡಲು ಸಾಧ್ಯ ಆಗುತ್ತಿಲ್ಲ. ಹೀಗಾಗಿ ವಲಸೆ ನಿರಂತರ ವಾಗಿದೆ.ಹಳ್ಳಿಗಳಲ್ಲಿ ಪರಿಸ್ಥಿತಿ ಹೀಗಿದ್ದರೆ,ಮೋದಿ ಸರ್ಕಾರ ಉದ್ಯೋಗ ಖಾತರಿಗೆ ಒಂದು ಸಾವಿರ ಕೋಟಿ ಹಣ ಕಡಿತ ಮಾಡಿ ಹಂತ ಹಂತವಾಗಿ ನರೇಗಾ ಯೋಜನೆ ನಾಶ ಮಾಡುತ್ತಿದೆ ಎಂದು ಆರೋಪಿಸಿದರು. ರೈತ ನಾಯಕಿ ಸುನಂದಾ ಜಯರಾಂ, ಜೆಎಂಎಸ್ ರಾಜ್ಯ ಅಧ್ಯಕ್ಷೆ ಗೀತಾ ವಿ, ಸ್ವಾಗತ ಸಮಿತಿ ಅಧ್ಯಕ್ಷ ರಾದ ಪ್ರೊ. ಜಿ.ಟಿ. ವೀರಪ್ಪ ರವರು ಮಾತಾನಾಡಿದರು. ವೇದಿಕೆಯಲ್ಲಿ ಜೆಎಂಎಸ್ ರಾಜ್ಯ ಉಪಾಧ್ಯಕ್ಷರಾದ ಕೆ. ನೀಲಾ, ಮೀನಾಕ್ಷಿ ಬಾಳಿ, ಕೆ.ಎಸ್. ಲಕ್ಷ್ಮಿ, ಜಿಲ್ಲಾಧ್ಯಕ್ಷೆ ಶೋಭಾ, ಜಿಲ್ಲಾ ಕಾರ್ಯದರ್ಶಿ ಸುಶೀಲಾ ರವರು ಉಪಸ್ಥಿತರಿದ್ದರು.



ಆರ್ ಎಸ್ ಎಸ್ ಹೊಂದಿರುವ ಸಂಸ್ಕಾರ ಎಂಥದ್ದು? ಎಂಥದ್ದೆಂದರೆ ಮನುಸ್ಮೃತಿ ಪ್ರಣೀತವಾದ ಸಂಸ್ಕಾರ ಹೊಂದಿದ್ದು ಜಗಜ್ಜಾಹಿರ. ಮನುಸ್ಮೃತಿಯು ಸ್ತ್ರೀಯನ್ನು ನರಕ ಎನ್ನುತದೆ.

ಸ್ವಾತಂತ್ರ್ಯ ಕ್ಕೆ ಅರ್ಹಳಿಲ್ಲ ಎನ್ನುತ್ತದೆ. ಅಂದ ಮೇಲೆ ಆರ್ ಎಸ್ ಎಸ್ ಎಂತಹ ಸಂಸ್ಕಾರ ಕೊಡುವುದು? ಮಹಿಳಾ ವಿರೋಧಿ ಸಂಸ್ಕಾರವೇ ಕೊಡುವುದು ಅಂತ ಅರ್ಥ.

ಇಷ್ಟಕ್ಕೂ ಸಂಸ್ಕಾರ ಎಂದರೆ ಏನು? ನಮ್ಮ ಕುಟುಂಬ ಪರಿಸರದ ಪರಂಪರೆ ನಂಬಿಕೆ ನಮ್ಮದಾಗಿರುತದೆ.

ಭಾರತವು ವಿಭಿನ್ನ ಧಾರೆಯ ನಾನಾ ಸಂಸ್ಕಾರಗಳನ್ನು ಹೊಂದಿದೆ.

ಇದು ಬಹುತ್ವ ಭಾರತ. ಆರ್ ಎಸ್ ಎಸ್ ಈ ಮೂಲಕ ತನ್ನ ಸನಾತನಿ ಸಂಸ್ಕೃತಿ ಹೇರುವ ಹುನ್ನಾರದ ಭಾಗವಾಗಿ ಈ ಕಾರ್ಯ ನಡೆಸುತ್ತಿದೆ. ಸಂಸ್ಕಾರ ಸಂಸ್ಕೃತಿಯ ಹೆಸರಿನಲ್ಲಿ ಇಂತಹ ಚಟುವಟಿಕೆ ನಡೆಸುತ್ತಿರುವುದು ಭಾರತವನ್ನು ಮತೀಯಗೊಳಿಸುವ ಹುನ್ನಾರವಾಗಿದೆ.

ಪಾಳೆಯಗಾರಿ, ವರ್ಣಾಶ್ರಮ ಧರ್ಮವೇ ಅದರ ನಂಬಿಕೆಯ ತಳಹದಿಯಾಗಿದೆ.

ಮೂಲತಃ ಮಹಿಳಾ ವಿರೋಧೀ ತತ್ವಗಳನ್ನೇ ಪ್ರತಿಪಾದಿಸುವ, ಆರ್.ಎಸ್.ಎಸ್.ಪುತ್ರ ಶ್ರೇಷ್ಠತೆಯನ್ನು ತುಂಬುತ್ತ ದಂಪತಿಗಳಿಗೆ ಹೆಣ್ಣು ಭ್ರೂಣ ಹತ್ಯೆಗೆ ಪ್ರಚೋದಿಸಿರಲೂ ಸಾಕು.

ಮಹಿಳೆಯರಿಗೆ ಸ್ವಾತಂತ್ರ್ಯ ವಿಲ್ಲವೆಂದ ಮನು ಧರ್ಮಶಾಸ್ತ್ರವನ್ನು ಪ್ರತಿಪಾದಿಸುವ ಈ ಸನಾತನವಾದಿಗಳಿಗೆ ಈ ಅಧಿಕಾರವನ್ನು ಕೊಟ್ಟವರಾರು ??

ಇಂಥಹ ಚಟುವಟಿಕೆಗಳನ್ನು ಮಹಾನ್ ಕೊಡುಗೆ ಎಂಬಂತೆ ಬಿಂಬಿಸುವದನ್ನು ಜನವಾದಿ ಮಹಿಳಾ ಸಂಘಟನೆ ವಿರೋಧಿಸುತ್ತದೆ. ಸರ್ಕಾರ ಇಂಥವುಗಳನ್ನು ನಿಯಂತ್ರಿಸುವ ಮೂಲಕ ಬಹುತ್ವ ಭಾರತದ ಭವ್ಯ ಪರಂಪರೆಯನ್ನು ಉಳಿಸಬೇಕೆಂದು ಒತ್ತಾಯಿಸುತ್ತದೆ.

## ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಜೆಎಂಎಸ್ ರಾಜ್ಯ ಸಮ್ಮೇಳನ ಆಗ್ರಹ

ರಾಜ್ಯದಲ್ಲಿ ದಿನೇ ದಿನೇ ಹೆಚ್ಚುತ್ತಿರುವುದಕ್ಕೆ ಪುರುಷ ಕೇಂದ್ರೀತ, ಪುರೋಹಿತಶಾಹಿ ಮತ್ತು ಪಾಳೇಗಾರಿ ಮನೋಭಾವ ಕಾರಣ ಎಂದು ಆರೋಪಿಸಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯ 10 ನೇ ಸಮ್ಮೇಳನ ಎಲ್ಲಾ ರೀತಿಯ ಮಹಿಳೆಯರ ಮೇಲಿನ ಹಿಂಸೆಯನ್ನು ಕೊನೆಗಾಣಿಸಬೇಕೆಂದು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳನ್ನು ಆಗ್ರಹಿಸಿದೆ.

ನವ ಉದಾರೀಕರಣದ ಫಲವಾದ ಖಾಸಗೀಕರಣ ಈ ಪ್ರತಿಗಾಮಿ ಧೋರಣೆಗಳನ್ನು ಪೋಷಿಸುತ್ತಿದ್ದು, ಅತ್ಯಾಚಾರ, ಲೈಂಗಿಕ ಕಿರುಕುಳ, ಹಲ್ಲೆ, ಜೀತಗಾರಿಕೆ, ಮಹಿಳೆ ಕಳ್ಳಸಾಗಣೆ, ವೇಶ್ಯಾವಾಟಿಕೆ, ಕೌಟುಂಬಿಕ ದೌರ್ಜನ್ಯ ಮುಂತಾದ ಹಿಂಸೆಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತಿದೆ.

ಪುಟ 11 ಕ್ಕೆ




## ಮುಸ್ಲಿಂ ಮಹಿಳೆಯರನ್ನು ಬಾಣಲೆಯಿಂದ ಬೆಂಕಿಗೆ ದೂಡುವ ತ್ರಿವಳಿ ತಲಾಕ್ ನಿಷೇಧ ಮಸೂದೆಯ ಅಂಗೀಕಾರವನ್ನು ವಿರೋಧಿಸಿ ನಿರ್ಣಯ:

ಮೂರು ಬಾರಿ ತಲಾಖ್ ಉಚ್ಚರಿಸಿದರೆ ಅದೊಂದು ಕ್ರಿಮಿನಲ್ ಅಪರಾಧವೆಂದು ಪರಿಗಣಿಸುವ ಕರಾಳ ಮಸೂದೆಯನ್ನು ಲೋಕಸಭೆ ಮತ್ತು ರಾಜ್ಯ ಸಭೆಯಲ್ಲಿ ಅಂಗೀಕರಿಸಲಾಗಿದೆ.


ಕೌಟುಂಬಿಕ ನೆಲೆಯ ಸಿವಿಲ್ ಕಾನೂನಿನ್ವಯ ಶಿಕ್ಷೆಯಾಗಬಹುದಾದ ಈ ಕಾನೂನು ತಲಾಕ್ ಹೇಳಿದ ವ್ಯಕ್ತಿಯನ್ನು ಕ್ರಿಮಿನಲ್ ಅಪರಾಧಿಯಾಗಿ ಪರಿಗಣಿಸುತ್ತದೆ. ಮತ್ತು ಮೂರು ವರ್ಷಗಳ ವರೆಗೆ ಜೈಲು ಶಿಕ್ಷೆ ವಿಧಿಸುತ್ತದೆ. ಬಿ.ಜೆ.ಪಿ. ಈಗಾಗಲೇ ಹರಿಬಿಟ್ಟಿರುವ ಮತ್ತು ಮುಸ್ಲಿಂ ವಿರೋಧೀ ಭಾವನೆಗಳನ್ನು ಇನ್ನಷ್ಟು ಗಟ್ಟಿಗೊಳಿಸುವ, ಮುಸ್ಲಿಂ ಗಂಡಸರನ್ನು ಗುರಿಯಾಗಿಟ್ಟುಕೊಂಡು ಜಾರಿಗೆ

ಪುಟ 12 ಕ್ಕೆ

# ಕಾರ್ಲ್ ಮಾರ್ಕ್ಸ್‌ರವರ ಮೇರು ಕೃತಿ 'ಬಂಡವಾಳ' ಕನ್ನಡದಲ್ಲಿ ನಾಡೋಜ ಬರಗೂರು ರಾಮಚಂದ್ರಪ್ಪರವರಿಂದ ಲೋಕಾರ್ಪಣೆ



ಪ್ರೊ. ಪ್ರಭಾತ್ ಪಾಟ್ನಾಯಕ್ ರವರಿಂದ ದಿಕ್ಸೂಚಿ ಭಾಷಣ



ನಾಡೋಜ ಬರಗೂರು ರಾಮಚಂದ್ರಪ್ಪ – ಕೃತಿ ಬಿಡುಗಡೆ


ನೆರೆದಿದ್ದ ಜನಸ್ತೋಮ



ವೇದಿಕೆಯಲ್ಲಿ ಅತಿಥಿಗಳು


ನಟರಾಜ್ ಹುಳಿಯಾರ್ ಮೊದಲ ಘೋಷ್ಠಿಯಲ್ಲಿ ಭಾಷಣ ಮಾಡುತ್ತಿರುವುದು


ಡಾ. ಅನುಪಮ – ಮೊದಲ ಘೋಷ್ಠಿಯಲ್ಲಿ


ಕೆ.ಎನ್. ಉಮೇಶ್, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರು


ಡಾ. ಕಿರಣ ಗಾಜನೂರು – ನಿರೂಪಣೆ / ಭಾಷಾಂತರ


ಅಧ್ಯಕ್ಷತೆ : ಜಿ.ವಿ. ಶ್ರೀರಾಮರೆಡ್ಡಿ – ಎರಡನೇ ಗೋಷ್ಠಿ


ಮೀನಾಕ್ಷಿ ಸುಂದರಂ ಮಾತನಾಡುತ್ತಿರುವುದು


ಕೆ. ನೀಲಾ ಭಾಷಣ ಮಾತನಾಡುತ್ತಿರುವುದು


ಯು. ಬಸವರಾಜ – ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ


ಡಾ. ಸಿದ್ದನಗೌಡ ಪಾಟೀಲ್ – ಅಧ್ಯಕ್ಷತೆ

# ಆರ್ಥಿಕ ನಿಧಾನಗತಿ ಬಹುಪಾಲು ಜನಗಳ ಜೀವನೋಪಾಯಗಳ ಮೇಲೆ ವಿಧ್ವಂಸಕಾರೀ ಪ್ರಭಾವ ಉಂಟು ಮಾಡುತ್ತಿದೆ–ಸಿಪಿಐ(ಎಂ) ಪೊಲಿಟ್‌ಬ್ಯುರೊ

**ಜುಲೈ 31 ರಂದು ನವದೆಹಲಿಯಲ್ಲಿ ಸಭೆ ಸೇರಿದ ಸಿಪಿಐ(ಎಂ) ಪೊಲಿಟ್‌ಬ್ಯುರೊ ದೇಶದಲ್ಲಿನ ಪ್ರಸಕ್ತ ಪರಿಸ್ಥಿತಿಗಳ ಪರಾಮರ್ಶೆ ನಡೆಸಿ ಸಭೆಯ ನಂತರ ಈ ಕೆಳಗಿನ ಹೇಳಿಕೆಯನ್ನು ನೀಡಿದೆ:**

## ವಿಧ್ವಂಸಕಾರೀ ಆರ್ಥಿಕ ನಿಧಾನಗತಿ

ಒಟ್ಟಾರೆ ಆರ್ಥಿಕ ನಿಧಾನಗತಿ ಮತ್ತು ದಿಗಿಲುಂಟು ಮಾಡುವ ರೀತಿಯಲ್ಲಿ ಏರುತ್ತಿರುವ ನಿರುದ್ಯೋಗ , ಜತೆಗೆ ಆಳಗೊಳ್ಳುತ್ತಿರುವ ಕೃಷಿ ಸಂಕಟ ನಮ್ಮ ಬಹುಪಾಲು ಜನಗಳ ಜೀವನೋಪಾಯದ ಸ್ಥಿತಿಗಳ ಮೇಲೆ ವಿಧ್ವಂಸಕಾರೀ ಪ್ರಭಾವ ಉಂಟು ಮಾಡುತ್ತಿವೆ.

ಭಾರತದ ಮುಖ್ಯ ಕೈಗಾರಿಕಾ ವಲಯದ ಬೆಳವಣಿಗೆ ದರ ಜೂನ್ 2019ರಲ್ಲಿ 0.2%ಕ್ಕೆ ಕುಸಿದಿದೆ. ಇದು 44 ವರ್ಷಗಳಲ್ಲೇ ಅತೀ ಕಡಿಮೆ ದರ. ಜೂನ್ 2018ರಲ್ಲಿ ಇದು 7.8% ಇತ್ತು. ನಾಲ್ಕು ಕೋಟಿ ಜನಗಳು ಕೆಲಸ ಮಾಡುವ ವಾಹನ ಉದ್ದಿಮೆ ಆಳವಾದ ಬಿಕ್ಕಟ್ಟಿನಲ್ಲಿದೆ. ದೇಶದ ಜಿಡಿಪಿಗೆ 7.5% ಮತ್ತು ತಯಾರಿಕಾ ವಲಯದ ಜಿಡಿಪಿಯಲ್ಲಿ 49% ನೀಡುವ ಉದ್ದಿಮೆ ಇದು. 17 ಕಾರು ಕಂಪನಿಗಳಲ್ಲಿ 10ರ ಮಾರಾಟ ಬೆಳವಣಿಗೆ ನಕಾರಾತ್ಮಕವಾಗಿದೆ. ಇದರಿಂದಾಗಿ ಉತ್ಪಾದನೆಯಲ್ಲಿ ಆಗಿರುವ ಕಡಿತದಿಂದಾಗಿ ಕಾರ್ಮಿಕರ ಲೇ–ಆಫ್ ಆಗುವ ಸಂಭವವಿದೆ. ಇದು ಈ ವಲಯದಲ್ಲಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗನಷ್ಟವನ್ನುಂಟು ಮಾಡಬಹುದು. ಇದನ್ನು ಅವಲಂಬಿಸಿರುವ ಉಪ ಉದ್ದಿಮೆಗಳಲ್ಲಿ ಈಗಾಗಲೇ 10ಲಕ್ಷೂ ಹೆಚ್ಚು ಕಾರ್ಮಿಕರ ಲೇ–ಆಫ್ ಆಗಿದೆ.

**ದೊಡ್ಡ ಪ್ರಮಾಣದಲ್ಲಿ ಖಾಸಗೀಕರಣ:** ಮರುಆಯ್ಕೆಗೊಂಡ ಮೇಲೆ ಮೋದಿ ಸರಕಾರ ನೇರವಾಗಿ ವ್ಯಾಪಕ ಖಾಸಗೀಕರಣದ ಪ್ರಕಟಣೆ ಮಾಡಿದೆ. 42 ರಕ್ಷಣಾ ಉತ್ಪಾದನೆ ಘಟಕಗಳನ್ನು ಖಾಸಗೀಕರಿಸಲಾಗುತ್ತಿದೆ. ಈ 42 ಶಸ್ತ್ರಾಸ್ತ್ರ ತಯಾರಿಕಾ ಕಾರ್ಖಾನೆಗಳು, ಡಿಆರ್‌ಡಿಒ ಘಟಕಗಳು ಮತ್ತು ಎಲ್ಲ ಮಿಲಿಟರಿ ಇಂಜಿನಿಯರಿಂಗ್ ಸೇವೆಗಳಲ್ಲಿ ಈಗ ನಾಲ್ಕು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ದುಡಿಯುತ್ತಿದ್ದಾರೆ. ಖಾಸಗೀಕರಣದಿಂದ ಇವರೆಲ್ಲರ ಭವಿಷ್ಯ ಪಣಕ್ಕೊಡ್ಡಲ್ಪಟ್ಟಿದೆ.

ಈ ಮೊದಲು ಆರು ವಿಮಾನ ನಿಲ್ದಾಣಗಳನ್ನು ಖಾಸಗೀಕರಿಸಿದ್ದು ಅವುಗಳ ಗುತ್ತಿಗೆ ಅದಾನಿ ಗುಂಪಿಗೆ ಹೋಗಿದೆ. ಈಗ ಇನ್ನೂ 20–25 ವಿಮಾನ ನಿಲ್ದಾಣಗಳನ್ನು ಖಾಸಗೀಕರಿಸುವುದಾಗಿ ಸರಕಾರ ಪ್ರಕಟಿಸಿದೆ.

ಭಾರತೀಯ ರೈಲ್ವೆಯನ್ನು ಹಂತ–ಹಂತವಾಗಿ ಖಾಸಗೀಕರಿಸಲಾಗುತ್ತಿದೆ.

ಈ ಸರಕಾರ ಮುಂದಿನ ಮೂರುವರ್ಷಗಳಲ್ಲಿ ಎಲ್ಲ ಕೇಂದ್ರೀಯ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ತನ್ನ ಪಾಲನ್ನು 49%ಕ್ಕೆ ಇಳಿಸುವ ಯೋಜನೆಯನ್ನು ಸಿದ್ಧಪಡಿಸಿದೆ.

**ಮಾಹಿತಿ ಕೈಚಳಕ:** ಆರ್ಥಿಕ ಜಾರುದಾರಿಯಲ್ಲಿರುವಾಗ, ಸತ್ಯವನ್ನು ಮರೆಮಾಚಲು ಮಾಹಿತಿಗಳನ್ನು ದೊಡ್ಡ 'ಪ್ರಮಾಣದಲ್ಲಿ ಅರ್ಥಹೀನಗೊಳಿಸುವ ಕೆಲಸಕ್ಕೆ ಸರಕಾರ ಕೈಹಾಕಿದೆ. ಹೆಚ್ಚಿನ ಬಜೆಟ್ ಲೆಕ್ಕಾಚಾರಗಳು ಇಂತಹ ಅಂಕೆ–ಸಂಖ್ಯೆಗಳನ್ನು ಆಧರಿಸಿವೆ ಎಂದು ಈಗ ಕಂಡು ಬಂದಿದೆ. ಬಜೆಟ್ ಲೆಕ್ಕಪತ್ರದಲ್ಲಿ ಕನಿಷ್ಟ 1.7ಲಕ್ಷ ಕೋಟಿ ರೂ.ಗಳನ್ನು ಬಿಟ್ಟಿರುವುದು ಎದ್ದು ಕಾಣುತ್ತಿದೆ. ಜಿಎಸ್‌ಟಿ ಸಂಗ್ರಹ ಪ್ರಕಟಿತ ಗುರಿಗಿಂತ ಬಹಳ ಕೆಳಗಿರುವಾಗ ವರಮಾನಗಳನ್ನು ಹಿಗ್ಗಿಸಿ ತೋರಿಸಲಾಗಿದೆ. ಮಹಾ ಲೆಕ್ಕಪರಿಶೋಧಕರ (ಸಿಎಜಿ) ಪ್ರಕಾರ ಸರಕಾರದ ವಿತ್ತೀಯ ಕೊರತೆ ಜೂನ್ ತ್ರೈಮಾಸಿಕದಲ್ಲಿ 3.42 ಲಕ್ಷ ಕೋಟಿ ರೂ. ತಲುಪಿದೆ. ಇದು 2019–20ರ ಇಡೀ ವರ್ಷದ ಬಜೆಟ್ ಅಂದಾಜಿನ 61.4% ದಷ್ಟು ಆಗಿದೆ. ಈ ಹಣಕಾಸು ವರ್ಷದಲ್ಲಿ ಇನ್ನೂ ಮೂರು ತ್ರೈಮಾಸಿಕಗಳಿವೆ. ಈ ಸರಕಾರ ಜಂಬದಿಂದ ಹೇಳಿಕೊಳ್ಳುತ್ತಿರುವ ಹಣಕಾಸು ಶಿಸ್ತನ್ನು ಉಳಿಸಿಕೊಳ್ಳಲು ಅಸಮರ್ಥವಾಗಿದೆ ಎಂಬುದು ಸ್ಪಷ್ಟ.




ವ್ಯಂಗ್ಯಚಿತ್ರ: ಪಿ.ಮಹಮ್ಮದ್,

ನಿರುದ್ಯೋಗ ಇಂದು ಕಳೆದ ಅರ್ಧಶತಮಾನದಲ್ಲೇ ತುತ್ತತುದಿಯಲ್ಲಿದೆ ಎಂಬುದಕ್ಕೆ ಪುರಾವೆ ಇದ್ದರೂ, ಉದ್ಯೋಗ ಕುರಿತ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿಲ್ಲ. ರೈತರ ಹತಾಶ ಆತ್ಮಹತ್ಯೆಗಳ ಮಾಹಿತಿಗಳನ್ನೂ ಸಂಗ್ರಹಿಸುತ್ತಿಲ್ಲ, ಇದರಿಂದಾಗಿ ಕೃಷಿ ಸಂಕಟ ಯಾವ ಮಟ್ಟದಲ್ಲಿದೆ ಎಂಬ ಬಗ್ಗೆ ವರದಿ ಬರುತ್ತಿಲ್ಲ, ಆಮೂಲಕ ಸಂಕಟ ಪರಿಹಾರದ ಕ್ರಮಗಳೂ ಇಲ್ಲವಾಗಿವೆ.

**ಚಮಚಾ ಬಂಡವಾಳಶಾಹಿ:** ದೇಶದ ಸಂಪತ್ತಿನ ಲೂಟಿ, ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಸಾಲಗಳ ಮೂಲಕ ನಿಲ್ಲದೆ ಸಾಗಿದೆ. ಸರಕಾರ ಸುಸ್ತಿಸಾಲಗಳ ಮಟ್ಟ ಇಳಿಯುತ್ತಿದೆ ಎಂದು ಹೇಳುತ್ತಿದ್ದರೂ ಇದು ಮುಂದುವರೆದಿದೆ. ಬ್ಯಾಂಕುಗಳ ಮಾಹಿತಿಗಳ ಪ್ರಕಾರವೇ ಪ್ರಸಕ್ತ ವರ್ಷದಲ್ಲಿ ನಿಜವಾದ ಸುಸ್ತಿಸಾಲಗಳ ಮೊತ್ತ ರೂ.2,30,811 ಕೋಟಿಗೆ ಏರಿದೆ. ಇದು 2018–19ರಲ್ಲಿ ರೂ.1.96 ಲಕ್ಷ ಕೊಟಿಯನ್ನು ಲೆಕ್ಕದಿಂದ ತೆಗೆದು ಹಾಕಿದ ಮೇಲಿನ ಮೊತ್ತ.

## ಸಂಸದೀಯ ಸಂಸ್ಥೆಗಳ ಮೇಲೆ ದಾಳಿಗಳು:

ಎಲ್ಲ ಸ್ವತಂತ್ರ ಸಂವಿಧಾನಿಕ ಸಂಸ್ಥೆಗಳನ್ನು ತ್ವರಿತವಾಗಿ ಬಡಮೇಲು ಶಿಥಿಲಗೊಳಿಸಲಾಗುತ್ತಿದೆ.

**ಸಂಸದೀಯ ವಿಧಿ–ವಿಧಾನಗಳು:** ಬಿಜೆಪಿ ಸರಕಾರ ಚುನಾವಣೆಗಳ ನಂತರ ಮೊದಲ ಸಂಸತ್ ಅಧಿವೇಶನದಲ್ಲೇ ಮಹತ್ವದ ಶಾಸನಗಳನ್ನು ಮುಂದೆ ತಳ್ಳಿ ಪಾಸು ಮಾಡಿಕೊಳ್ಳುತ್ತಿದೆ. ಸಂಸತ್ತು ತನ್ನ ಸ್ಥಾಯೀ ಸಮಿತಿಗಳು ಮತ್ತು ಸದನ ಸಮಿತಿಗಳನ್ನು ರಚಿಸಿದ ಮೇಲೆ ಸಂಸತ್ತಿನಲ್ಲಿ ಮಂಡಿಸುವ ಎಲ್ಲ ಶಾಸನ ಸಂಬಂಧಿ ವ್ಯವಹಾರಗಳನ್ನು ಸಾಮಾನ್ಯವಾಗಿ ಸಂಬಂಧಪಟ್ಟ ಸಮಿತಿಗಳಿಂದ ತಪಾಸಣೆಗೆ ಕಳಿಸಲಾಗುತ್ತದೆ. ಈ ಸರಕಾರ ಈ ವಿಧಾನವನ್ನು ಕೈಬಿಟ್ಟಿದೆ. ಇದುವರೆಗೆ ಯಾವ ಸಮಿತಿಯನ್ನೂ ರಚಿಸಿಲ್ಲ. ಸಂಸತ್ತಿನ ಅಧಿವೇಶನವನ್ನು ಕನಿಷ್ಟ 17 ಮಹತ್ವದ ಶಾಸನಗಳನ್ನು ಪಾಸು ಮಾಡಿಕೊಳ್ಳುವ ಘೋಷಿತ ಆಶಯದಿಂದಲೇ ವಿಸ್ತರಿಸಲಾಗಿದೆ, ಈ ಶಾಸನಗಳ ಎಲ್ಲ ಕಾನೂನು ರಚನೆಯ ಆಯಾಮಗಳ ಒಂದು ಗಂಭೀರ ಪರಿಶೀಲನೆ ಇಲ್ಲದೆಯೇ ಇವನ್ನು ಪಾಸು ಮಾಡಿಕೊಳ್ಳಲಾಗುತ್ತಿದೆ.

ಮಸೂದೆಗಳ ತಪಾಸಣೆಗೆ ಆಯ್ಕೆ ಸಮಿತಿಗಳನ್ನಾದರೂ ರಚಿಸಿ ಎಂಬ ಪ್ರತಿಪಕ್ಷಗಳ ಬೇಡಿಕೆಯನ್ನು ಸರಕಾರ ತಿರಸ್ಕರಿಸಿದೆ. ಬಿಜೆಪಿ ತನ್ನ ಬಹುಮತದ ದಬ್ಬಾಳಿಕೆಯನ್ನು ಚಲಾಯಿಸಿ ಈ ಎಲ್ಲ ಮಸೂದೆಗಳಿಗೆ ಸಂಸತ್ತಿನಿಂದ ಮಂಜೂರಾತಿ ಪಡೆಯುತ್ತಿದೆ.

**ಒಕ್ಕೂಟ ತತ್ವವನ್ನು ಶಿಥಿಲಗೊಳಿಸಲಾಗುತ್ತಿದೆ:** ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ(ಯುಎಪಿಎ)ಗೆ ಒಂದು ತಿದ್ದುಪಡಿಯನ್ನು ಪಾಸು ಮಾಡಲಾಗಿದೆ. ಇದರಲ್ಲಿ ಗೃಹ ಮಂತ್ರಾಲಯಕ್ಕೆ ಈಗ ಯಾವುದೇ ರಾಜ್ಯದಲ್ಲಿ ಯಾವುದೇ ವ್ಯಕ್ತಿಯನ್ನು ಭಯೋತ್ಪಾದಕ ಎಂದು ಘೋಷಿಸುವ ಅಧಿಕಾರವನ್ನು ಕೊಡಲಾಗಿದೆ, ಮತ್ತು ಇದನ್ನು ಸಂಬಂಧಪಟ್ಟ ರಾಜ್ಯ ಸರಕಾರಕ್ಕೆ ತಿಳಿಸಬೇಕಾಗಿಲ್ಲ. ಇಂತಹ ಗುರುತಿಸಿದ ಜನಗಳ ಆಸ್ತಿಗಳನ್ನು ಮುಟ್ಟುಗೋಲು ಮಾಡಬಹುದು. ಭಿನ್ನಮತ ವ್ಯಕ್ತಪಡಿಸುವ ವ್ಯಕ್ತಿಗಳನ್ನು ಈಗ ಮನಬಂದಂತೆ ಭಯೋತ್ಪಾದಕರು ಎಂದು ಘೋಷಿಸಬಹುದು. ತಾನು ನಿರಪರಾಧಿ ಎಂಬುದನ್ನು ಸಿದ್ಧಪಡಿಸುವ ಹೊಣೆಯನ್ನು ಆಪಾದಿತ ವ್ಯಕ್ತಿಯ ಮೇಲೆಯೇ ಹಾಕಿ ನ್ಯಾಯಶಾಸ್ತ್ರದ ನೀತಿಯನ್ನೇ ತಲೆಕೆಳಗು ಮಾಡಲಾಗಿದೆ. 'ಅಪರಾಧ ಸಾಬೀತಾಗುವ ವರೆಗೆ ನಿರಪರಾಧಿ' ಎಂಬ ತತ್ವದ ಬದಲು ಈಗ 'ನಿರಪರಾಧಿತ್ವವನ್ನು ಸಾಬೀತುಪಡಿಸುವ ವರೆಗೆ ಅಪರಾಧಿ' ಎಂಬ ತತ್ವವನ್ನು ತರಲಾಗಿದೆ. ಇದು ದೊಡ್ಡ ಪ್ರಮಾಣದಲ್ಲಿ ಕಿರುಕುಳಗಳಿಗೆ, ಹಗೆಸಾಧನೆಗೆ ಮತ್ತು ಸಾರಾಸಗಟು ಅನ್ಯಾಯಕ್ಕೆ ಎಡೆಮಾಡಿಕೊಡುತ್ತದೆ. ಒಕ್ಕೂಟ ತತ್ವಕ್ಕೆ ತಿಲಾಂಜಲಿ ಕೊಡಲಾಗಿದೆ, 'ಕಾನೂನು ವ್ಯವಸ್ಥೆ'ಯ ವಿಷಯ ರಾಜ್ಯಸರಕಾರಗಳ ಅಧಿಕಾರ ವ್ಯಾಪ್ತಿಯಲ್ಲಿದೆ ಎಂಬುದನ್ನು ಬದಿಗೊತ್ತಲಾಗುತ್ತದೆ.

ಮಾಹಿತಿ ಹಕ್ಕಿನ ಕಾಯ್ದೆಯನ್ನು ತಿದುಪಡಿ ಮಾಡಿ ಮಾಹಿತಿ ಹಕ್ಕನ್ನು ಸುಮಾರಾಗಿ ನಿರರ್ಥಕಗೊಳಿಸಲಾಗಿದೆ. ಸರಕಾರ ಬಹಳಷ್ಟು ಸಂಗತಿಗಳನ್ನು ಮರೆಮಾಚಬೇಕಾಗಿದೆ, ಅದರ ಆಂತರಿಕ ಕೆಲಸಕಾರ್ಯಗಳು ಮತ್ತು ತನ್ನ ಚಮಚಾಗಳಿಗೆ ಕೊಡಮಾಡುವ ಅಪಾರ ಪ್ರಯೋಜನಗಳು ಸಾರ್ವಜನಿಕ ಗಮನಕ್ಕೆ ಬರಬಾರದು ಎಂಬುದು ಅದರ ಬಯಕೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇದು ಸಂವಿಧಾನ ಖಾತ್ರಿಪಡಿಸಿರುವ ಮೂಲಭೂತ ಹಕ್ಕುಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿರುವಂತದ್ದು.

ತ್ರಿವಳಿ ತಲಾಖ್ ಮಸೂದೆ ಅಂಗೀಕಾರಗೊಂಡಿದೆ. ಇದು ಮದುವೆಯ ಸಿವಿಲ್ ಕರಾರು ಮುರಿದು ಬೀಳುವುದನ್ನು ಕ್ರಿಮಿನಲ್ ಅಪರಾಧವಾಗಿ ಮಾಡುತ್ತದೆ. ಇದನ್ನು ಕೂಡ ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆ ಇದೆ.

ಇದೇ ರೀತಿಯಲ್ಲಿ ಸಿಬಿಐ ಯನ್ನು ಬಿಜೆಪಿಯ ರಾಜಕೀಯ ಅಜೆಂಡಾಕ್ಕೆ ಬಳಸಿಕೊಳ್ಳುವುದು ಮುಂದುವರೆದಿದೆ. ಹಾಗೆಯೇ ಹಣಕಾಸು ಇಲಾಖೆಯ ಜಾರಿ ನಿರ್ದೇಶನಾಲಯ (ಇಡಿ)ವನ್ನು ಕೂಡ ಸಂಪೂರ್ಣವಾಗಿ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ. ಈ ಏಜೆನ್ಸಿಗಳು ನೀಡುವ ಬೆದರಿಕೆಗಳು ಆಗಾಗ ಪ್ರಾದೇಶಿಕ ರಾಜಕೀಯ ಪಕ್ಷಗಳನ್ನು ನಿಶ್ಶಸ್ತ್ರಗೊಳಿಸಿ ಅವು ತಲೆಬಾಗುವಂತೆ ಮಾಡುವ ಮತ್ತು ಪಕ್ಷಾಂತರದ ಬಲವಂತವನ್ನು ಉಂಟುಮಾಡುವ ಉದ್ದೇಶಗಳನ್ನು ಹೊಂದಿರುತ್ತದೆ.

ಅದೇ ರೀತಿಯಲ್ಲಿ ಸುಪ್ರಿಂ ಕೋರ್ಟ್ ಮತ್ತು ನ್ಯಾಯಾಂಗ, ಚುನಾವಣಾ ಆಯೋಗ, ರಿಝರ್ವ್ ಬ್ಯಾಂಕ್, ಸಿಎ&ಎಜಿ ಇವೆಲ್ಲವೂ ಬೇರೆ ಬೇರೆ ಮಟ್ಟದ ವರೆಗೆ ಇಂತಹ ಒತ್ತಡಗಳಿಗೆ ಒಳಗಾಗುತ್ತಿವೆ. ಇವೆಲ್ಲವೂ ದೇಶದಲ್ಲಿ ಸಂವಿಧಾನಿಕ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿವೆ.

## ಕೋಮುವಾದಿ ಧ್ರುವೀಕರಣ

ಕೋಮುವಾದಿ ಧ್ರುವೀಕರಣ ತೀಕ್ಷ್ಣಗೊಳ್ಳುತ್ತಿದ್ದು ದೇಶದಲ್ಲಿ ದ್ವೇಷ, ಅಸಹಿಷ್ಣುತೆ, ಮತ್ತು ಹಿಂಸಾಚಾರದ ವಾತಾವರಣದ ಸೃಷ್ಟಿಗೆ ದಾರಿ ಮಾಡಿಕೊಡುತ್ತಿದೆ. ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಗೋಮಾಂಸ ತಿಂದರೆಂದ ಆಪಾದನೆ ಹೊರಿಸಿಯೋ, ಅಥವ 'ಜೈಶ್ರೀರಾಮ್' ಎಂದು ಹೇಳುವಂತೆ ಬಲವಂತ ಮಾಡಿಯೋ ಹಲ್ಲೆ ಮಾಡಲಾಗುತ್ತಿದೆ. ಇಂತಹ ಹೆಚ್ಚಿನ ಪ್ರಕರಣಗಳು ಉತ್ತರ ಪ್ರದೇಶದಲ್ಲಿ ನಡೆದಿವೆ. ಝಾರ್ಖಂಡ್, ಮಹಾರಾಷ್ಟ್ರ, ಅಸ್ಸಾಂ, ಬಿಹಾರ್, ಪಶ್ಚಿಮ ಬಂಗಾಲ ಮತ್ತು ಇತರೆಡೆಗಳಿಂದಲೂ ಇಂತಹ ಪ್ರಕರಣಗಳ ವರದಿಗಳು ಬಂದಿವೆ.

**ಸರ್ವಾಧಿಕಾರಶಾಹಿ ಪ್ರಹಾರಗಳು:** ಈ ಸರಕಾರದ ಈ ಎರಡು ತಿಂಗಳುಗಳಲ್ಲಿ ಜನಗಳ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯದ ಮೇಲೆ ದಾಳಿಗಳಲ್ಲಿ ಅಭೂತಪೂರ್ವ ಏರಿಕೆ ಕಂಡು ಬಂದಿದೆ. ಉತ್ತರಪ್ರದೇಶದಲ್ಲಿ ಬಿಜೆಪಿ ಮುಖ್ಯಮಂತ್ರಿಗಳ ವಿರುದ್ಧ 'ಆಕ್ಷೇಪಣೀಯ ವಿಷಯ'ವನ್ನು ಹಂಚಿಕೊಂಡರೆಂದು ಬಹಳಷ್ಟು ಜನಗಳನ್ನು ಬಂಧಿಸಲಾಗಿದೆ. ಹಾಗೆಯೇ, ಬಿಜೆಪಿ ಆಳ್ವಿಕೆಯ ಅಸ್ಸಾಂ, ತ್ರಿಪುರಾ, ಉತ್ತರಾಖಂಡ್, ಗೋವಾ ಮುಂತಾದೆಡೆಗಳಲ್ಲಿ ಹಲವಾರು ಜನಗಳನ್ನು ಬಂಧಿಸಲಾಗಿದೆ. ಇದು ಸಾಮಾಜಿಕ ಮಾಧ್ಯಮಗಳಲ್ಲಿ ಒಂದು ಭೀತಿಯ ಭಾವನೆಯನ್ನು ಸೃಷ್ಟಿಸುತ್ತಿದೆ, ಲೇಖಕರು, ಬರಹಗಾರರು ಮತ್ತು ಇತರ ವ್ಯಕ್ತಿಗಳ ಮೇಲೆ ಸುಪ್ರಿಂ ಕೋರ್ಟ್ ತೀರ್ಪಿಗೆ ➔




ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ

# ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿಕೆ

➔ ವ್ಯತಿರಿಕ್ತವಾಗಿ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಕರಾಳ ಸೆಕ್ಷನ್ 66ಎ ಅಡಿಯಲ್ಲಿ ಗುರಿಯಿಡಲಾಗುತ್ತಿದೆ.

ದ್ವೇಷ ಮತ್ತು ಅಸಹಿಷ್ಣುತೆಯ ಹರಡಿಕೆಗೆ ಸಾಮಾಜಿಕ ಕಾರ್ಯಕರ್ತರು ಮತ್ತು ಮಾನವ ಹಕ್ಕುಗಳ ಕಾರ್ಯಕರ್ತರು ಕೂಡ 'ನಗರ ನಕ್ಸಲರು' , 'ಟುಕ್ಡೆ ಟುಕ್ಡೆ ಗ್ಯಾಂಗ್' ಇತ್ಯಾದಿ ಹೆಸರುಗಳಲ್ಲಿ ಗುರಿಯಾಗುತ್ತಿದ್ದಾರೆ. ಇದರ ಗುರಿ ಸರಕಾರ, ಆರೆಸ್ಸೆಸ್, ಬಿಜೆಪಿ ಮತ್ತು ಅವರ ಮುಖಂಡರ ವಿರುದ್ಧ ಭಿನ್ನಾಭಿಪ್ರಾಯಗಳ ಎಲ್ಲ ಅಭಿವ್ಯಕ್ತಿಗಳನ್ನು ಸುಮ್ಮನಾಗಿಸುವುದು.

## ಕಾರ್ಮಿಕ-ವಿರೋಧಿ ಕಾನೂನು ಸುಧಾರಣೆ

ಈ ಸರಕಾರ ಈಗಿರುವ ಎಲ್ಲ ಕಾರ್ಮಿಕ ಕಾನೂನುಗಳನ್ನು ತೆಗೆದು, ಅವುಗಳ ಸ್ಥಾನದಲ್ಲಿ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ತರುವುದಾಗಿ ಘೋಷಿಸಿದೆ. ಈಗಾಗಲೇ ಕಾರ್ಮಿಕರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ದಾಳಿಗಳು ಹೆಚ್ಚುತ್ತಿವೆ. ಈ ಪ್ರಸ್ತಾವಿತ ಸಂಹಿತೆಗಳನ್ನು ದುಡಿಯುವ ಜನಗಳು ದಶಕಗಳ ಹೋರಾಟಗಳಿಂದ ಸಾಧಿಸಿರುವ ಹಕ್ಕುಗಳನ್ನು ಶಿಥಿಲಗೊಳಿಸಲಿಕ್ಕಾಗಿ ರೂಪಿಸಲಾಗಿದೆ. ಶ್ರಮಪಟ್ಟು ಪಡೆದ ಈ ಹಕ್ಕುಗಳನ್ನು ತೆಗೆಯಲು ಅಥವ ದುರ್ಬಲಗೊಳಿಸಲು ಬಿಡಲಾಗದು. .

ಸಿಪಿಐ(ಎಂ) ಎಲ್ಲ ಕೇಂದ್ರೀಯ ಕಾರ್ಮಿಕ ಸಂಘಗಳು ಮತ್ತು ಒಕ್ಕೂಟಗಳ ಐಕ್ಯವೇದಿಕೆಯ ಆಗಸ್ಟ್ 2ರ ದೇಶವ್ಯಾಪಿ ಪ್ರತಿಭಟನೆಯೊಂದಿಗೆ ಸೌಹಾರ್ದವನ್ನು ಮತ್ತು ಬೆಂಬಲವನ್ನು ವ್ಯಕ್ತಪಡಿಸುತ್ತದೆ.

## ಕಾಶ್ಮೀರ

ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ ಕೂಡಲೇ ಚುನಾವಣೆಗಳನ್ನು ನಡೆಸಬೇಕು. ರಾಜ್ಯದಲ್ಲಿನ ಎಲ್ಲ ರಾಜಕೀಯ ಪಕ್ಷಗಳು ಲೋಕಸಭಾ ಚುನಾವಣೆಗಳೊಂದಿಗೆ ವಿಸರ್ಜಿತ ವಿಧಾನಸಭೆಗೂ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸಬೇಕು ಎಂದು ಆಗ್ರಹಿಸಿದರೂ ನಡೆಸಲಿಲ್ಲ. ಸ್ಪಷ್ಟವಾದ ಯಾವುದೇ ಉತ್ತರವನ್ನು ಕೊಡುತ್ತಿಲ್ಲ. ಭದ್ರತೆಯ ಪರಿಗಣನೆ ಸಂಸದೀಯ ಚುನಾವಣೆಗೆ ಅನುಮತಿ ಕೊಡುವಂತಿದ್ದರೆ, ವಿಧಾನಸಭೆಗೆ ಚುನಾವಣೆಗಳನ್ನು ಏಕೆ ನಡೆಸಲಿಲ್ಲ?

ಕೇಂದ್ರ ಗೃಹ ಮಂತ್ರಿಗಳೂ ಸೇರಿದಂತೆ ವಿವಿಧ ಬಿಜೆಪಿ ಮುಖಂಡರುಗಳು ಜಮ್ಮು ಮತ್ತು ಕಾಶ್ಮೀರದ ಸ್ವಾಯತ್ತತೆಗೆ ಸಂಬಂಧಪಟ್ಟ ಸಂವಿಧಾನದ ಕಲಮು 35ನ್ನು ರದ್ದು ಮಾಡುವ ಕೇಂದ್ರ ಸರಕಾರದ ಆಶಯಗಳನ್ನು ಪ್ರಕಟಿಸುತ್ತಿದ್ದಾರೆ. ಇದು ಜಮ್ಮು ಮತ್ತು ಕಾಶ್ಮೀರ ಹಾಗೂ ದೇಶದ ಉಳಿದ ಭಾಗಗಳ ನಡುವಿನ ಐಕ್ಯತೆಯ ಬಂಧಗಳನ್ನು ಮತ್ತಷ್ಟು ಕಡಿದು ಹಾಕುತ್ತದೆ. ಈ ವಿಷಯ ಈಗ ಸುಪ್ರಿಂ ಕೋರ್ಟಿನ ಮುಂದಿದೆ. ನ್ಯಾಯಾಂಗ ಪ್ರಕ್ರಿಯೆ ಪೂರ್ಣವಾಗಲಿ. ಬಹಳ ಹಿಂದೆ ಕೊಟ್ಟ ಆಶ್ವಾಸನೆಯಂತೆ ಸಂಬಂಧಪಟ್ಟ ಎಲ್ಲರೊಂದಿಗೆ ರಾಜಕೀಯ ಸಂವಾದವನ್ನು ಆರಂಭಿಸಲು ಬಿಜೆಪಿ ಸರಕಾರ ನಿರಾಕರಿಸುತ್ತಲೇ ಇದೆ. ಕಣಿವೆಯಲ್ಲಿ ಸಾಮಾನ್ಯ ಸ್ಥಿತಿ ಮತ್ತು ಶಾಂತಿ ಏರ್ಪಡಲು ಇದು ಅನಿವಾರ್ಯ. ಸರಕಾರ ಹೆಚ್ಚುವರಿ ಪಡೆಗಳನ್ನು ಕಳಿಸಿರುವುದು ಭಯೋತ್ಪಾದಕ ದಾಳಿಗಳ ಬೆದರಿಕೆ ಹೆಚ್ಚಾಗಿದೆ ಎಂಬ ಭಾವನೆಗೆ ಸ್ಪಂದನೆಯಾಗಿ ಎಂದು ಅಧಿಕೃತವಾಗಿ ಹೇಳಲಾಗಿದೆ. ಇದರೊಂದಿಗೇ ಸಂವಾದದ ಪ್ರಕ್ರಿಯೆ ಆರಂಭವಾಗದೆ ಜಮ್ಮು ಮತ್ತು ಕಾಶ್ಮೀರದಲ್ಲಿ ಪರಿಸ್ಥಿತಿ ಸಾಮಾನ್ಯಗೊಳ್ಳಲಾರದು.

## ರಾಜ್ಯ ಸರಕಾರಗಳನ್ನು ಉರುಳಿಸುವುದು

ಬಿಜೆಪಿ ಕರ್ನಾಟಕದಲ್ಲಿ ಕಾಂಗ್ರೆಸ್-ಜೆಡಿ(ಎಸ್) ರಾಜ್ಯ ಸರಕಾರವನ್ನು ಉರುಳಿಸಲು ನಗ್ನ ಕುದುರೆ ವ್ಯಾಪಾರಕ್ಕೆ ಬಹಿರಂಗವಾಗಿಯೇ ತೊಡಗಿದ್ದು ಒಂದು ಪ್ರತಿಪಕ್ಷ-ಮುಕ್ತ ಭಾರತವನ್ನು ನಿರ್ಮಿಸುವ ಅದರ ಆಶಯವನ್ನು ಸೂಚಿಸುತ್ತದೆ. ಕರ್ನಾಟಕದಲ್ಲಿನ ಸಮ್ಮಿಶ್ರ ಸರಕಾರದ ಸಮಸ್ಯೆಗಳೇನೇ ಇದ್ದರೂ, ವಿಧಾನಸಭಾ ಚುನಾವಣೆಗಳಾದ ಕೂಡಲೇ ಈ ಸರಕಾರ ಅಧಿಕಾರ ವಹಿಸದಂತೆ ತಡೆಯಲು ಪ್ರಯತ್ನಿಸಿದ ಬಿಜೆಪಿ ಅದನ್ನು ಅಸ್ಥಿರಗೊಳಿಸುವ ಪ್ರಯತ್ನಗಳನ್ನು ಮುಂದುವರೆಸಿತು ಎಂಬುದು ಸ್ಪಷ್ಟವಾಗಿದೆ. ಅದೀಗ ಇತರ ಪ್ರತಿಪಕ್ಷಗಳ ಆಳ್ವಿಕೆಯ ರಾಜ್ಯಗಳ ಮೇಲೆ ಗುರಿಯಿಟ್ಟಿದೆ.

## ಅಸ್ಸಾಂ ನಲ್ಲಿ ಎನ್ ಆರ್‌ಸಿ ಪ್ರಕ್ರಿಯೆ

ಅಸ್ಸಾಂ ನಲ್ಲಿ ರಾಷ್ಟ್ರೀಯ ಪೌರತ್ವ ದಾಖಲೆ(ಎನ್‌ಆರ್‌ಸಿ)ಯ ಅಂತಿಮ ಪಟ್ಟಿಯನ್ನು ಆಗಸ್ಟ್ 31ರಂದು ಪ್ರಕಟಿಸಲಾಗುತ್ತದೆ. ಇದುವರೆಗೆ 40.7 ಲಕ್ಷ ಮತ್ತು ಹೆಚ್ಚುವರಿಯಾಗಿ 1.02 ಲಕ್ಷ ಅರ್ಜಿದಾರರನ್ನು ಎನ್‌ಆರ್‌ಸಿಯಿಂದ ಹೊರಗಿಡಲಾಗಿದೆ. ಹಲವು ನೈಜ ಭಾರತೀಯ ನಾಗರಿಕರನ್ನು ಹೊರಗಿಡಲಾಗಿದೆ ಎಂಬ ಸಂದೇಹಗಳು ಇವೆ. ಅಂತಿಮ ಪಟ್ಟಿಯನ್ನು ಪ್ರಕಟಿಸಿದ ಮೇಲೆ ಈ ಎಲ್ಲರಿಗೂ ಅವರ ಮನವಿಯ ವಿಚಾರಣೆಯ ಒಂದು ನ್ಯಾಯಯುತ ಅವಕಾಶ ಸಿಗುಂವಂತೆ ಮಾಡುವುದು ಅಗತ್ಯವಾಗಿದೆ. ವಿದೇಶೀಯರ ನ್ಯಾಯಮಂಡಳಿ ಒಂದು ನ್ಯಾಯಾಂಗ ಸಂಸ್ಥೆಯಲ್ಲವಾದ್ದರಿಂದ ಇದಕ್ಕೆ ವೇದಿಕೆಯಾಗುವುದು ಸಾಧ್ಯವಿಲ್ಲ. "ನಾಗರಿಕೇತರರು" ಆಗುವವರ ಸ್ಥಾನಮಾನವೇನು, ಹಕ್ಕುಗಳೇನು ಎಂದು ಸರಕಾರ ವಿವರಿಸಬೇಕು.

ವಿದೇಶೀಯರೆಂದು ಘೋಷಿಸಿದ ಮೇಲೆ ಪ್ರತಿಬಂಧಕ ಶಿಬಿರಗಳಲ್ಲಿ ಇಡಲ್ಪಟ್ಟವರ ದುಸ್ಥಿತಿ ಆತಂಕಕಾರಿ. ಕೆಟ್ಟ ಆಹಾರ ಮತ್ತು ವಿಪರೀತ ಜನಸಂದಣಿಯಿಂದಾಗಿ ಪರಿಸ್ಥಿತಿ ಕೆಟ್ಟದಾಗಿದೆ. ಅವರಲ್ಲಿ 335 ಮಂದಿ ಮೂರು ವರ್ಷಗಳಿಂದಲೂ ಪ್ರತಿಬಂಧಿತರಾಗಿದ್ದರೆ ಎಂದು ವರದಿಯಾಗಿದೆ. ರಾಜ್ಯ ಸರಕಾರ ಇಂತಹ ಶೋಚನೀಯ ಪರಿಸ್ಥಿತಿಗಳ ಮತ್ತು ಬಂಧಿಗಳ ಮೂಲ ಮಾನವ ಹಕ್ಕುಗಳನ್ನು ಉಲ್ಲಂಘಿಸುವ ಪ್ರತಿಬಂಧಕ ಕೇಂದ್ರಗಳನ್ನು ನಡೆಸಲಾಗದು.

## ಅರಣ್ಯ ಹಕ್ಕುಗಳ ಕಾಯ್ದೆಯ ನಿರಾಕರಣೆ

ದೇಶದೆಲ್ಲೆಡೆಗಳಲ್ಲಿ ಆದಿವಾಸಿಗಳು ಮೋದಿ ಸರಕಾರ ಸುಪ್ರಿಂ ಕೋರ್ಟಿನ ಎದುರು ವಿಚಾರಣೆಯಲ್ಲಿರುವ ಅರ್ಜಿಯಲ್ಲಿ ಅರಣ್ಯ ಹಕ್ಕುಗಳ ಕಾಯ್ದೆಯನ್ನು ರಕ್ಷಿಸಿಕೊಳ್ಳುವಲ್ಲಿ ಸಂಪೂರ್ಣ ವಿಫಲವಾಗಿರುವ ಬಗ್ಗೆ ತಮ್ಮ ಆಳವಾದ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಪಟ್ಟಾ ನಿರಾಕರಿಸಲ್ಪಟ್ಟ 23 ಲಕ್ಷ ಆದಿವಾಸಿ ಕುಟುಂಬಗಳ ಮೇಲೆ ಹೊರಹಾಕುವ ಬೆದರಿಕೆ ನೇತಾಡುತ್ತಿದೆ. ಕೇಂದ್ರ ಸರಕಾರ ಈ ರೀತಿ ಯಾರನ್ನೂ ಹೊರಹಾಕದಂತೆ ಅರಣ್ಯ ಹಕ್ಕುಗಳ ಕಾಯ್ದೆಯನ್ನು ನಿಸ್ಸಂದಿಗ್ಧವಾಗಿ ಸಮರ್ಥಿಸಿಕೊಳ್ಳಬೇಕು ಎಂದು ಸಿಪಿಐ(ಎಂ) ಆಗ್ರಹಿಸುತ್ತದೆ. ಅದೇ ವೇಳೆಗೆ ಅರಣ್ಯಗಳು ಮತ್ತು ಅರಣ್ಯ ಉತ್ಪನ್ನಗಳ ಮೇಲೆ ಬುಡಕಟ್ಟು ಸಮುದಾಯಗಳ ಹಕ್ಕುಗಳನ್ನು ವಂಚಿಸುವ ಸಾಧನವಾದ ವಸಾಹತುಶಾಹೀ ಕಲದ ಅರಣ್ಯ ಕಾಯ್ದೆ, 1927ನ್ನು ರದ್ದುಪಡಿಸುವ ಬದಲು ಮೋದಿ ಸರಕಾರ ಅದನ್ನು ಇನ್ನಷ್ಟು ಕರಾಳಗೊಳಿಸುವ ತಿದ್ದುಪಡಿಗಳನ್ನು ಮಾಡಿದೆ. ಈ ತಿದ್ದುಪಡಿಗಳನ್ನು ಹಿಂದೆತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಆಗ್ರಹಿಸುತ್ತದೆ. ಕೇಂದ್ರ ಸರಕಾರದ ಈ ಪ್ರಹಾರಗಳ ವಿರುದ್ಧ ನ್ಯಾಯಕ್ಕಾಗಿ ಆದಿವಾಸಿಗಳ ಹೋರಾಟವನ್ನು ಸಿಪಿಐ(ಎಂ) ಬೆಂಬಲಿಸುತ್ತದೆ.

## 'ಬೇಟಿ ಬಚಾವೋ' ವಿಷಯದಲ್ಲಿ ಬಿಜೆಪಿಯ ಸೋಗಲಾಡಿತನ

ಒಬ್ಬ ಅಪ್ರಾಪ್ತ ವಯಸ್ಸಿನವಳ ಮೇಲೆ ಅತ್ಯಾಚಾರದ ಉನ್ನಾವ್ ಪ್ರಕರಣ ಮತ್ತು ತದನಂತರ ಮುಖ್ಯ ಆಪಾದಿತನಾದ ಬಿಜೆಪಿ ಶಾಸಕನ ಕ್ರಿಮಿನಲ್ ಕೃತ್ಯಗಳು, ದೂರುದಾರಳನ್ನು ಮತ್ತು ಆಕೆಯ ಕುಟುಂಬವನ್ನು ನಿರ್ಮೂಲ ಮಾಡುವ ಕೃತ್ಯಗಳನ್ನು ನೋಡಿ ಇಡೀ ದೇಶಕ್ಕೆ ಆಘಾತವಾಗಿದೆ. ಇದು ಬಿಜೆಪಿಯ 'ಬೇಟಿ ಬಚಾವೋ'ದ ಸೋಗಲಾಡಿ ದಾವೆಗಳನ್ನು ಸಂಪೂರ್ಣವಾಗಿ ಬಯಲಿಗೆಳೆದಿದೆ. ರಾಷ್ಟ್ರವ್ಯಾಪಿ ಆಕ್ರೋಶದ ನಂತರ ಈಗಷ್ಟೇ ಈ ಕ್ರಿಮಿನಲ್ ಅನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. ಇದಕ್ಕೆ ಸಂಬಂಧಪಟ್ಟ ನಾಲ್ಕು ಕೇಸುಗಳನ್ನು ಉತ್ತರಪ್ರದೇಶದಿಂದ ಹೊರಗೆ ವರ್ಗಾಯಿಸುವ ಸುಪ್ರಿಂ ಕೋರ್ಟ್‌ನ ಸ್ವಾಗತಾರ್ಹ ಆದೇಶ ಉತ್ತರಪ್ರದೇಶ ಸರಕಾರವನ್ನು ತಪ್ಪಿತಸ್ಥವೆಂದು ತೋರಿಸುತ್ತದೆ. ಅದು ಅತ್ಯಾಚಾರ ಆಪಾದಿತನ್ನು ರಕ್ಷಿಸಲು ನ್ಯಾಯ ಪ್ರಕ್ರಿಯೆಯನ್ನೇ ಬುಡಮೇಲು ಮಾಡಲು ಪ್ರಯತ್ನಿಸಿತು. ಮಹಿಳೆಯರು ಮತ್ತು ನಿರ್ದಿಷ್ಟವಾಗಿ ಮಕ್ಕಳ ಮೇಲೆ ಲೈಂಗಿಕ ಅಪರಾಧಗಳು ಬಹಳವಾಗಿ ಹೆಚ್ಚುತ್ತಿರುವ ಸಮಯದಲ್ಲಿ ತಡೆ ಕ್ರಮಗಳಿಗೆ ಮತ್ತು ತ್ವರಿತ ನ್ಯಾಯಕ್ಕೆ ವರ್ಮಾ ಸಮಿತಿಯ ಶಿಫಾರಸುಗಳನ್ನು ಜಾರಿಗೊಳಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸುತ್ತದೆ.

## ಗಂಭೀರ ಪ್ರವಾಹ ಪರಿಸ್ಥಿತಿ

ದೇಶದ ವಿವಿಧ ಭಾಗಗಳಲ್ಲಿ ಪ್ರವಾಹವು ಮಾಡಿರುವ ಅನಾಹುತಗಳ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಳವಾದ ಆತಂಕವನ್ನು ವ್ಯಕ್ತಪಡಿಸುತ್ತದೆ. ಹಲವು ನದಿಗಳು ಉಕ್ಕಿ ಹರಿಯುತ್ತಿವೆ. ಇದರಿಮದಾಗಿ ದೊಡ್ಡ ಪ್ರಮಾಣದಲ್ಲಿ ವಿನಾಶ ಮತ್ತು ಪ್ರಾಣಹಾನಿಯಾಗಿದೆ. ಅಸ್ಸಾಂ, ಬಿಹಾರ್, ಉತ್ತರಪ್ರದೇಶ ಮತ್ತು ಇತರ ಹಲವು ರಾಜ್ಯಗಳು ತೀವ್ರ ಪ್ರವಾಹದಿಮದಾಗಿ ಅನಾಹುತಗಳಿಗೆ ಒಳಗಾಗಿವೆ.

ಇನ್ನಷ್ಟು ಹಾನಿಯನ್ನು ತಡೆಯಲು ರಾಜ್ಯ ಸರಕಾರಗಳಿಗೆ ಯುದ್ದೋಪಾದಿಯಲ್ಲಿ ಎಲ್ಲ ಅಗತ್ಯ ನೆರವನ್ನು ಒದಗಿಸಬೇಕು ಎಂದು ಪೊಲಿಟ್‌ಬ್ಯುರೊ ಕೇಂದ್ರ ಸರಕಾರಕ್ಕೆ ಕರೆ ನೀಡುತ್ತದೆ.

## ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನಾ ಶತಾಬ್ಧಿ

ಭಾರತ ಕಮ್ಯುನಿಸ್ಟ್ ಪಕ್ಷವನ್ನು ಅಕ್ಟೋಬರ್ 17, 1920ರಂದು ತಾಷ್ಕೆಂಟಿನಲ್ಲಿ ಸ್ಥಾಪಿಸಲಾಯಿತು. ಅಕ್ಟೋಬರ್ 17, 2019ರಿಂದ ಅಕ್ಟೋಬರ್ 17, 2020ರ ವರೆಗೆ ಈ ಶತಾಬ್ದಿಯ ಆಚರಣೆ ನಡೆಸಬೇಕು ಎಂದು ಪೊಲಿಟ್‌ಬ್ಯುರೊ ಇಡೀ ಪಕ್ಷಕ್ಕೆ ಕರೆ ನೀಡಿದೆ. ನಮ್ಮ ದೇಶದಲ್ಲಿ ಕಮ್ಯುನಿಸ್ಟ್ ಆಂದೋಲನದ ಶ್ರೀಮಂತ ಇತಿಹಾಸ, ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಅದರ ಕೊಡುಗೆಗಳು, ಮತ್ತು ಜನಗಳ ಬದುಕನ್ನು ಉತ್ತಮಪಡಿಸುವ ಸ್ವಾತಂತ್ರ್ಯೋತ್ತರ ಹೋರಾಟಗಳು ಹಾಗೂ ಕಾರ್ಮಿಕ ವರ್ಗದ, ರೈತಾಪಿಗಳ ಹಕ್ಕುಗಳಿಗೆ ಹೋರಾಟವನ್ನು ಎತ್ತಿ ತೋರಲಾಗುವುದು ಎಂದು ಅದು ಹೇಳಿದೆ.

# ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಜೆಎಂಎಸ್ ರಾಜ್ಯ ಸಮ್ಮೇಳನ ಆಗ್ರಹ......

ಪುಟ 8 ರಿಂದ

ಈ ದೌರ್ಜನ್ಯಗಳು ಮಹಿಳೆಯರನ್ನು ಕೇವಲ ದೈಹಿಕವಾಗಿ ಮಾತ್ರವಲ್ಲದೆ ಮಾನಸಿಕವಾಗಿ ಅತ್ಯಂತ ಹಿಂಸಾತ್ಮಕ ಬದುಕಿಗೆ ದೂಡಿದೆ ಎಂದು ಸಮ್ಮೇಳನ ವಿಶ್ಲೇಷಿದೆ.

ನ್ಯಾಯಮೂರ್ತಿ ವರ್ಮಾ ಕಮಿಟಿಯ ಶಿಪಾರಸ್ಸುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು.ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರಗಳನ್ನು ಗಂಭೀರ ಲೈಂಗಿಕ ಅಪರಾಧಗಳಾಗಿ ಪರಿಗಣಿಸಬೇಕು.

ವೈವಾಹಿಕ ಅತ್ಯಾಚಾರಗಳನ್ನು ಅಪರಾಧವಾಗಿ ಪರಿಗಣಿಸಬೇಕು.ಭಾರತೀಯ ದಂಡ ಸಂಹಿತೆಯ ಸೆಕ್ಷನ್ 498 ಂ ವರದಕ್ಷಿಣೆ ನಿಷೇಧ ಕಾಯ್ದೆ ಯನ್ನು ಸಂರಕ್ಷಿಸಬೇಕು. ಗರ್ಭಾವಸ್ಥೆಯಲ್ಲಿ ಶಿಶು ಲಿಂಗ ಪತ್ತೆ ನಿಷೇಧಿಸುವ ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು. ಹುಟ್ಟಿದ ಮನೆ ಹಾಗೂ ಮದುವೆಯಾದ ಮನೆ ಎರಡರಲ್ಲೂ ಮಹಿಳೆಯರಿಗೆ ಸಮಾನ ಆಸ್ತಿ ಹಕ್ಕು ಒದಗಿಸಬೇಕು.

ಮಹಿಳೆ ಹಾಗೂ ಮಕ್ಕಳ ಜೀವನಾಂಶ ಕಾಯ್ದೆಯನ್ನು ಬಲಪಡಿಸಬೇಕು. ದುಡಿಮೆ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ತಡೆ ಸಮಿತಿಗಳನ್ನು ಕಡ್ಡಾಯವಾಗಿ ರಚಿಸಬೇಕು ಎಂದು ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಮ್ಮೇಳನ ಆಗ್ರಹಿಸಿದೆ.

ಈ ನಿರ್ಣಯಗಳ ಜೊತೆ ಬೆಲೆ ಏರಿಕೆ ನಿಯಂತ್ರಿಸಿ, ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಬಲಪಡಿಸಲು, ಎಲ್ಲರಿಗೂ ಆಹಾರ ಭದ್ರತೆ ಒದಗಿಸುವಂತೆ, ಪಡಿತರ ಚೀಟಿ ಹಾಗೂ ರೇಷನ್ ಪಡೆಯಲು ಆಧಾರ್ ಜೋಡಣೆಯನ್ನು ಕೈ ಬಿಟ್ಟು ಪ್ರತಿ ಕುಟುಂಬಕ್ಕೆ ಪ್ರಾದೇಶಿಕ ಆಹಾರ ಪದ್ಧತಿಗನುಗುಣವಾಗಿ ಆಹಾರ ಧಾನ್ಯದ ಜೊತೆ ಬೇಳೆಕಾಳುಗಳು ಅಡುಗೆ ಎಣ್ಣೆ, ಸಕ್ಕರೆ ಸಹಿತ ಅಗತ್ಯ ವಸ್ತುಗಳ ಪೂರೈಸಬೇಕೆಂದೂ ರಾಜ್ಯ ಸಮ್ಮೇಳನ ಒತ್ತಾಯಿಸಿದೆ.

ಸಾರ್ವಜನಿಕ ಆರೋಗ್ಯ ರಂಗವನ್ನು ಬಲಪಡಿಸಲು ಜನತೆಯ ಆರೋಗ್ಯ ಹಕ್ಕುಗಳನ್ನು ರಕ್ಷಿಸಲು ಆಗ್ರಹಿಸಿ ಹಾಗೂ ನಗರ ನಿರುದ್ಯೋಗ ನಿವಾರಿಸಲು ಗ್ರಾಮೀಣ ಉದ್ಯೋಗ ಖಾತರಿ ಮಾದರಿಯಲ್ಲಿ ನಗರ ಉದ್ಯೋಗ ಖಾತರಿ ಕಾಯ್ದೆ ಜಾರಿಗೆ ತರಬೇಕೆಂದು ಸಹ ಮಂಡ್ಯದಲ್ಲಿ ನಡೆಯುತ್ತಿರುವ ಜನವಾದಿ ಮಹಿಳಾ ಸಂಘಟನೆಯ ಹತ್ತನೆ ರಾಜ್ಯ ಸಮ್ಮೇಳನ ಒತ್ತಾಯಿಸಿದೆ.







# ಕುಕೃತ್ಯಗಳನ್ನು ಮುಚ್ಚಿ ಹಾಕಲು ಭುಜಬಲ ಮತ್ತು ಹಣಬಲದ ಬಳಕೆಯ ನಗ್ನ ಪ್ರದರ್ಶನ ಉನ್ನಾವ್ ಪ್ರಕರಣ –ಎಐಡಿಡಬ್ಲ್ಯುಎ

ಜುಲೈ 28ರಂದು ಉತ್ತರಪ್ರದೇಶದ ರಾಯಬರೇಲಿ ಸಮೀಪ ನಡೆದ 'ಅಪಘಾತ' ಉನ್ನಾವ್‌ನ ಅತ್ಯಾಚಾರ ಪೀಡಿತ ಹುಡುಗಿಯನ್ನು ಮುಗಿಸಿ ಬಿಡುವ ಪ್ರಯತ್ನ ಎಂಬ ಬಲವಾದ ಸಂದೇಹದ ಹಿನ್ನೆಲೆಯಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಆಕೆಯನ್ನು ಮೌನವಾಗಿಸುವ ಪ್ರಯತ್ನಗಳನ್ನು ಬಲವಾಗಿ ಖಂಡಿಸಿದೆ. ಸಂತ್ರಸ್ತ ಹುಡುಗಿ, ಆಕೆಯ ವಕೀಲರು, ಮತ್ತು ಇಬ್ಬರು ಚಿಕ್ಕಮ್ಮಂದಿರು ಇದ್ದ ಕಾರನ್ನು ರಾಂಗ್ ಸೈಡಿನಲ್ಲಿ ವೇಗವಾಗಿ ಹೋಗುತ್ತಿದ್ದ ಟ್ರಕ್ ಅಪ್ಪಳಿಸಿದೆ. ಅದರ ನಂಬರ್ ಪ್ಲೇಟ್ ಮೇಲೆ ಗ್ರೀಸ್ ಬಳಿಯಲಾಗಿತ್ತು. ಅವರು ರಾಯ್‌ಬರೇಲಿ ಜೈಲಿನಲ್ಲಿರುವ ಹುಡುಗಿಯ ಚಿಕ್ಕಪ್ಪನನ್ನು ನೋಡಲು ಹೋಗುತ್ತಿದ್ದರು. ಆಕೆಯ ಭದ್ರತೆಗೆಂದು ಒದಗಿಸಲಾಗಿದ್ದ ಭದ್ರತಾ ಸಿಬ್ಬಂದಿ ಅಪಘಾತ ನಡೆದಾಗ ಜೊತೆಗಿರಲಿಲ್ಲ. ಆಕೆಯನ್ನು ರಕ್ಷಿಸಲೆಂದು ಇದ್ದವರೇ ಜೈಲಿನಲ್ಲಿದ್ದ ಬಿಜೆಪಿ ಶಾಸಕ ಕುಲದೀಪ್ ಸೆಂಗರ್‌ಗೆ ಆಕೆಯ ಪ್ರಯಾಣದ ಯೋಜನೆಯನ್ನು ತಿಳಿಸಿದ್ದರು ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ. ಇದು ಆಘಾತಕಾರಿ ಎಂದು ಎಐಡಿಡಬ್ಲ್ಯುಎ ಜುಲೈ 29ರಂದು ನೀಡಿರುವ ಹೇಳಿಕೆಯಲ್ಲಿ ತೀವ್ರ ಆತಂಕ ವ್ಯಕ್ತಪಡಿಸಿದೆ

ಆಪಾದಿತ ಜೈಲಿನಿಂದಲೇ ಫೋನ್ ಕರೆಗಳ ಮೂಲಕ ಕೇಸನ್ನು ಹಿಂತೆಗೆದುಕೊಳ್ಳದಿದ್ದರೆ ಸಾಯಿಸುವ ಬೆದರಿಕೆ ಹಾಕುತ್ತಿದ್ದ. ಬಿಜೆಪಿ–ಆರೆಸ್ಸೆಸ್ ಕೂಟ ತಮ್ಮ ವಿರೋಧಿಗಳ ಬಾಯಿಮುಚ್ಚಿಸಲು ಕೊಲೆ ಮಾಡುವ ವರೆಗೂ ಹೋಗಲು ತಮ್ಮ ಅಧಿಕಾರವನ್ನು ನಾಚಿಕೆಯಿಲ್ಲದೆ ಬಳಸುತ್ತಿದ್ದಾರೆ ಎಂಬುದು ಅತ್ಯಂತ ಆತಂಕದ ಸಂಗತಿ. ಈ ಹುಡುಗಿಯ ಇಬ್ಬರು ಚಿಕ್ಕಮ್ಮಂದಿರು ಈ ಅಪಘಾತದಲ್ಲಿ ಸತ್ತಿದ್ದಾರೆ. ಆಕೆ ಮತ್ತು ವಕೀಲರ ಸ್ಥಿತಿ ಗಂಭೀರವಾಗಿದೆ. ಎಐಡಿಡಬ್ಲ್ಯುಎನ ಉತ್ತರಪ್ರದೇಶ ಮುಖಂಡರು ಅವರನ್ನು ಭೇಟಿಯಾಗಲು ಅವರನ್ನು ಸೇರಿಸಿದ್ದ ಲಕ್ನೌ ಆಸ್ಪತ್ರೆಗೆ ಭೇಟಿ ನೀಡಿದ್ದಾರೆ.

ಈ ಉನ್ನಾವ್ ಅತ್ಯಾಚಾರ ಪ್ರಕರಣದಲ್ಲಿ ನಡೆಯುತ್ತಿರುವ ಘಟನೆಗಳು, ಉತ್ತರಪ್ರದೇಶದಲ್ಲಿ ಬಿಜೆಪಿ–ಆರೆಸ್ಸೆಸ್ ಆಳ್ವಿಕೆಯಲ್ಲಿ ಮೇಲಿನಲ್ಲಿರುವವರ ಕುಕೃತ್ಯಗಳನ್ನು ಮುಚ್ಚಿ ಹಾಕಲು ಭುಜಬಲ ಮತ್ತು ಹಣಬಲವನ್ನು ನಗ್ನ ರೀತಿಯಲ್ಲಿ ಬಳಸುತ್ತಿರುವುದನ್ನು ಸ್ಪಷ್ಟವಾಗಿ ಪ್ರದರ್ಶಿಸುತ್ತಿವೆ. 2017ರಲ್ಲಿ ಅತ್ಯಾಚಾರದ ಘಟನೆಯ ದೂರು ದಾಖಲಿಸಿದ ಕೆಲವು ತಿಂಗಳ ನಂತರ ಪ್ರಕರಣವನ್ನು ಸಿಬಿಐಗೆ ಒಪ್ಪಿಸಿದರೂ ಮತ್ತು ಸಿಬಿಐ ಬಿಜೆಪಿ ಶಾಸಕ ಕುಲದೀಪ್ ಸೆಂಗರ್ ಮತ್ತು ಆತನ ಬಂಟರುಗಳ ವಿರುದ್ಧ ಮೂರು ಚಾರ್ಜ್‌ಶೀಟ್‌ಗಳನ್ನು ಹಾಕಿದ್ದರೂ ಇದು ಇನ್ನೂ ವಿಚಾರಣೆಗೆ ಬಂದಿಲ್ಲ. ಈ ನಡುವೆ, ಹುಡುಗಿಯ ತಂದೆ ಜೈಲಿನಲ್ಲಿ ಸತ್ತರು, ಚಿಕ್ಕಪ್ಪ ಇನ್ನೂ ಜೈಲಿನಲ್ಲೇ ಇದ್ದಾರೆ. ಆವರನ್ನು, ಈ ಕುಟುಂಬವನ್ನು ಬೆದರಿಸಿ ಮಣಿಸಲಿಕ್ಕಾಗಿ ಸುಳ್ಳು ಕೇಸಿನಲ್ಲಿ ಸಿಗಿಸಲಾಗಿದೆ.

ಇಂತಹ ಸನ್ನಿವೇಶದಲ್ಲಿ, ಈಗ ಜೈಲಿನಲ್ಲಿದ್ದರೂ, ಅಲ್ಲಿಂದಲೇ ಅಪಾರ ಬಲಪ್ರಯೋಗ ನಡೆಸುತ್ತಿರುವ ಆಪಾದಿತ ಬಿಜೆಪಿ ಶಾಸಕನ ಪಾತ್ರ ಈ 'ಅಪಘಾತ'ದಲ್ಲಿ ಇದೆ ಎಂಬ ಬಲವಾದ ಸಂದೇಹವಿದ್ದು, ಆತ ಮತ್ತು ಹತ್ತು ಇತರರ ವಿರುದ್ಧ ಕೊಲೆ, ಕೊಲೆ ಪ್ರಯತ್ನ ಮತ್ತು ಕ್ರಿಮಿನಲ್ ಪಿತೂರಿಯ ಎಫ್‌ಐಆರ್ ಹಾಕಲಾಗಿದೆ. ಅದುವರೆಗೂ ಈ ಅತ್ಯಾಚಾರ ಆಪಾದಿತ ಶಾಸಕನ ವಿರುದ್ಧ ಬಿಜೆಪಿ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಉತ್ತರಪ್ರದೇಶದ ಮತ್ತು ದೇಶದ ಬಿಜೆಪಿ–ಆರೆಸ್ಸೆಸ್ ಆಡಳಿತ ಎಲ್ಲ ಪ್ರಜಾಪ್ರಭುತ್ವ ನಿಯಮಾವಳಿಗಳನ್ನು ಉಲ್ಲಂಘಿಸುತ್ತಿದೆ ಮತ್ತು ಎಲ್ಲ ವಿರೋಧಿಗಳನ್ನು ಬೆದರಿಸಿ, ಭಯ ಹುಟ್ಟಿಸಿ ಮಣಿಯುವಂತೆ ಮಾಡುತ್ತಿದೆ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಆದರೆ ಇಂತಹ ಭಯೋತ್ಪಾದನೆಯ ಎದುರು ಮಣಿಯಲು ನಿರಾಕರಿಸಿರುವ ಈ ಹುಡುಗಿ ಮತ್ತು ಆಕೆಯ ವಕೀಲರು ಬೇಗನೇ ಗುಣ ಹೊಂದಲಿ ಎಂದು ಆಶಿಸುತ್ತ ಎಐಡಿಡಬ್ಲ್ಯುಎ 1. ಇವರಿಬ್ಬರಿಗೂ ಅತ್ಯುತ್ತಮ ಚಿಕಿತ್ಸೆಯನ್ನು ಲಭ್ಯಗೊಳಿಸಬೇಕು, ಅದರ ಖರ್ಚು–ವೆಚ್ಚಗಳನ್ನು ಉತ್ತರಪ್ರದೇಶ ಸರಕಾರ ಭರಿಸಬೇಕು; 2. ಹುಡುಗಿಗೆ, ಆಕೆಯ ವಕೀಲರಿಗೆ ಮತ್ತು ಕುಟುಂಬಕ್ಕೆ ತಕ್ಷಣವೇ ರಕ್ಷಣೆ ಒದಗಿಸಬೇಕು; 3. ಆಕೆಯ ಸುರಕಿತತೆಗೆ ಹೊಣೆಯಾಗಿದ್ದ ಪೋಲಿಸ್ ಸಿಬ್ಬಂದಿಯ ಮೇಲೆ ಕ್ರಮ ಕೈಗೊಳ್ಳಬೇಕು; 4. ಜೈಲಿನಲ್ಲಿರುವ ಬಿಜೆಪಿ ಶಾಸಕನಿಗೆ ಫೋನ್ ಸೌಲಭ್ಯ ಸಿಕ್ಕಿರುವ ಬಗ್ಗೆ ತಕ್ಷಣವೇ ತನಿಖೆ ನಡೆಸಿ ಸಂಬಂಧಪಟ್ಟ ಜೈಲು ಅಧಿಕಾರಿಗಳ ಮೇಲೆ ಕರ್ತವ್ಯಚ್ಯುತಿಯ ಕ್ರಮ ಕೈಗೊಳ್ಳಬೇಕು; 5. ವಿಚಾರಣೆಯನ್ನು ಫಾಸ್ಟ್–ಟ್ರಾಕ್ ಕೋರ್ಟಿನಲ್ಲಿ ಸಮಯಬದ್ಧ ರೀತಿಯಲ್ಲಿ ಕೂಡಲೇ ಆರಂಭಿಸಬೇಕು; 6, ಆಕೆಗೆ ಮತ್ತು ಆಕೆಯ ಕುಟುಂಬಕ್ಕೆ ಕೊಟ್ಟಿರುವ ಚಿತ್ರಹಿಂಸೆ ಮತ್ತು ಕಿರುಕುಳಕ್ಕೆ ಸಾಕಷ್ಟು ಪರಿಹಾರ ನೀಡಬೇಕು ಮತ್ತು 7. ಸೆಂಗರ್‌ನನ್ನು ತಕ್ಷಣವೇ ಶಾಸಕನ ಪದದಿಂದ ಕಿತ್ತುಹಾಕಬೇಕು ಎಂದು ಆಗ್ರಹಿಸಿದೆ.

ಜನಗಳು ಪ್ರತಿಯೊಂದು ವೇದಿಕೆಯಿಂದಲೂ ಸಾರ್ವಜನಿಕವಾಗಿ ಈ ಘಟನೆಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಬೇಕು ಮತ್ತು ಇಂತಹ ಭಯ ಹುಟ್ಟಿಸುವವರಿಗೆ ತ್ವರಿತವಾಗಿ ಮತ್ತು ಕಠಿಣವಾದ ಶಿಕ್ಷೆ ವಿಧಿಸುವಂತೆ ಆಗ್ರಹಿಸಬೇಕು ಎಂದು ಎಐಡಿಡಬ್ಲ್ಯುಎ ಕರೆ ನೀಡಿದೆ. ದಿಲ್ಲಿಯಲ್ಲಿರುವ ಉತ್ತರಪ್ರದೇಶ ಭವನದ ಎದುರು ಸೇರಿದಂತೆ ದೇಶದ ಹಲವೆಡೆಗಳಲ್ಲಿ ಪ್ರತಿಭಟನೆಗಳು ನಡೆದಿವೆ.

ಈ ನಡುವೆ, ಜುಲೈ 12 ರಂದು ಈ ಸಂತ್ರಸ್ತ ಹುಡುಗಿ ಫೋನ್ ಬೆದರಿಕೆಗಳು ಮತ್ತು ಶಾಸಕನ ಕೆಲವು ಬಂಟರು ಮನೆಗೆ ಬಂದು ಬೆದರಿಸಿದ ಹಿನ್ನೆಲೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ರಕ್ಷಣೆ ಕೋರಿ ಬರೆದ ಪತ್ರ ಜುಲೈ17ರಂದು ತಲುಪಿದ್ದರೂ ಮುಖ್ಯ ನ್ಯಾಯಾಧೀಶರ ಗಮನಕ್ಕೆ ಬಂದದ್ದು ಈ 'ಅಪಘಾತ' ನಡೆದ ನಂತರವೇ. ಇದನ್ನು ಗಂಬೀರವಾಗಿ ಪರಿಗಣಿಸಿದ ಸುಪ್ರಿಂ ಕೋರ್ಟ್ ಆಗಸ್ಟ್ 1 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲ ಕೇಸುಗಳನ್ನು ಉತ್ತರಪ್ರದೇಶದ ಹೊರಗೆ ದಿಲ್ಲಿಗೆ ವರ್ಗಾಯಿಸಬೇಕು, ಏಳುದಿನಗಳೊಳಗೆ, ತಪ್ಪಿದರೆ 15 ದಿನಗಳೊಳಗೆ 'ಅಪಘಾತ'ದ ತನಿಖೆಯನ್ನು ಸಿಬಿಐ ಪೂರ್ಣಗೊಳಿಸಬೇಕು, ಮುಖ್ಯ ಪ್ರಕರಣದ ವಿಚಾರಣೆಯನ್ನು 45 ದಿನಗಳೊಳಗೆ ಪೂರ್ಣಗೊಳಿಸಬೇಕು ಹಾಗೂ ಉತ್ತರಪ್ರದೇಶ ಸರಕಾರ ಸಂತ್ರಸ್ತೆಯ ಕುಟುಂಬಕ್ಕೆ ಮಧ್ಯಂತರ ಪರಿಹಾರವಾಗಿ 25 ಲಕ್ಷ ರೂ. ನೀಡಬೇಕು ಎಂದು ಆದೇಶ ನೀಡಿದೆ.

ಇದು ಉತ್ತರಪ್ರದೇಶ ಸರಕಾರದ ಆಳ್ವಿಕೆಯ ಕುರಿತಾದ ಒಂದು ಕಟು ಟಿಪ್ಪಣಿ ಎಂದು ಪ್ರಜಾಪ್ರಭುತ್ವವಾದಿ ಶಕ್ತಿಗಳು ಸ್ವಾಗತಿಸಿವೆ. ಈ ನಡುವೆ ದೇಶಾದ್ಯಂತ ವ್ಯಕ್ತಗೊಂಡ ಆಕ್ರೋಶದ ಹಿನ್ನೆಲೆಯಲ್ಲಿ ಆಪಾದಿತ ಬಿಜೆಪಿ ಶಾಸಕನನ್ನು ಬಿಜೆಪಿಯ ಕೇಂದ್ರ ಮುಖಂಡತ್ವ ಪಕ್ಷದಿಂದ ಕೊನೆಗೂ ಉಚ್ಚಾಟಿಸಿದೆ ಎಂದು ವರದಿಯಾಗಿದೆ. ●

## ಮುಸ್ಲಿಂ ಮಹಿಳೆಯರನ್ನು ಬಾಣಲೆಯಿಂದ ಬೆಂಕಿಗೆ ದೂಡುವ ತ್ರಿವಳಿ ತಲಾಕ್ ನಿಷೇಧ ಮಸೂದೆಯ ಅಂಗೀಕಾರವನ್ನು ವಿರೋಧಿಸಿ ನಿರ್ಣಯ......

ಪುಟ 8 ರಿಂದ

ತಂದ ಕೋಮುವಾದೀ ಅಜೆಂಡಾದ ಭಾಗವಾಗಿದೆ. ಈಗಾಗಲೇ ನಡೆಯುತ್ತಿರುವ ಹಲವು ಆಘಾತಕಾರಿ ಘಟನೆಗಳ ಮುಂದುವರೆದ ಭಾಗವಾಗಿ ಈ ಮಸೂದೆ ಕೂಡಾ ಬಂದಿದೆ.

ಸರ್ವೋಚ್ಚ ನ್ಯಾಯಾಲಯವು ಶಾಯಿರಾಬಾನೋ ಪ್ರಕರಣದಲ್ಲಿ ಈಗಾಗಲೇ ತ್ರಿವಳಿ ತಲಾಕ್ ನ್ನು ನಿಷೇಧಿಸಿದೆ. ಮತ್ತು ಅದು ಸಕ್ರಮ ವಿಚ್ಛೇದನವಾಗಿ ಮಾನ್ಯವಲ್ಲ ಎಂದು ಹೇಳಿದೆ.

ತ್ರಿವಳಿ ತಲಾಖ್‌ನ್ನು ಉಚ್ಚರಿಸುವುದರಿಂದ ಮಹಿಳೆಗೆ ಹೆಂಡತಿಯಾಗಿ ಇರುವ ಅಧಿಕಾರ ಮೊಟಕುಗೊಳ್ಳುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ ಮೇಲೂ ಗಂಡನನ್ನು ಜೈಲಿಗೆ ಹಾಕುವುದರ ಸೂಕ್ತವಲ್ಲ. ಮಾಡಿದ ಅಪರಾಧ ಮತ್ತು ವಿಧಿಸುವ ಶಿಕ್ಷೆಗಳ ಮಧ್ಯೆ ತಾಳ ಮೇಳವಿಲ್ಲ. ಗಂಡ ತ್ರಿವಳಿ ತಲಾಕ್ ನೀಡಿದರೆ ಅದರ ಜೊತೆಗೆ ತನ್ನ ಮೇಲೆ ನಡೆದ ಕೌಟುಂಬಿಕ ಹಿಂಸಾಚಾರದ ಅಡಿಯಲ್ಲಿ ವರದಕ್ಷಿಣೆ 498ಏ ಅಡಿಯಲ್ಲಿ ದಾಖಲಿಸಬಹುದು. ಆದರೆ ಆ ಕಾನೂನನ್ನು ದುರ್ಬಲಗೊಳಿಸಲಾಗಿದೆ.

ಇಂತಹ ಯಾವುದೇ ಮಸೂದೆಯನ್ನು ವಿಸ್ತಾರವಾದ ಚರ್ಚೆಗೆ ಬಿಡುವುದು ಪ್ರಜಾಪ್ರಭುತ್ವದ ರೀತಿ. ಅದಕ್ಕಾಗಿ ಈ ಸರಕಾರದ ಹಿಂದಿನ ಅವಧಿಯಲ್ಲಿ ಪ್ರಸ್ತಾಪ ಮಾಡಿದಾಗಲೇ ಇದನ್ನು ಜಂಟಿ ಸದನ ಸಮಿತಿ/ ಸ್ಥಾಯೀ ಸಮಿತಿಗೆ ಒಪ್ಪಿಸಲು ಒತ್ತಾಯಿಸಲಾಗಿತ್ತಾದರೂ ಅದನ್ನು ಗಣನೆಗೆ ತೆಗೆದುಕೊಳ್ಳದೆ ಆಗ ಸುಗ್ರೀವಾಜ್ಞೆಯ ಮೂಲಕ ಈಗ ತರಾತುರಿಯಲ್ಲಿ ಅಂಗೀಕಾರಮಾಡಲಾಗಿದ್ದನ್ನು ಹತ್ತನೇ ರಾಜ್ಯ ಸಮ್ಮೇಳನವು ಖಂಡಿಸುತ್ತದೆ.

ಸಾಲದೆಂಬಂತೆ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯ ಅಡಿಯಲ್ಲಿ ಮಹಿಳೆಯ ಅಧಿಕಾರವಾದ ವಸತಿ, ಮತ್ತು ಘನತೆಯ ಬದುಕಿಗೆ ಬೇಕಾದ ಜೀವನಾಂಶದ ಬದಲಿಗೆ ಬದುಕಿರಲು ಮಾತ್ರ ಸಾಕಾಗುವ ಹಣ ನೀಡುವ ಮೂಲಕ ಅವಳನ್ನು ಸಂಕಷ್ಟಕ್ಕೆ ದೂಡುತ್ತಿದೆ ಈ ಮಸೂದೆ.

ಈ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಿದಾಗ ಅದರ ವಿರುದ್ಧ ಮತಚಲಾಯಿಸಬೇಕಿದ್ದ ಜೆ.ಡಿ.ಯು ಮತ್ತು ಎ.ಐ.ಡಿ.ಎಂ.ಕೆ. ಸದನತ್ಯಾಗ ಮಾಡಿ ಮಸೂದೆಯ ಅಂಗೀಕಾರಕ್ಕೆ ಸುಗಮ ಮಾಡಿ ಕೊಟ್ಟಿರುವುದನ್ನು ಸಮ್ಮೇಳನ ಖಂಡಿಸುತ್ತದೆ.

ದೇಶದ ಸಾಮರಸ್ಯ ಕದಡುವ ಉದ್ದೇಶದ ಈ ಮಸೂದೆಗೆ ರಾಷ್ಟ್ರಪತಿಗಳು ಅಂಕಿತ ಹಾಕಬಾರದೆಂದು ಅಖಿಲ ಬಾರತ ಜನವಾದಿ ಮಹಿಳಾ ಸಂಘಟನೆಯ ಕರ್ನಾಟಕ ರಾಜ್ಯ ಹತ್ತನೇ ಸಮ್ಮೇಳನವು ಒತ್ತಾಯಿಸುತ್ತದೆ. ●

# ಹಣಕಾಸು ಬಂಡವಾಳದ ಯಜಮಾನಿಕೆಗಾಗಿ ಸಾಲು ಸಾಲು ಸುಳ್ಳು ಸಿದ್ಧಾಂತಗಳು.......




**ತೊಂಭತ್ತು ವರ್ಷಗಳ ಹಿಂದೆಯೇ ಅಪಕೀರ್ತಿಗೊಳಗಾಗಿದ್ದ ಒಂದು ವಾದವನ್ನು ಹಣಕಾಸು ಬಂಡವಾಳವು ಮುಂದಿಡುತ್ತಿದೆ ಮತ್ತು ಅದನ್ನೇ ನಮ್ಮ ಸರ್ಕಾರದ ಹಿರಿಯ ಅಧಿಕಾರಿಗಳು ಪ್ರತಿಧ್ವನಿಸುತ್ತಿದ್ದಾರೆ. ಏಕೆಂದರೆ, ಪ್ರಭುತ್ವವು ತನ್ನ ಖರ್ಚುವೆಚ್ಚಗಳ ಮೂಲಕವೇ ಉದ್ಯೋಗಾವಕಾಶಗಳನ್ನು ನೇರವಾಗಿ ಹೆಚ್ಚಿಸುವ ಸಲುವಾಗಿ ಅರ್ಥವ್ಯವಸ್ಥೆಯಲ್ಲಿ ಮಧ್ಯಪ್ರವೇಶಿಸುವುದನ್ನು ಹಣಕಾಸು ಬಂಡವಾಳವು ವಿರೋಧಿಸುತ್ತದೆ. ಅದರ ಬದಲಿಗೆ, ಬಂಡವಾಳಗಾರರು ಹೆಚ್ಚು ಹೂಡಿಕೆ ಮಾಡುವಂತಾಗಲು ಅವರಿಗೆ ಪ್ರಭುತ್ವವು ಎಲ್ಲ ರೀತಿಯ ಉತ್ತೇಜನ, ಸೌಲಭ್ಯಗಳನ್ನು ಒದಗಿಸಬೇಕೆಂದು ಹಣಕಾಸು ಬಂಡವಾಳವು ಅಪೇಕ್ಷಿಸುತ್ತದೆ...**

**ಸಾಲು ಸಾಲು ಸುಳ್ಳು ಸಿದ್ಧಾಂತಗಳನ್ನೇ ಮುಂದೊತ್ತುವ ಮೂಲಕ ಹಣಕಾಸು ಬಂಡವಾಳವು ತನ್ನ ಅಧಿನಾಯಕತ್ವವನ್ನು ಚಲಾಯಿಸುತ್ತದೆ. ಇಂತಹ ಸಿದ್ಧಾಂತಗಳ ಸುಳ್ಳನ್ನು ಸತತವಾಗಿ ಬಯಲುಗೊಳಿಸುತ್ತಿರ ಬೇಕಾಗುತ್ತದೆ.**

**ಪ್ರೊ. ಪ್ರಭಾತ್ ಪಟ್ನಾಯಕ್** ಅನು: ಕೆ.ಎಂ.ನಾಗರಾಜ್

ಸರ್ಕಾರ ಹೊಸ ಸಾಲ ಎತ್ತುವ ತಯಾರಿಯಲ್ಲಿರುವ ಸಂದರ್ಭದಲ್ಲಿ ಎರಡು ಭಿನ್ನ ಅಭಿಪ್ರಾಯಗಳು ಕೇಳಿ ಬಂದಿವೆ. ಸರ್ಕಾರ ಎತ್ತುವ ಸಾಲವು ಕಡಿಮೆ ಪ್ರಮಾಣದಲ್ಲಿದ್ದರೆ, ಖಾಸಗಿ ವಲಯವು ಹೆಚ್ಚು ಪ್ರಮಾಣದ ಸಾಲ ಎತ್ತಲು ಉಳಿತಾಯಗಳು ಹೆಚ್ಚು ಲಭ್ಯವಾಗುತ್ತವೆ ಎಂಬುದಾಗಿ ಹಣಕಾಸು ಕಾರ್ಯದರ್ಶಿ ಮೊದಲು ಹೇಳಿದರು. ನಂತರ, ಇದೇ ವಿಷಯವಾಗಿ, ಖಾಸಗಿ ವಲಯದವರು ಒಳಗೆ ಕಾಲಿಡಲು ಜಾಗವಿಲ್ಲದಷ್ಟು ಮಟ್ಟಿಗೆ ಸರ್ಕಾರವು ಸಾಲದ ಮಾರುಕಟ್ಟೆಯನ್ನು "ಕಿಕ್ಕಿರಿದು ಆವರಿಸಿದೆ" ಎಂಬುದಾಗಿ ಭಾರತೀಯ ರಿಸರ್ವ್ ಬ್ಯಾಂಕಿನ ಡೆಪ್ಯುಟಿ ಗವರ್ನರ್ ಹೇಳಿದರು. ಈ ಎರಡೂ ಹೇಳಿಕೆಗಳಲ್ಲಿ ಇಂಗಿತವಾಗಿರುವ ಒಂದು ಸಮಾನ ಅಂಶವೆಂದರೆ, ಉಳಿತಾಯಗಳ ಒಂದು ನಿರ್ದಿಷ್ಟ ಸಂಚಿತ ನಿಧಿ ಇರುತ್ತದೆ, ಅದು ನಿಗದಿತ ಎನ್ನಬಹುದಾದ್ದು, ಆದ್ದರಿಂದ ಈ ನಿಧಿಯಿಂದ ಸರ್ಕಾರ ಹೆಚ್ಚು ಪ್ರಮಾಣದ ಸಾಲ ಪಡೆದರೆ, ಖಾಸಗಿ ವಲಯಕ್ಕೆ ದೊರೆಯುವ ಸಾಲದ ಪ್ರಮಾಣ ಕಡಿಮೆಯಾಗುತ್ತದೆ!

ಉಳಿತಾಯಗಳ ಸಂಚಿತ ನಿಧಿ ಒಂದು ನಿಗದಿತ ಪ್ರಮಾಣದಲ್ಲಿರುತ್ತದೆ ಎಂಬ ತತ್ವವೇ ತಪ್ಪು ಎಂಬುದನ್ನು ತೊಂಭತ್ತು ವರ್ಷಗಳ ಹಿಂದೆ, 1931ರಲ್ಲಿ, ರಿಚರ್ಡ್ ಕಾಹ್ನ್ ಎಂಬ ಕೀನ್ಸ್ ಪಂಗಡದ ಅರ್ಥಶಾಸ್ತ್ರಜ್ಞ ದೃಢಪಡಿಸಿದ್ದರು. ನಂತರದಲ್ಲಿ ಅದು ಸಂಪ್ರದಾಯವಾದಿ ಅರ್ಥಶಾಸ್ತ್ರದಲ್ಲಿ, ಜಾನ್ ಮೇನಾರ್ಡ್ ಕೀನ್ಸ್ ಪ್ರತಿಪಾದಿಸಿದ ಕ್ರಾಂತಿಕಾರಿ ಸೈದ್ಧಾಂತಿಕ ಮಾರ್ಪಾಡುಗಳಿಗೆ ಆಧಾರವೂ ಆಗಿತ್ತು. ಕೀನ್ಸ್ ಸ್ವತಃ ಒಬ್ಬ ಬೂರ್ಜ್ವಾ ಅರ್ಥಶಾಸ್ತ್ರಜ್ಞ. ಬಂಡವಾಳಶಾಹಿಗೆ ಸಮಾಜವಾದವು ಒಡ್ಡಿದ ಸವಾಲಿನಿಂದ ಬಂಡವಾಳಶಾಹಿಯನ್ನು ಉಳಿಸಿಕೊಳ್ಳುವ ಕಾತರದಲ್ಲಿದ್ದ ಕೀನ್ಸ್; ನಿಖರವಾಗಿ ಅದೇ ಕಾರಣದಿಂದಾಗಿ, ಸದಾಕಾಲವೂ ಪೀಡಿಸುತ್ತಿರುವ ಸಹಿಸಲಸಾಧ್ಯ ಮಟ್ಟದ ನಿರುದ್ಯೋಗವು ಬಂಡವಾಳಶಾಹಿಯ ಒಂದು ಮಾರಕ ನ್ಯೂನತೆ ಎಂದಿದ್ದರು ಮತ್ತು ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ನಿರುದ್ಯೋಗ ಸಮಸ್ಯೆಯ ತೀವ್ರತೆಯನ್ನು ತಗ್ಗಿಸುವ ಸಲುವಾಗಿ ಪ್ರಭುತ್ವವು ಮಧ್ಯಪ್ರವೇಶಿಸಬೇಕು ಎಂದಿದ್ದರು.

ಕೀನ್ಸ್ ಅವರ ಪ್ರತಿಪಾದನೆ ಕಾರ್ಯತಃ ಯಶಸ್ವಿಯಾಗಲಿಲ್ಲ. ಬಂಡವಾಳಶಾಹಿಯು ಸರಿಪಡಿಸಲಾಗದಷ್ಟು ಹಾಳಾಗಿರುವ ಒಂದು ವ್ಯವಸ್ಥೆ ಎಂಬುದು ಸಾಬೀತಾಗಿದೆ. ಆದರೆ, ಬಂಡವಾಳಶಾಹಿಯ ಬಗ್ಗೆ ಕೀನ್ಸ್ ಅವರು ಕಂಡ ಒಳನೋಟಗಳು, ಅದೇ ಸಮಕಾಲೀನ ಸಮಯದಲ್ಲಿ ಪೋಲೆಂಡ್ ಮೂಲದ ಮಾರ್ಕ್ಸ್‌ವಾದಿ ಅರ್ಥಶಾಸ್ತ್ರಜ್ಞ ಮೈಕೆಲ್ ಕಲೇಕಿ ಅವರು ಸ್ವತಂತ್ರವಾಗಿ ಕಂಡ ಅದೇ ರೀತಿಯ ಒಳನೋಟಗಳು ಮತ್ತು ಅದಕ್ಕಿಂತ ಮುಕ್ಕಾಲು ಶತಮಾನದ ಮೊದಲೇ ಕಾರ್ಲ್ ಮಾರ್ಕ್ಸ್‌ರವರು ಬಂಡವಾಳಶಾಹಿಯ ಬಗ್ಗೆ ವ್ಯಕ್ತಪಡಿಸಿದ ಹೆಚ್ಚು ಕಡಿಮೆ ಅದೇ ರೀತಿಯ ಆಲೋಚನೆಗಳು ಇಂದಿಗೂ ಅಮೂಲ್ಯವಾಗಿ ಉಳಿದಿವೆ. ಆದರೂ, ಭಾರತ ಸರ್ಕಾರದ ಹಣಕಾಸು ಕಾರ್ಯದರ್ಶಿ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ಡೆಪ್ಯುಟಿ ಗವರ್ನರ್ ಇವರುಗಳು ತೊಂಭತ್ತು ವರ್ಷಗಳ ಹಿಂದೆಯೇ ಅಪಕೀರ್ತಿಗೊಳಗಾಗಿದ್ದ ಒಂದು ತಾತ್ವಿಕ ನಿಲುವನ್ನು ಈಗ ಮುಂದಿಟ್ಟಿರುವುದು ವಿಸ್ಮಯಕರವಾಗಿದೆ.

ಉಳಿತಾಯಗಳ ಸಂಚಿತ ನಿಧಿ ನಿಗದಿತ ಎಂಬ ತತ್ವವು ಏಕೆ ತಪ್ಪು ಎಂಬುದನ್ನು ಈ ಕೆಲವು ಕಾರಣಗಳು ತಿಳಿಸುತ್ತವೆ: ಉಳಿತಾಯಗಳು ಒಂದು ಅರ್ಥವ್ಯವಸ್ಥೆಯ ವರಮಾನದ ಮಟ್ಟವನ್ನು ಅವಲಂಬಿಸುತ್ತವೆ ಎಂಬುದು ಸ್ಪಷ್ಟವೇ. ಆದ್ದರಿಂದ, ಅರ್ಥವ್ಯವಸ್ಥೆಯಲ್ಲಿ ಉಳಿತಾಯಗಳ ಒಂದು ಸಂಚಿತ ನಿಧಿ ಇದೆ, ಅದು ನಿಗದಿತವಾಗಿದೆ ಎಂಬ ವಾದವು, ಆ ಅರ್ಥವ್ಯವಸ್ಥೆಯಲ್ಲಿ ವರಮಾನವೂ ಒಂದು ನಿಶ್ಚಿತ ಮಟ್ಟದಲ್ಲೇ ಇರುತ್ತದೆ ಎಂದು ಭಾವಿಸುತ್ತದೆ. ಇದು ಅರ್ಥವ್ಯವಸ್ಥೆಯಲ್ಲಿ ಪೂರ್ಣ ಉದ್ಯೋಗದ ಪರಿಸ್ಥಿತಿ ಇದೆ ಎಂಬ ಅರ್ಥವನ್ನೂ ಕೊಡುತ್ತದೆ. (ಒಂದು ವೇಳೆ ಪೂರ್ಣ ಉದ್ಯೋಗದ ಪರಿಸ್ಥಿತಿ ಇದ್ದರೂ ಸಹ ಇದು ತಪ್ಪು ತತ್ವವೇ, ಸಧ್ಯಕ್ಕೆ ಅದನ್ನು ದಾಟಿ ಮುಂದೆ ಹೋಗೋಣ). ಒಂದು ವೇಳೆ ಅರ್ಥವ್ಯವಸ್ಥೆಯಲ್ಲಿ ಪೂರ್ಣ ಉದ್ಯೋಗದ ಪರಿಸ್ಥಿತಿ ಇಲ್ಲದಿದ್ದರೆ (ಅಥವಾ ಪೂರ್ಣ ಸಾಮರ್ಥ್ಯದ ಉತ್ಪಾದನೆ ಇಲ್ಲದಿದ್ದರೆ), ಆಗ ಸರ್ಕಾರದ ಖರ್ಚುಗಳ ಹೆಚ್ಚಳವು ಬೇಡಿಕೆಯನ್ನು ವೃದ್ಧಿಸುತ್ತದೆ. ಅದರಿಂದಾಗಿ ಉದ್ಯೋಗ ಹೆಚ್ಚುತ್ತದೆ, ಉತ್ಪತ್ತಿ ಹೆಚ್ಚುತ್ತದೆ ಮತ್ತು ಪರಿಣಾಮವಾಗಿ ಉಳಿತಾಯವೂ ಹೆಚ್ಚುತ್ತದೆ.

ವಿಷಯದ ಸರಳತೆಗಾಗಿ, ಒಂದು ಮುಚ್ಚಿದ ಅರ್ಥವ್ಯವಸ್ಥೆ ಇದೆ ಎಂದು ಕಲ್ಪಿಸಿಕೊಳ್ಳೋಣ. ಅಲ್ಲಿ, ಸರ್ಕಾರ ಸಾಲ ಮಾಡುತ್ತದೆ ಮತ್ತು ಅದನ್ನು ಖರ್ಚು ಮಾಡುತ್ತದೆ. ಆಗ, ಈ ಖರ್ಚುವೆಚ್ಚಗಳನ್ನು ಕೈಗೊಳ್ಳುವುದಕ್ಕೂ ಮೊದಲೇ ಆ ಅರ್ಥವ್ಯವಸ್ಥೆಯಲ್ಲಿ ಸೃಷ್ಟಿಯಾಗುತ್ತಿದ್ದ ಉಳಿತಾಯಗಳ ಜೊತೆಗೆ, ಸರ್ಕಾರ ಖರ್ಚು ಮಾಡಿದ ಹಣಕ್ಕೆ ಸರಿಸಮನಾದ ಅಧಿಕ ಖಾಸಗಿ ಉಳಿತಾಯಗಳು ಸೃಷ್ಟಿಯಾಗುತ್ತವೆ ಮತ್ತು ಇಷ್ಟೊಂದು ಅಧಿಕ ಖಾಸಗಿ ಉಳಿತಾಯಗಳನ್ನು ಸೃಷ್ಟಿಸುವಷ್ಟು ಹೆಚ್ಚುವರಿ ವರಮಾನ ಸೃಷ್ಟಿಯಾಗುತ್ತದೆ.

ಉದಾಹರಣೆಯಾಗಿ, ಒಂದು ಅರ್ಥವ್ಯವಸ್ಥೆಯಲ್ಲಿ ಕೂಲಿ ಮತ್ತು ಲಾಭಗಳ ಪಾಲು ನಿಖರವಾಗಿ ಅರ್ಧ ಮತ್ತು ಅರ್ಧ ಇದೆ ಎಂದಿಟ್ಟುಕೊಳ್ಳೋಣ. ಅಲ್ಲಿ ಕಾರ್ಮಿಕರು ಉಳಿತಾಯ ಮಾಡುವುದಿಲ್ಲ. ಆದರೆ, ಬಂಡವಾಳಗಾರರು ತಾವು ಗಳಿಸಿದ ಲಾಭದಲ್ಲಿ ಅರ್ಧ ಭಾಗವನ್ನು ಉಳಿತಾಯ ಮಾಡುತ್ತಾರೆ. ಸರ್ಕಾರ 100ರೂ ವೆಚ್ಚಮಾಡುತ್ತದೆ, ಅದನ್ನು ಪೂರ್ಣವಾಗಿ ಸಾಲದಿಂದಲೇ ಪಡೆದಿರುತ್ತದೆ. ಅದರಿಂದಾಗಿ, ಆರ್ಥವ್ಯವಸ್ಥೆಯಲ್ಲಿ 400 ರೂಗಳ ಅಧಿಕ ವರಮಾನ ಉಂಟಾಗುತ್ತದೆ. ಆ 400 ರೂಗಳಲ್ಲಿ, 200ರೂ ಕೂಲಿಯ ಭಾಗವನ್ನು ಕಾರ್ಮಿಕರು ಸಂಪೂರ್ಣವಾಗಿ ಖರ್ಚು ಮಾಡುತ್ತಾರೆ. 200 ರೂಗಳ ಲಾಭದ ಪಾಲಿನಲ್ಲಿ ಬಂಡವಾಳಗಾರರು ಅರ್ಧ ಭಾಗ ಉಳಿಸುತ್ತಾರೆ. ಅಂದರೆ 300 ರೂ ಬಳಕೆಯಾಗುತ್ತದೆ ಮತ್ತು 100 ರೂ ಉಳಿತಾಯವಾಗುತ್ತದೆ. ಅಂದರೆ, ಸರ್ಕಾರ ಎಷ್ಟು ಹಣವನ್ನು ಸಾಲ ಮಾಡಿ ಖರ್ಚು ಮಾಡಿತ್ತೋ ಅಷ್ಟೇ ಹಣ ಬಂಡವಾಳಗಾರರ ಕೈ ಸೇರುತ್ತದೆ, ಬಂಡವಾಳಗಾರರಿಗೂ ಸರ್ಕಾರದ ಈ ಖರ್ಚುಗಳಿಗೂ ಯಾವ ಸಂಬಂಧವಿಲ್ಲದಿದ್ದರೂ ಸಹ. ಆದ್ದರಿಂದ, ಸಾಲದ ಮಾರುಕಟ್ಟೆ "ಕಿಕ್ಕಿರಿಯುವ" ಪ್ರಶ್ನೆ ಉದ್ಭವವಾಗುವುದಿಲ್ಲ. ಸಾಲ ಪಡೆದು ಖರ್ಚು ಮಾಡಿದ ಹಣವು, ನಿಗದಿತ ಬಡ್ಡಿ ದರ ಎಷ್ಟೇ ಇರಲಿ, ಖಾಸಗಿ ಹೂಡಿಕೆಗಿಂತಲೂ ಹೆಚ್ಚು ಮಟ್ಟದ ಖಾಸಗಿ ಉಳಿತಾಯಗಳನ್ನು ಸೃಷ್ಟಿಸುತ್ತದೆ. ಎಷ್ಟು ಎಂದರೆ, ಒಂದು ಮುಚ್ಚಿದ ಅರ್ಥವ್ಯವಸ್ಥೆಯಲ್ಲಿ ಎಷ್ಟು ಅಧಿಕ ಖಾಸಗಿ ಉಳಿತಾಯಗಳು ಸೃಷ್ಟಿಯಾಗುತ್ತಿದ್ದವೋ ಅಷ್ಟು. (ಒಂದು ಮುಕ್ತ ಅರ್ಥವ್ಯವಸ್ಥೆಯಲ್ಲಿ, ಖಾಸಗಿ ವಲಯದ ಮತ್ತು ಜಗತ್ತಿನ ಇತರ ಭಾಗಗಳ ಮಿಗುತಾಯ, ಅಂದರೆ ಮತ್ತು ಪಾವತಿಶೇಷದ ಮೇಲಿನ ಚಾಲ್ತಿ ಖಾತೆ ಕೊರತೆ, ಒಟ್ಟಾಗಿ, ವಿತ್ತೀಯ ಕೊರತೆಯ ಮೊತ್ತಕ್ಕೆ ಸಮನಾಗಿರಬೇಕು).

ಸರ್ಕಾರವು ಬಾಂಡ್‌ಗಳನ್ನು ಮಾರಾಟಕ್ಕೆ ಬಿಡುಗಡೆ ಮಾಡಿದಾಗ, ಖಾಸಗಿ ಬಾಂಡ್‌ಗಳ ಮಾರಾಟಕ್ಕೆ ತಕ್ಷಣದಲ್ಲಿ ಸ್ವಲ್ಪ ತೊಂದರೆ ಆಗಬಹುದು. ಆದರೆ, ಅದು ಬೇಗನೇ ಮಾಯವಾಗುತ್ತದೆ. ಅಂದರೆ, ಈ ಪ್ರಕ್ರಿಯೆ ಜರುಗುವ ಒಟ್ಟಾರೆ ಅವಧಿಯನ್ನು ಪರಿಗಣಿಸಿದರೆ, ಸರ್ಕಾರವು ಬಾಂಡ್‌ಗಳ ಮೂಲಕ ಎತ್ತುವ ಸಾಲಗಳು ಖಾಸಗಿ ಬಾಂಡ್‌ಗಳ ಮಾರಾಟದ ಮೂಲಕ ಆಗುವ ಹೂಡಿಕೆಯನ್ನು ತಗ್ಗಿಸುವುದಿಲ್ಲ. ಆದರೆ, ಖಾಸಗಿ ಹೂಡಿಕೆಗಿಂತಲೂ ಹೆಚ್ಚು ಮಟ್ಟದ ಖಾಸಗಿ ಉಳಿತಾಯಗಳನ್ನು ಸೃಷ್ಟಿಸುತ್ತದೆ. ಎಷ್ಟು ಎಂದರೆ, ಸರ್ಕಾರ ಎತ್ತಿದ ಸಾಲದಷ್ಟು. ಏಕ ಕಾಲದಲ್ಲಿ ಇಬ್ಬರು ಒಂದು ಬಾಗಿಲಿನೊಳಕ್ಕೆ ಪ್ರವೇಶಿಸಿದಾಗ ಕೆಲ ಕ್ಷಣಗಳ ಕಾಲ ಇಬ್ಬರಿಗೂ ತಡೆಯಾಗುತ್ತದೆ, ನಿಜ. ಈ ಸಣ್ಣ ಅಡಚಣೆಯಿಂದ ಅವರಿಬ್ಬರಿಗೂ ಕಾಲಿಡಲು ಜಾಗವಿಲ್ಲದಂತೆ ಕೊಠಡಿ ಭರ್ತಿಯಾಗಿತ್ತು ಎಂದು ನಾವು ತೀರ್ಮಾನಿಸುವಂತಿಲ್ಲ. ಅದೇ ರೀತಿಯಲ್ಲಿ, ಸರ್ಕಾರ ಸಾಲ ಎತ್ತಿದ ತಕ್ಷಣದಲ್ಲಿ ಉಂಟಾಗುವ ಅಡಚಣೆಯನ್ನು ಸರ್ಕಾರವು ಸಾಲದ ಮಾರುಕಟ್ಟೆಯನ್ನು "ಕಿಕ್ಕಿರಿದು ಆವರಿಸಿದೆ" ಎಂದು ತೀರ್ಮಾನಿಸಲಾಗದು.

ಹಾಗಾದರೆ, ಹಣಕಾಸು ಕಾರ್ಯದರ್ಶಿ ಮತ್ತು ರಿಸರ್ವ್ ಬ್ಯಾಂಕಿನ ಡೆಪ್ಯುಟಿ ಗವರ್ನರ್ ಇವರುಗಳು ಏನನ್ನು ಹೇಳಿದರೂ ಅದನ್ನು ಯಾಕೆ ಹೇಳಿದರು? ಅವರಿಗೆ ಅರ್ಥಶಾಸ್ತ್ರದ ಬಗ್ಗೆ ಸಂಪೂರ್ಣವಾದ ತಿಳುವಳಿಕೆ ಇಲ್ಲ ಎಂಬುದನ್ನು ಇದು ತೋರಿಸುತ್ತದೆ, ನಿಜ. ಆದರೂ, ಅವರು ಹಾಗೆ ಹೇಳಿದ್ದೇಕೆ? ಅದನ್ನು ತಿಳಿಯಲು, ವಿತ್ತೀಯ ಕೊರತೆಯ ಬಗ್ಗೆ ಇರುವ ಎರಡು ವಿಭಿನ್ನ ಟೀಕೆಗಳ ನಡುವಿನ ವ್ಯತ್ಯಾಸಗಳನ್ನು ನಾವು ತಿಳಿಯಬೇಕಾಗುತ್ತದೆ.

ಎಡಪಂಥದ ಟೀಕೆಯ ಪ್ರಕಾರ, ವಿತ್ತೀಯ ಕೊರತೆಯು ಸಾಲದ ಮಾರುಕಟ್ಟೆ ಕಿಕ್ಕಿರಿಯುವಂತಹ ಪರಿಸ್ಥಿತಿಗೆ ಕೊಂಡೊಯ್ಯುವುದಿಲ್ಲ ಅಥವಾ ಸಂಪನ್ಮೂಲಗಳು ಸಮರ್ಪಕವಾಗಿ ಬಳಕೆಯಾಗದ ಅರ್ಥವ್ಯವಸ್ಥೆಯಲ್ಲೂ ವಿತ್ತೀಯ ಕೊರತೆಯು ಯಾವುದೇ ರೀತಿಯ ಹಣದುಬ್ಬರದ ಪರಿಣಾಮ ಉಂಟುಮಾಡುವುದಿಲ್ಲ. ಬದಲಿಗೆ, ಅದು ಬೇಡಿಕೆಯನ್ನು ವೃದ್ಧಿಸುತ್ತದೆ ಮತ್ತು ಅದರಿಂದಾಗಿ ಉತ್ಪಾದನೆ ಹೆಚ್ಚುತ್ತದೆ ಹಾಗೂ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಆದರೆ, ವಿತ್ತೀಯ ಕೊರತೆಯನ್ನು ಎಡ ಪಂಥ ವಿರೋಧಿಸುತ್ತದೆ, ಏಕೆಂದರೆ, ಅದು ಬಂಡವಾಳಗಾರರ ಸಂಪತ್ತನ್ನು ಬಿಟ್ಟಿಯಾಗಿ ಹೆಚ್ಚಿಸುತ್ತದೆ, ಅದಕ್ಕಾಗಿ ಅವರು ಏನೊಂದನ್ನೂ ಮಾಡಿರದಿದ್ದರೂ ಸಹ. ಮೇಲೆ ಹೇಳಿದ ಉದಾಹರಣೆಯಲ್ಲಿ ಸರ್ಕಾರ ಮಾಡಿದ 100ರೂ ವೆಚ್ಚದಿಂದಾಗಿ, ಆರ್ಥವ್ಯವಸ್ಥೆಯಲ್ಲಿ ಉತ್ಪಾದನೆಯ ಹೆಚ್ಚಳ ಮತ್ತು ಉದ್ಯೋಗ ಸೃಷ್ಟಿಯ ಜೊತೆಗೆ ಬಂಡವಾಳಗಾರರ ಸಂಪತ್ತು 100 ರೂಗಳಷ್ಟು ಹೆಚ್ಚುತ್ತದೆ (ಅವರ ಉಳಿತಾಯ). ಆ 100 ರೂಗಳನ್ನು ಅವರು ಸರ್ಕಾರಿ ಬಾಂಡ್‌ಗಳಲ್ಲಿ ತೊಡಗಿಸುತ್ತಾರೆ. ಸರ್ಕಾರ ಒಂದು ವೇಳೆ ವಿತ್ತೀಯ ಕೊರತೆ ಅನುಭವಿಸುವುದರ ಬದಲು ಅವರ ಈ ಅಧಿಕ ಸಂಪತ್ತನ್ನೇ ತೆರಿಗೆಗೆ ಒಳಪಡಿಸಿ (ಈ ಅಧಿಕ ಸಂಪತ್ತನ್ನು ಬಂಡವಾಳಗಾರರ ಮಡಿಲಿಗೆ ಬೀಳುವ "ಲೂಟಿ" ಎಂದು ಸ್ವತಃ ಕೀನ್ಸ್ ಬಣ್ಣಿಸಿದ್ದರು) 100 ರೂಗಳ ಸಂಪತ್ತು ತೆರಿಗೆ ವಿಧಿಸಿದ್ದರೆ, ಆಗ ಏನೊಂದೂ ಬದಲಾಗುತ್ತಿರಲಿಲ್ಲ: ಸರ್ಕಾರದ ವೆಚ್ಚಗಳಿಂದಾಗಿ ಅಧಿಕವಾಗಿ ಸೃಷ್ಟಿಯಾದ ಉತ್ಪಾದನೆ 400 ರೂಗಳಷ್ಟೇ ಇರುತ್ತಿತ್ತು, ಮೊದಲಿನಷ್ಟೇ ಉದ್ಯೋಗಗಳು ಸೃಷ್ಟಿಯಾಗುತ್ತಿದ್ದವು, ಕೂಲಿಯ ಹೆಚ್ಚಳವೂ ಮೊದಲಿನಷ್ಟೇ ಇರುತ್ತಿತ್ತು. ಆದರೆ, ಬಂಡವಾಳಗಾರರ ಸಂಪತ್ತು ಅಧಿಕವಾಗುತ್ತಿರಲಿಲ್ಲ, ಅವರ ಮಡಿಲಿಗೆ ಯಾವ "ಲೂಟಿ"ಯೂ ಬೀಳುತ್ತಿರಲಿಲ್ಲ.

ಹಣಕಾಸು ಬಂಡವಾಳದ ಟೀಕೆಯ ಪ್ರಕಾರ, ವಿತ್ತೀಯ ಕೊರತೆಯು ಖಾಸಗಿ ಹೂಡಿಕೆಯನ್ನು ಕಿಕ್ಕಿರಿಯುವಂತಹ ಪರಿಸ್ಥಿತಿಗೆ ಕೊಂಡೊಯ್ಯುತ್ತದೆ. ಇದೊಂದು ತಪ್ಪು ವಾದ ಎಂಬುದು ನಮಗೆ ಈಗಾಗಲೇ ಅರ್ಥವಾಗಿದೆ. ಈ ತಪ್ಪು ವಾದವನ್ನು "ಅರ್ಥಹೀನ ಪ್ರಲಾಪ" ಎಂದು ಕೀನ್ಸ್ ಪಂಗಡದ ಇನ್ನೊಬ್ಬ ಅರ್ಥಶಾಸ್ತ್ರಜ್ಞೆ ಜೋನ್ ರಾಬಿನ್ಸನ್ ಬಣ್ಣಿಸಿದ್ದರು. ಹಾಗಿದ್ದರೂ, ತೊಂಭತ್ತು ವರ್ಷಗಳ ಹಿಂದೆಯೇ ಅಪಕೀರ್ತಿಗೊಳಗಾಗಿದ್ದ ಈ ವಾದವನ್ನು ಹಣಕಾಸು ಬಂಡವಾಳವು ಮುಂದಿಡುತ್ತಿದೆ ಮತ್ತು ಅದನ್ನೇ ನಮ್ಮ ಸರ್ಕಾರದ ಹಿರಿಯ ಅಧಿಕಾರಿಗಳು ಪ್ರತಿಧ್ವನಿಸುತ್ತಿದ್ದಾರೆ. ಅದಕ್ಕೆ ಕಾರಣವೆಂದರೆ, ಪ್ರಭುತ್ವವು ತನ್ನ ಖರ್ಚುವೆಚ್ಚಗಳ ಮೂಲಕವೇ

ಪುಟ 14 ಕ್ಕೆ

ಎಡಪಂಥದ ಟೀಕೆಯ ಪ್ರಕಾರ, ವಿತ್ತೀಯ ಕೊರತೆಯು ಸಾಲದ ಮಾರುಕಟ್ಟೆ ಕಿಕ್ಕಿರಿಯುವಂತಹ ಪರಿಸ್ಥಿತಿಗೆ ಕೊಂಡೊಯ್ಯುವುದಿಲ್ಲ ಅಥವಾ ಸಂಪನ್ಮೂಲಗಳು ಸಮರ್ಪಕವಾಗಿ ಬಳಕೆಯಾಗದ ಅರ್ಥವ್ಯವಸ್ಥೆಯಲ್ಲೂ ವಿತ್ತೀಯ ಕೊರತೆಯು ಯಾವುದೇ ರೀತಿಯ ಹಣದುಬ್ಬರದ ಪರಿಣಾಮ ಉಂಟುಮಾಡುವುದಿಲ್ಲ. ಬದಲಿಗೆ, ಅದು ಬೇಡಿಕೆಯನ್ನು ವೃದ್ಧಿಸುತ್ತದೆ ಮತ್ತು ಅದರಿಂದಾಗಿ ಉತ್ಪಾದನೆ ಹೆಚ್ಚುತ್ತದೆ ಹಾಗೂ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಆದರೆ, ವಿತ್ತೀಯ ಕೊರತೆಯನ್ನು ಎಡ ಪಂಥ ವಿರೋಧಿಸುತ್ತದೆ, ಏಕೆಂದರೆ, ಅದು ಬಂಡವಾಳಗಾರರ ಸಂಪತ್ತನ್ನು ಬಿಟ್ಟಿಯಾಗಿ ಹೆಚ್ಚಿಸುತ್ತದೆ, ಅದಕ್ಕಾಗಿ ಅವರು ಏನೊಂದನ್ನೂ ಮಾಡಿರದಿದ್ದರೂ ಸಹ.

# ಹಣಕಾಸು ಬಂಡವಾಳದ ಯಜಮಾನಿಕೆಗಾಗಿ ಸಾಲು ಸಾಲು ಸುಳ್ಳು ಸಿದ್ಧಾಂತಗಳು.......

ಪುಟ 13 ರಿಂದ

ಉದ್ಯೋಗಾವಕಾಶಗಳನ್ನು ನೇರವಾಗಿ ಹೆಚ್ಚಿಸುವ ಸಲುವಾಗಿ ಅರ್ಥವ್ಯವಸ್ಥೆಯಲ್ಲಿ ಮಧ್ಯಪ್ರವೇಶಿಸುವುದನ್ನು ಹಣಕಾಸು ಬಂಡವಾಳವು ವಿರೋಧಿಸುತ್ತದೆ. ಅದರ ಬದಲಿಗೆ, ಬಂಡವಾಳಗಾರರು ಹೆಚ್ಚು ಹೂಡಿಕೆ ಮಾಡುವಂತಾಗಲು ಅವರಿಗೆ ಪ್ರಭುತ್ವವು ಎಲ್ಲ ರೀತಿಯ ಉತ್ತೇಜನ, ಸೌಲಭ್ಯಗಳನ್ನು ಒದಗಿಸಬೇಕೆಂದು ಹಣಕಾಸು ಬಂಡವಾಳವು ಅಪೇಕ್ಷಿಸುತ್ತದೆ. ಬಂಡವಾಳಗಾರರು ವಹಿಸುತ್ತಿರುವ ಪಾತ್ರವನ್ನು ಪ್ರಭುತ್ವವು ನಿರ್ವಹಿಸಲೇ ಬಾರದು. ಏಕೆಂದರೆ, ನಾಳೆ ಜನ ಕೇಳುತ್ತಾರೆ: ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಸಲುವಾಗಿ ಪ್ರಭುತ್ವವು ಮಧ್ಯಪ್ರವೇಶ ಮಾಡುವುದಾದರೆ ನಮಗೆ ಬಂಡವಾಳಗಾರರ ಅಗತ್ಯವಾದರೂ ಎಲ್ಲಿದೆ?

ಬಂಡವಾಳಗಾರರನ್ನು ಕಾಡುತ್ತಿರುವ ಈ ಭಯದಿಂದಾಗಿಯೇ, ಪ್ರಭುತ್ವವು ಮಧ್ಯಪ್ರವೇಶ ಮಾಡುವುದರಿಂದ ತಮಗೂ ಅನುಕೂಲವಿದ್ದರೂ (ಮೇಲಿನ ಉದಾಹರಣೆಯಲ್ಲಿ ಅವರ ಲಾಭವು 200 ರೂಗಳಷ್ಟು ಹೆಚ್ಚಾಯಿತು) ಈ ಉದ್ದೇಶಕ್ಕಾಗಿ ಪ್ರಭುತ್ವವು ಕೈಗೊಳ್ಳುವ ಖರ್ಚುವೆಚ್ಚಗಳನ್ನು ಅವರು ವಿರೋಧಿಸುತ್ತಾರೆ. ಅವರ ಮೇಲೆ ಯಾವುದೇ ತೆರಿಗೆಯನ್ನೂ ಹಾಕದೇ, ವಿತ್ತೀಯ ಕೊರತೆಯ ಮೂಲಕವೇ ಕೈಗೊಳ್ಳುವ ಖರ್ಚುವೆಚ್ಚಗಳನ್ನೂ ಅವರು ವಿರೋಧಿಸುತ್ತಾರೆ. ಅಂದರೆ, ಹಣಕಾಸು ಬಂಡವಾಳದ ವಾದಗಳು ವಿಶ್ಲೇಷಣಾತ್ಮಕವಾಗಿ ತಪ್ಪು, ಆದರೆ, ಅವು ಸಾರ್ಥಸಾಧನೆಯ ವಾದಗಳು.

ವರದಿಯಾಗಿರುವ ಹೇಳಿಕೆಯ ಪ್ರಕಾರ, ರಿಸರ್ವ್ ಬ್ಯಾಂಕಿನ ಡೆಪ್ಯುಟಿ ಗವರ್ನರ್ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಸರ್ಕಾರ ಎತ್ತುವ ಸಾಲಗಳಿಂದಾಗಿ ಖಾಸಗಿ ಹೂಡಿಕೆಗಳು ಉಸಿರುಗಟ್ಟಿದಂತಾಗುತ್ತವೆ ಎಂಬ ಅನಿಸಿಕೆ ಅವರಿಗೆ ಉಂಟಾದಾಗಲೂ, ಸಾರ್ವಜನಿಕ ವಲಯದ ಉದ್ದಿಮೆಗಳ ಷೇರು ಮಾರಾಟದ ಮೂಲಕ ಸರ್ಕಾರ ತನ್ನ ಖರ್ಚುವೆಚ್ಚಗಳಿಗೆ ಹಣ ಹೊಂದಿಸಿಕೊಳ್ಳಬಹುದು ಎಂದು ಅವರು ಬಯಸಿದರು.

ಈಗ, ಒಂದು ಕ್ಷಣ ಹೀಗೆ ಊಹಿಸಿಕೊಳ್ಳೋಣ: ಸರ್ಕಾರ ಎತ್ತುವ ಸಾಲಗಳಿಂದಾಗಿ ಖಾಸಗಿ ಹೂಡಿಕೆಗಳು ಉಸಿರುಗಟ್ಟುತ್ತವೆ, ಉಳಿತಾಯಗಳ ಸಂಚಿತ ನಿಧಿ ನಿಗದಿತವಾಗಿರುವುದರಿಂದ. ಈ ತಪ್ಪು ವಾದವೂ ವಾಸ್ತವವಾಗಿ ನಿಜವೆಂದೇ ಒಂದು ಕ್ಷಣ ಊಹಿಸಿಕೊಳ್ಳೋಣ. ಆಗ, ಸರ್ಕಾರಿ ಬಾಂಡ್‌ಗಳನ್ನು ಮಾರುವುದರಿಂದ ಖಾಸಗಿ ಹೂಡಿಕೆ ಉಸಿರುಗಟ್ಟಿದಂತಾಗುತ್ತದೆ, ಆದರೆ, ಅದೇ ಸರ್ಕಾರದ ಉದ್ದಿಮೆಗಳ ಷೇರುಗಳನ್ನು ಮಾರುವುದರಿಂದ ಖಾಸಗಿ ಹೂಡಿಕೆ ಉಸಿರುಗಟ್ಟಿದಂತಾಗುವುದಿಲ್ಲ ಎಂಬುದು ಅಸಂಗತವೇ. ಸರ್ಕಾರಿ ಬಾಂಡ್‌ಗಳ ಮಾರಾಟದಿಂದ ಖಾಸಗಿ ವಲಯಕ್ಕೆ ತೊಂದರೆಯಾದರೆ, ಸರ್ಕಾರಿ ಉದ್ದಿಮೆಗಳ ಷೇರು ಮಾರಾಟದಿಂದಲೂ ಖಾಸಗಿ ವಲಯಕ್ಕೆ ತೊಂದರೆಯಾಗಲೇ ಬೇಕಾಗುತ್ತದೆ. ಹಾಗಾಗಿ, ಈಗ ಮುಂದಿಟ್ಟಿರುವ ಈ ವಾದವು ಒಂದು ಪಕ್ಕಾ ತಾತ್ವಿಕ ವಾದ. ಅದನ್ನು ಪ್ರತಿಪಾದಿಸುವ ಮಟ್ಟದಲ್ಲೂ, ಅದು ಯಾವುದೇ ರೀತಿಯಲ್ಲಿ ವಿಶ್ಲೇಷಣಾತ್ಮಕ ಅಂಗೀಕಾರಕ್ಕೆ ಅರ್ಹವಾದುದಲ್ಲ.

ಸಾಲು ಸಾಲು ಸುಳ್ಳು ಸಿದ್ಧಾಂತಗಳನ್ನೇ ಮುಂದೊತ್ತುವ ಮೂಲಕ ಹಣಕಾಸು ಬಂಡವಾಳವು ತನ್ನ ಅಧಿನಾಯಕತ್ವವನ್ನು ಚಲಾಯಿಸುತ್ತದೆ. ಇಂತಹ ಸಿದ್ಧಾಂತಗಳ ಸುಳ್ಳನ್ನು ಸತತವಾಗಿ ಬಯಲುಗೊಳಿಸುತ್ತಿರ ಬೇಕಾಗುತ್ತದೆ. •

---

## ರಕ್ತದ ರುಚಿ

*ಕೇಳಿಸಿದ್ದು*

ನಮ್ಮ ವರ್ತಮಾನ ಪತ್ರಿಕೆಗಳಿಗೇಕೆ ಈಗ ಮೃತ ದೇಹಗಳಲ್ಲಿ ವಿಕಾರವಾದ ಆಸಕ್ತಿ ಉಂಟಾಗಿದೆ? ಛಿದ್ರ ಛಿಚ್ಛಿದ್ರ ದೇಹಗಳನ್ನು, ಮರದಿಂದ ನೇತಾಡುತ್ತಿರುವ ಕಳೇವರಗಳನ್ನು, ದುರ್ಮರಣಕ್ಕೀಡಾದ ನತದೃಷ್ಟರ ಬೇವಾರಸಿ ಪಾರ್ಥಿವ ಶರೀರಗಳನ್ನು– ಬಗೆ ಬಗೆ ಕೋನಗಳಿಂದ ಸೆರೆ ಹಿಡಿದು ಢಾಳಾಗಿ ಪ್ರಕಟಿಸುವ ಅತ್ಯಂತ ಅಮಾನವೀಯ ಹೀನ ಚಾಳಿಗೇಕೆ ಇಂದಿನ ಪತ್ರಿಕೋದ್ಯಮ ತುತ್ತಾಗಿದೆ? ಅಪಘಾತ, ದುರ್ಮರಣಗಳ ಮಾತಿರಲಿ, ನಿಸರ್ಗ ಸಹಜವಾಗಿಯೇ ಅಸುನೀಗಿದ ಹಿರಿಯರ ಸಾವಿನ ಸುದ್ದಿ ಪ್ರಕಟಿಸುವಾಗಲೂ ಅವರ ಸುಂದರ ಸಜೀವ ಭಾವಚಿತ್ರ ಪ್ರಕಟಿಸುವ ಬದಲಿಗೆ ಈಗೀಗ ಪತ್ರಿಕೆಗಳು ಮೂಗಿನಲ್ಲಿ ಹತ್ತಿ ತುರುಕಿ ಅಂತಿಮ ಯಾತ್ರೆಗೆ ಸಿದ್ಧವಾದ ಮೃತದೇಹಗಳ ಚಿತ್ರಗಳನ್ನು ಪ್ರಕಟಿಸುವುದಕ್ಕೆ ಹಪಹಪಿಸುತ್ತಿವೆಯಲ್ಲ!

ಇದು ಮನುಷ್ಯನ ಸಾವು– ನೋವುಗಳನ್ನು ಅತ್ಯಂತ ಹೃದಯಹೀನವಾಗಿ ನಾವು ಒಂದು ರೋಚಕ ಸರಕನ್ನಾಗಿ ಪರಿವರ್ತಿಸುವ ಹೀನ ತುರಿಕೆ. ಸತ್ತವನು ನನ್ನ ಅಣ್ಣನಲ್ಲ, ತಮ್ಮನಲ್ಲ, ತಂದೆಯಲ್ಲ, ಹೀಗಾಗಿ ಅವನ ದೇಹವನ್ನು ನಾನು ಬಹಿರಂಗವಾಗಿ ಹರಾಜಿಗಿಡಬಲ್ಲೆ ನನ್ನ ತಮ್ಮನೊಬ್ಬ ರೈಲು ಹಳಿಗೆ ಸಿಕ್ಕು ರುಂಡ ಮುಂಡ ಬೇರೆಯಾಗಿ ಬಿದ್ದಿದ್ದರೆ ಅದನ್ನು ನಾನು ಹೀಗೆ ಢಾಳಾಗಿ ತೆಗೆದು ಅಚ್ಚುಹಾಕಿ, ಚಹಾ ಕುಡಿಯುತ್ತಲೋ, ಅವಲಕ್ಕಿ ಮೆಲ್ಲುತ್ತಲೋ ಬೆಳಿಗ್ಗೆ ಬೆಳಿಗ್ಗೆ ಟಿವಿ ನೋಡುತ್ತಾ ಚಪ್ಪರಿಸುತ್ತಿದ್ದೇನೆ? ಇವಳು ನನ್ನ ಅಕ್ಕನೋ, ಅಮ್ಮನೋ ಆಗಿದ್ದರೆ– ಸಮುದ್ರ ತೀರಕ್ಕೆ ಬಂದು ವಿವಸ್ತ್ರವಾಗಿ ಊದಿಕೊಂಡು ಬಿದ್ದ ಈ ಅನಾಮಿಕ ದೇಹದ ಚಿತ್ರವನ್ನು ಪತ್ರಿಕೆಗಳಲ್ಲಿ  ಹಾಕಲು ಬಿಡುತ್ತಿದ್ದೆನೆ? ಪ್ರತಿಯೊಬ್ಬ ಪತ್ರಕರ್ತನೂ, ಸಂಪಾದಕನೂ, ಸುದ್ದಿ ಛಾಯಾಗ್ರಾಹಕನೂ ಮತ್ತೆ ಮತ್ತೆ ತನ್ನನ್ನು ಕೇಳಿಕೊಳ್ಳಲೇಬೇಕಾದ ಪ್ರಶ್ನೆಗಳಿವು.

ಏಕೆಂದರೆ ಇವು ನಮ್ಮನ್ನು ನಮ್ಮ ಮಕ್ಕಳನ್ನು ಹೆಚ್ಚು ಹೆಚ್ಚು ಅಸೂಕ್ಷ್ಮರನ್ನಾಗಿ, ನಿರ್ದಯಿಗಳನ್ನಾಗಿ ಮಾಡುತ್ತ ಹೋಗುತ್ತವೆ. ಕಳ್ಳರಂತೆ ಕದ್ದು ಬೇರೆಯವರ ಸಾವು ನೋವುಗಳನ್ನು 'ಫಜೀಲು ಕೌತುಕ'ದಲ್ಲಿ ನೆರೆಮನೆಯವರ ಜಗಳವನ್ನು ನೋಡುವಂತೆ ನೋಡುವ ಹೇಡಿ ಪ್ರವೃತ್ತಿಯನ್ನು ಬೆಳೆಸುತ್ತವೆ. ಎದುರಿಗೆ ನಿಂತ ಮನುಷ್ಯನನ್ನೇ ಗೌರವಿಸಲಾರದ ನಾವು ಅವನ ಮೃತದೇಹವನ್ನೆಂತು ಗೌರವಿಸಿಯೇವು?

ಈಚಿನ ವರುಷಗಳಲ್ಲಿ ಕಾಳ್ಗಿಚ್ಚಿನಂತೆ ಹಬ್ಬಿರುವ ವರಸೆ ಇದು. ಆ ಮುನ್ನ ಪತ್ರಿಕೆಯ ಪುಟಗಳಲ್ಲಿ ಮೃತದೇಹ ಅತ್ಯಂತ 'ಅಸಿಂಧು'ವಾದ ಸಂಗತಿ ಆಗಿತ್ತು ನೇತಾರರ ಅಂತ್ಯಯಾತ್ರೆಯ ಮೆರವಣಿಗೆಗಳನ್ನು ಬಿಟ್ಟರೆ, ಯಾವುದೇ ಮೃತದೇಹಗಳ ಚಿತ್ರಗಳನ್ನು ಪತ್ರಿಕೆಗಳು ಪ್ರಕಟಿಸುತ್ತಿರಲಿಲ್ಲ, ಪತ್ರಿಕೋದ್ಯಮ ತನ್ನ ನೀತಿ ಸಂಹಿತೆಯಲ್ಲಿ ಮನುಷ್ಯನನ್ನು ಘನತೆಯಿಂದ ನೋಡುತ್ತಿದ್ದ ಕಾಲ ಅದು. ಆದರೆ ಪೊಲೀಸರ ಕಡತಗಳ ಸ್ವತ್ತಾದ ಕೆಲ ಬೀಭತ್ಸ ಚಿತ್ರಗಳನ್ನು ಬಂಡವಾಳ ಮಾಡಿಕೊಂಡು 'ಪೋಲೀಸ್ ಸುದ್ದಿ'ಗಳಂಥ ಪತ್ರಿಕೆಗಳು ಶುರುವಾಗಿದ್ದೇ ತಡ– ಬೇರೆಯವರ ರಕ್ತವನ್ನು ನೋಡುವ ಮನುಜ ಮನಸ್ಸಿನಾಳದ ಪ್ರಾಣಿ ಪ್ರವೃತ್ತಿಗೆ ಕುಮ್ಮಕ್ಕು ದೊರೆಯಿತು. ಪತ್ರಿಕೆಗಳು ತಮ್ಮ ಪುಟಗಳನ್ನು ಈ ನತದೃಷ್ಟ ಮೃತದೇಹಗಳಿಂದ ಸಿಂಗರಿಸತೊಡಗಿದವು. ಒಳಗಿನ, ಪಾಶವೀ ಕ್ಷಣಿಕವಾದ ಹೊಸ ಸಂವೇದನೆಯ ತುರಿಗಾಯಗಳಿಗೆ ಈ ಬಿಸಿಬಿಸಿ ನೀರನ್ನು ಹೊಯ್ದು ಕ್ಷಣಿಕವಾದ ಹೊಸ ಪಾಶವೀ 'ಸುಖ'ದ ವಿಷವನ್ನು ಮೆಲ್ಲಗೆ ಮೆಲ್ಲಗೆ ಹಬ್ಬಿಸತೊಡಗಿದರು.

ಹೆದ್ದಾರಿಯಲ್ಲಿ ಟ್ರಕ್ಕಿನ ಗಾಲಿಗೆ ಸಿಕ್ಕು ಸತ್ತ ನಾಯಿಯ ದೆಹಕ್ಕೂ ಅದರದ್ದೇ ಆದ ಘನತೆ ಇದೆ. ಬಳಿಸಾರಿ ಅದನ್ನೆತ್ತಿ ಸಂಸ್ಕಾರಗೈಯುವ ನೈತಿಕ ಧೈರ್ಯ, ಆತ್ಮಸ್ಥೈರ್ಯ ಯಾರಿಗಿದೆಯೋ– ಅವನಿಗೆ ಮಾತ್ರ ಈ ಕಳೇವರದ ನಿಶ್ಚಲ ಕಣ್ಣಲ್ಲಿ ಕಣ್ಣಿಟ್ಟು ನೋಡುವ ಹಕ್ಕು ಇದೆ. ಮತ್ಯಾರಿಗೂ ಇಲ್ಲ.

ಸಾವಿನಂಥ ಸಾವನ್ನೂ ಅತ್ಯಂತ ಘನತೆಯಿಂದ ಭರಿಸಿಕೊಂಡು ಮನುಜಲೋಕ ಬೆಳೆದು ಬಂದಿದೆ. ಸಾವು ಹೊಕ್ಕ ಮನೆಯ ಮಕ್ಕಳನ್ನು ಪಕ್ಕದ ಮನೆಯವರು  ತಕ್ಷಣ ತಮ್ಮಲ್ಲಿಗೆ ಕರೆದುಕೊಂಡು ಹೋಗುವ, ಆಕಳು ಹೆರುವ ಸಂದರ್ಭದಲ್ಲೂ ಮಕ್ಕಳು ಆ ಕಡೆ ಹಾಯದಂತೆ ನೋಡುವ ಜಾಯಮಾನ ನಮ್ಮದು. ಅಷ್ಟೇ ಏಕೆ, ಸಾವಿನ ಕರಿನೆರಳು ಹೊದ್ದ ಆಸ್ಪತ್ರೆಯನ್ನು ಮಕ್ಕಳ ಕಣ್ಣಿಂದ ಆಚೆಗಿಟ್ಟುಕೊಂಡು ಬಂದಿದೆ ನಮ್ಮ ಮಾನವೀಯ ಸಮಾಜ. ಸತ್ತವರು ನಕ್ಷತ್ರಗಳಾಗುತ್ತಾರೆ, ದೇವರ ಮನೆಗೆ ಹೋಗುತ್ತಾರೆ ಎಂಬ ಸುಂದರ ವಿವೇಕೀ ಕಲ್ಪನೆಗಳಲ್ಲಿ ಮಕ್ಕಳಿಗೆ ಅಭಯ ನೀಡುತ್ತಾ ಬಂದಿದೆ. ಎಷ್ಟೊಂದು ವರುಷಗಳ ಧ್ಯಾನದಂಥ ಈ ವಿಸ್ಮಯದ ಒಡಪನ್ನು ಹಠಾತ್ತನೆ ನಮ್ಮ ಸುದ್ದಿ ಮಾಧ್ಯಮ ಇಷ್ಟೊಂದು ಹೀನವಾಗಿ ಏಕೆ ಒಡೆಯುತ್ತಿದೆ? ಮಕ್ಕಳ ಮನದಲ್ಲಿ ಪಾಶವೀ ತುರಿಕೆಯ ಬೀಜವನ್ನು ಯಾಕೆ ಬಿತ್ತುತ್ತಿದೆ ?

ತಕ್ಷಣ ಎಲ್ಲ ಪತ್ರಿಕೆಯ ಸಂಪಾದಕರು ಎಚ್ಚೆತ್ತುಕೊಳ್ಳ ಬೇಕಾಗಿದೆ. ಪತ್ರಿಕೆಗಳನ್ನು ಕೊಂಡು ಮನೆಯ ಟೀಪಾಯಿ ಮೇಲಿಡುವ ಪಾಲಕರು ಜಾಗೃತರಾಗಬೇಕಾಗಿದೆ, ಸರ್ಕ್ಯುಲೇಷನ್ನಿನ ನೆಪದಲ್ಲಿ ಜನಕ್ಕೆ ಇದೇಬೇಕು ಎನ್ನುವ ಹುಸಿ ತರ್ಕದಲ್ಲಿ (ಜನಕ್ಕೆ ಆ ರುಚಿ ಹತ್ತಿಸಿದವರೇ ಇವರು !) ನಮ್ಮ ಮುಂದಿನ ತಲೆಮಾರುಗಳ ಜೀವನ ದೃಷ್ಟಿಯನ್ನೇ ಬಗ್ಗಡಗೊಳಿಸಲು ಹೊರಟಿರುವ ಈ ಚಾಳಿ ತಕ್ಷಣ ನಿಲ್ಲಬೇಕಾಗಿದೆ.

ಬಿಸಿಯೂಟದ ಪ್ರಕರಣದಲ್ಲಿ ಅಸುನೀಗಿದ ಆ ಮುದ್ದು ಬಾಲಕನ ಒಂದಾದರೂ ಮುದ್ದಾದ ಚಿತ್ರ ಯಾರಿಗೂ ಸಿಗಲಿಲ್ಲವೆ? ಯಾಕೆ ಎಲ್ಲರೂ ಸರಕಾರಿ ಆಸ್ಪತ್ರೆಯ ಜುಂಗು ಹಿಡಿದ ಲೋಹದ ಸ್ಟ್ರೆಚರಿನ ಮೇಲೆ ಮಲಗಿಸಿದ ಪೋಸ್ಟ್ ಮಾರ್ಟಂ ಹೋಲಿಗೆ ಎದ್ದು ಕಾಣುವಂಥ ಆ ಪೋರನ ಮೃತದೇಹದ ಚಿತ್ರ ಹಾಕಿದರು? ಅದರಿಂದ ಏನು ಸಾಧನೆ ಮಾಡಿದರು? ಅದರ ಬದಲಿಗೆ ಅವನ ಸುಂದರ ಚಿತ್ರ ಹಾಕಿದರೆ ಆ ದುರಂತ ಇನ್ನೂ ತೀವ್ರವಾಗಿ ನಮ್ಮನ್ನು ಕಾಡಬಹುದಿತ್ತಲ್ಲವೇ? ಆದರೆ 'ಸತ್ತ' 'ಬೇರೆ' ದೇಹಗಳನ್ನು ಹೀಗೆ ನಾನಾ ರೂಪಗಳಲ್ಲಿ ಮಾರಿ ಹಣ ಮಾಡಲು ಹೊರಟಿರುವ ಪತ್ರಿಕೋದ್ಯಮ ಯಾಕೆ ತನ್ನ  ಶೀಲವನ್ನು ಕಳಕೊಂಡಿದೆ?

ಮನೆಯಲ್ಲಿ ಯಾರೂ ಇಲ್ಲದಾಗ ಮೆಲ್ಲಗೆ ಮತ್ತೆ ಮತ್ತೆ ಪತ್ರಿಕೆಯ ಪುಟ ತೆರೆದು ರುಂಡ ಮುಂಡ ಬೇರೆಯಾದ ಅಪಘಾತದ ಚಿತ್ರವನ್ನೇ, ಅಥವಾ ಬೀಭತ್ಸವಾಗಿ ಕೊಲೆ ಗೀಡಾದ ವ್ಯಕ್ತಿಯ ಒಡೆದ ತಲೆಯ ಗಾಯದ ವಿವರಗಳನ್ನೇ ನೋಡುತ್ತ ನಿಂತ ಹಾಲುಗಲ್ಲದ ಪುಟ್ಟ ಹುಡುಗನ ಒಳಗೊಂದು ಮಹಾನರಕ ಹುಟ್ಟುವ ಸದ್ದು ಯಾರಿಗೂ ಕೇಳಿಸುತ್ತಿಲ್ಲವೇ ?

'ನನಗೆ ಮನುಷ್ಯ ಬೇಕು, ಮೃತ ದೇಹವಲ್ಲ, ಇನ್ನು ಮುಂದೆ ನಾನು ಮೃತ ದೇಹದಿಂದ ನನ್ನ ಪುಟಗಳನ್ನು ಸಿಂಗರಿಸುವುದಿಲ್ಲ' ಎಂದು ತನ್ನ ಆತ್ಮಕ್ಕೆ ಹೇಳಿಕೊಂಡೇ ಕಾರ್ಯಪ್ರವೃತನಾಗುವ ಸಂಪಾದಕ, ಪತ್ರಕರ್ತ, ಸುದ್ದಿಗಾರ ಬಹುಶಃ ಯಾವ ನೇತಾರನೂ, ಸಿದ್ಧಾಂತಿಯೂ ಮಾಡಿರದ ಅರ್ಥಪೂರ್ಣ ಹೊಸ ಮೌನ ಕ್ರಾಂತಿಯ ಅಮೂಲ್ಯ ಹರಿಕಾರನಾಗುತ್ತಾನೆ.

ತಾ ನಿಂತ ಪರಿಸರದ ಹವೆಯನ್ನು ಸಂಸ್ಕರಿಸಿ ಪ್ರಾಣವಾಯು ನೀಡುವ ಕಲ್ಪವೃಕ್ಷ ವಾಗುತ್ತಾನೆ. ಇಂಥವರಿಗೆ ಶರಣೆನ್ನುವೆ.

*– ಜಯಂತ ಕಾಯ್ಕಿಣಿ*

# ಸೌದಿ ಅರೇಬಿಯಾಕ್ಕೆ ಶಸ್ತ್ರಾಸ್ತ್ರ ಮಾರಾಟ ನಿಷೇಧಕ್ಕೆ ಟ್ರಂಪ್ ವಿಟೋ



ಯೆಮೆನ್ ಮತ್ತು ಅನ್ಸಾರ್ ಅಲ್ಲಾಹ ಪಡೆಗಳ ಮೇಲೆ ಸುಮಾರು ನಾಲ್ಕು ವರ್ಷಗಳಿಂದಲೂ ಸೌದಿ ಅರೇಬಿಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ), ಜಂಟಿಯಾಗಿ ನಡೆಸುತ್ತಿದ್ದ ಸುದೀರ್ಘ ಕಾಲದ ಯುದ್ದದ ಪರಿಣಾಮ ಹಾಗೂ ಯೆಮೆನಿನ ಮೇಲೆ ನಡೆಸಿದ ಬಾಂಬ್ ದಾಳಿಗಳಿಂದ ಸುಮಾರು 17,000 ಕ್ಕೂ ಹೆಚ್ಚು ನಾಗರಿಕರು ಕೊಲ್ಲಲ್ಪಟ್ಟಿದ್ದಾರೆ. ದೊಡ್ಡ ಪ್ರಮಾಣದಲ್ಲಿ ಮಾನವೀಯ ಮೌಲ್ಯಗಳನ್ನು ಉಲಂಘಿಸಿದ ಕಾರಣ ಅಪಾರ ದುರಂತಗಳು ನಡೆದಿವೆ. ಇದರಿಂದಾಗಿ, ಸುಮರು 30 ಲಕ್ಷಕ್ಕೂ ಅಧಿಕ ಜನರನ್ನು ಯೆಮೆನ್ ನಿಂದ ಸ್ಥಳಾಂತರಗೊಂಡಿದ್ದಾರೆ. ಈ ದುರಂತಗಳಿಂದಾಗಿ ಸುಮಾರು 2 ಕೋಟಿ 40 ಲಕ್ಷಕ್ಕೂ, ಹೆಚ್ಚು ಜನರು ಅಂತರರಾಷ್ಟ್ರೀಯ ನೆರವಿನ ಮೇಲೆ ಅವಲಂಬಿತರಾಗಿದ್ದಾರೆ.

ಸೌದಿ ಅರೇಬಿಯಾ ಮತ್ತು ಯುಎಇ ಗಳಿಗೆ ಯುದ್ದ ಮಾಡಲು ಶಸ್ತ್ರಾಸ್ತ್ರ ಗಳನ್ನು ಅಮೆರಿಕ ನಿರಂತರವಾಗಿ ಮಾರಾಟ ಮಾಡುತ್ತಿರುವುದೇ ಇದಕ್ಕೆ ಮೂಲ ಕಾರಣ ಎನ್ನಲಾಗಿದೆ. ಈ ಶಸ್ತ್ರಾಸ್ತ್ರಗಳ ಮಾರಾಟವನ್ನು ನಿಲ್ಲಿಸಬೇಕೆಂದು ಮಾನವೀಯ ಹಕ್ಕುಗಳ ಗುಂಪುಗಳು ಮತ್ತು ಸಂಘಟನೆಗಳು ನಿರಂತರವಾಗಿ ಹೋರಾಟ ನಡೆಸುತ್ತಲೇ ಬಂದಿವೆ. ಇದನ್ನು ಟ್ರಂಪ್ ಆಡಳಿತ ಗಮನಿಸದೆ ತಿರಸ್ಕರಿಸಿಕೊಂಡು ಬರುತ್ತಿತ್ತು. ಆದರೆ, ಪತ್ರಕರ್ತ ಜಮಾಲ್ ಖಶೋಗಿ ಹತ್ಯೆ ಯ ನಂತರ, ಸೌದಿ ಅರೇಬಿಯಾ ವಿರುದ್ದದ ಟೀಕೆಗಳು ಮತ್ತು ಒತ್ತಡಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ತೀವ್ರಗೊಂಡಾಗ, ಮಣಿದ ಯುಎಸ್ ಕಾಂಗ್ರೆಸ್ ಕಳೆದ ಮಾರ್ಚ್ ತಿಂಗಳಲ್ಲಿ, ಸೌದಿ ಅರೇಬಿಯಾ ಮತ್ತು ಯುಎಇ ಗಳಿಗೆ ಯುದ್ದಕ್ಕಾಗಿ ಮಾರಾಟ ಮಾಡುತ್ತಿದ್ದ ಶಸ್ತ್ರಾಸ್ತ್ರಗಳನ್ನು ನಿಲ್ಲಿಸಲು ಮೂರು ಮಸೂದೆಗಳನ್ನು ಮಂಡಿಸಿತು. ಆದರೆ, ಮಸೂದೆಗಳು ಅಂಗೀಕಾರವಾಗದೆ ವಿಫಲವಾಯಿತು.

ಶಸ್ತ್ರಾಸ್ತ್ರ ಮಾರಾಟ ನಿಷೇಧ ಮಾಡುವ ಈ ಮಸೂದೆಯನ್ನು ಅಂಗೀಕರಿಸಲೇಬೇಕೆಂಬ ಒತ್ತಾಯದ ಕೂಗು, ಕಳೆದ ಒಂದು ತಿಂಗಳಿನಿಂದ ಮಾನವ ಹಕ್ಕುಗಳ ಸಂಘಟನೆಗಳು ನಡೆಸಿದ ಮತ್ತಷ್ಟು ತೀವ್ರತರದ ಹೋರಾಟಗಳಿಂದ, ಅಮೆರಿಕಾದ ಕಾಂಗ್ರೆಸ್ ಒತ್ತಡಕ್ಕೆ ಸಿಲುಕಿತು. ಪತ್ರಕರ್ತ ಜಮಾಲ್ ಖಶೋಗಿ ಹತ್ಯೆಯಲ್ಲಿ ಸೌದಿ ಅರೇಬಿಯಾ ಭಾಗಿಯಾಗಿರುವುದನ್ನು ಉಲ್ಲೇಖಿಸಿ, ಅಮೆರಿಕಾದ ಕಾಂಗ್ರೆಸ್ "ಈ ಎರಡೂ ದೇಶಗಳಿಗೂ ಯುದ್ದಕ್ಕಾಗಿ ಮಾರಾಟ ಮಾಡುತ್ತಿದ್ದ ಶಸ್ತ್ರಾಸ್ತ್ರಗಳನ್ನು ನಿಲ್ಲಿಸುವ ಮೂರು ಮಸೂದೆಗಳನ್ನು ಅಂತಿಮವಾಗಿ ಅಂಗೀಕರಿಸಿತು.

ಈ ಹಿನ್ನೆಲೆಯಲ್ಲಿ, ಅಧ್ಯಕ್ಷ ಟ್ರಂಪ್ ಕಾಂಗ್ರೆಸ್ ನ ಈ ಕಾನೂನುಗಳನ್ನು ಜಾರಿಗೆ ತರುವ ಬದಲಿಗೆ, ತನ್ನ ಅದ್ಯಕ್ಷೀಯ ಆಡಳಿತದ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು, 'ವಿಟೋ' ಹೊರಡಿಸುವ ಮೂಲಕ, ಈ ಮಸೂದೆಗಳನ್ನು ನಿಷೇಧ ಮಾಡಿ, ಸಾಮ್ರಾಜ್ಯಶಾಹಿಯ ನಿಜವಾದ ಯುದ್ಧಕೋರತನದ ಮುಖವನ್ನು ಮತ್ತೊಮ್ಮೆ ಜಗತ್ತಿಗೆ ಬಿಚ್ಚಿ ತೋರಿಸಿದಂತಾಗಿದೆ. ಏಕೆಂದರೆ, ಯುಎಸ್ ಕಾಂಗ್ರೆಸ್ ನಲ್ಲಿ ರಿಪಬ್ಲಿಕನ್ನರು ಬಹು ಸಂಖ್ಯೆಯಲ್ಲಿ ಇದ್ದಾರೆ. ಆದ್ದರಿಂದ, ಟ್ರಂಪ್ ವಿಟೋವನ್ನು ಧಿಕ್ಕರಿಸಲು ಬೇಕಾದ ಮೂರನೆ ಎರಡರಷ್ಟು ಬೆಂಬಲಗಳಿಸುವುದು ಸಾಧ್ಯವಿಲ್ಲ. ಯೆಮೆನ್ ಜನರ ದುಃಖ ಮತ್ತು ಸಾವುಗಳಿಂದ, ಹೆಚ್ಚು ಆರ್ಥಿಕ ಲಾಭವನ್ನು ಗಳಿಸುತ್ತಿರುವ ಸೌದಿ ಅರೇಬಿಯಾ ಮತ್ತು ಯುಎಇ ಗಳಿಗೆ ಬೆಂಬಲವಾಗಿ ನಿಂತು, ಮಾನವ ಹಕ್ಕುಗಳ ಸಂಪೂರ್ಣ ಉಲ್ಲಂಘನೆಗೆ ಜವಾಬ್ದಾರರರಾಗಿ, ಯುಎಸ್ ನ ನಿಜ ಬಣ್ಣ ಬಯಲಾಗಿದೆ.

ಈ ಮಸೂದೆಗಳು ಯುಎಸ್ ಕಾಂಗ್ರೆಸ್ ನ ಕೆಟ್ಟ ಕಲ್ಪನೆಗಳಾಗಿವೆ. ಹಾಗೂ ಯಮೆನ್ ನಿನ ಮೇಲಿನ ಯುದ್ದದ ಮೂಲ ಕಾರಣಗಳನ್ನು ಪರಿಹರಿಸಲು ಈ ಮಸೂದೆಗಳು ವಿಪಲವಾಗಿವೆ ಎಂದಿದ್ದಾರೆ ಟ್ರಂಪ್. ಸೌದಿ ಅರೇಬಿಯಾ ಮತ್ತು ಯುಎಇ ಗಳಿಗೆ ಮಾರಾಟ ಮಾಡುವ 8 ಬಿಲಿಯನ್ ಡಾಲರ್ ಮೌಲ್ಯದ ಶಸ್ತ್ರಾಸ್ತ್ರ ಗಳನ್ನು ಈ ವಿಟೋ ಸಾಧ್ಯ ಮಾಡುತ್ತದೆ.

ಸೌದಿ ಅರೇಬಿಯಾ ಯುಎಸ್ ನಿಂದ ಅತಿ ಹೆಚ್ಚು ಶಸ್ತ್ರಾಸ್ತ್ರಗಳನ್ನು ಖರೀದಿಸುವ ದೇಶ. ಇದರಿಂದ ಯುಎಸ್ ನಲ್ಲಿ ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುತ್ತದೆ ಹಾಗೂ ಆ ಪ್ರದೇಶದಲ್ಲಿ ತನ್ನ ಮಿತ್ರ ರಾಷ್ಟ್ರಗಳ ಹಿತಾಸಕ್ತಿಗಳನ್ನು ರಕ್ಷಿಸುತ್ತದೆ. ಹಾಗಾಗಿ, ಅಮೆರಿಕವು ಸೌದಿ ಅರೇಬಿಯಾಕ್ಕೆ ಶಸ್ತ್ರಾಸ್ತ್ರಗಳ ಮಾರಾಟವನ್ನು ನಿಲ್ಲಿಸಲು ಬಯಸುವುದಿಲ್ಲವೆಂದು ಟ್ರಂಪ್ ವಿಟೋ ಚಲಾಯಿಸಿದ್ದನ್ನು ಸಮರ್ಥಿಸಿಕೊಂಡಿದ್ದಾರೆ. ●

**ಜಗದ ಸುತ್ತ**

**ನಾಗರಾಜ ನಂಜುಂಡಯ್ಯ**

# ಬ್ರಿಟನ್ ಹೊಸ ಪ್ರಧಾನಿಗೆ ಪ್ರತಿಭಟನೆಯ ಸ್ವಾಗತ

ಬಲಪಂಥೀಯ ವಾಚಾಳಿತನ, ವರ್ಣಭೇದ ನೀತಿ, ಪರಿಸರ ವಿರೋಧಿ ಮತ್ತು ಬ್ರೆಕ್ಸಿಟ್ ಕುರಿತಂತೆ ಕಠಿಣ ನಿಲುವುಗಳಿಗೆ ಹೆಸರುವಾಸಿಯಾದ ಬೋರಿಸ್ ಜಾನ್ಸನ್ ಅವರ ಆಗಮನದ ವಿರುದ್ದ, ಡೌನಿಂಗ್ ಸ್ಟ್ರೀಟ್‌ನಲ್ಲಿ ಪ್ರವಾಹೋಪಾದಿಯಲ್ಲಿ ಬ್ರಿಟನ್ನಿನ ಜನ ಪ್ರತಿಭಟನೆ ನಡೆಸಿದರು.

ಯುನೈಟೆಡ್ ಕಿಂಗ್‌ಡಂ ನ ಹೊಸ ಪ್ರಧಾನ ಮಂತ್ರಿಯಾಗಿ ಬೋರಿಸ್ ಜಾನ್ಸನ್ ನನ್ನು, ಅಲ್ಲಿನ ರಾಜನು ಪ್ರಧಾನಿಯೆಂದು ದೃಢಿಕರಿಸಿದ ನಂತರ ಅಧಿಕಾರ ಸ್ವೀಕಾರಕ್ಕಾಗಿ ಡೌನ್ ಸ್ಟೀಟ್ ನಲ್ಲಿರುವ ಬಕ್ಕಿಂಗ್‌ಹಾಮ್ ಅರಮನೆಗೆ ತೆರಳುತಿದ್ದಂತೆ ಭಾರಿ ಪ್ರತಿಭಟನೆಯನ್ನು ಎದುರಿಸಬೇಕಾಯಿತು. ಈ ಪ್ರತಿಭಟನೆಯ ನಾಯಕತ್ವವನ್ನು ಪರಿಸರವಾದಿಗಳು, ಸ್ತ್ರೀವಾದಿ ಸಂಘಟನೆಗಳು ಮತ್ತು ಲೇಬರ್ ಪಕ್ಷದ ಎಡಪಂಥೀಯರು ವಹಿಸಿದ್ದರು. ಜೊತೆಗೆ ಇನ್ನಿತರೆ ಸಾಮಾಜಿಕ ಚಳುವಳಿಗಳು ಭಾಗವಹಿಸಿದ್ದವು.

ಬೋರಿಸ್ ಅವರ ಕಾರನ್ನು ಪ್ರಧಾನಿಯ ಅಧಿಕೃತ ನಿವಾಸದ ಮುಂದೆ ಪ್ರತಿಭಟನೆಕಾರರು ಪ್ಲೇ ಕಾರ್ಡ್‌ಗಳನ್ನು ಹಿಡಿದು ತಡೆದು ನಿಲಿಸಿ ಪ್ರತಿಭಟಿಸಿದ್ದಾರೆ. ಈ ಪ್ರತಿಭಟನೆಗೆ ಮೂಲ ಕಾರಣವಾಗಿದ್ದು, ಬೋರಿಸ್ ಆಳುವ ಟೋರಿ ಪಕ್ಷದ ಅತ್ಯಂತ ಬಲಪಂಥೀಯ ಮತ್ತು ಪ್ರತಿಗಾಮಿ ವ್ಯಕ್ತಿಯಾಗಿದ್ದರು ಎನ್ನುವುದು. ಅವರು ಲಂಡನ್ ನ ಮೇಯರ್ ಆಗಿದ್ದಾಗ ಹಾಗೂ ಹಿಂದಿನ ಮೇ ಸರ್ಕಾರದಲ್ಲಿ ವಿದೇಶಾಂಗ ಕಾರ್ಯದರ್ಶಿಯಾಗಿದ್ದಾಗ ಅದನ್ನು ಢಾಳಾಗಿ ಪ್ರದರ್ಶಿಸಿದ್ದರು. ಪಾಶ್ಚಿಮಾತ್ಯ ಜಗತ್ತಿನ ಬೇರೆಡೆಗಳಂತೆ, 'ಬಂಡವಾಳಶಾಹಿ–ವಿರೋಧಿ ಪ್ರತಿಭಟನೆಗಳು ಲಂಡನ್ನ್ ನಿನ ಬೀದಿಗಳಲ್ಲಿ ನಡೆಯುತ್ತಿದ್ದಾಗ ಇದೊಂದು "ಬ್ಯಾಂಕರ್ ಬ್ಯಾಶಿಂಗ್" ಎಂದು ತಕ್ಷಣ ಪ್ರತಿಕ್ರಿಯೆ ವ್ಯಕ್ತ ಪಡಿಸಿದ್ದರು.. ಪೋನ್ ಟ್ಯಾಪಿಂಗ್ ಹಗರಣಕ್ಕಾಗಿ ರೂಪಕ್ ಮುರ್ಡಾಕ್ ರಂತಹ ಮೀಡಿಯಾ ದೊರೆಗಳನ್ನು ಬೋರಿಸ್ ರು ಸಮರ್ಥನೆ ಮಾಡಿಕೊಂಡಿದ್ದರು. ಈ ಹಗರಣದಲ್ಲಿ ಮುರ್ಡಕ್ ಒಡೆತನದ ಸ್ಕೈ ಇಂಟರ್ನ್ಯಾಷನಲ್ ಸುದ್ದಿ ಉತ್ಪಾದನೆಗಾಗಿ ಸಾಮಾನ್ಯ ನಾಗರಿಕರ ಪೋನುಗಳನ್ನು ಕೂಡ ಟ್ಯಾಪಿಂಗ್ ಮಾಡಿದ್ದರು.

ಬೋರಿಸ್ ರು ಪ್ರಸಿದ್ಧ ಧರ್ಮಾಂದರೂ ಹೌದು, ಟೆಲಿಗ್ರಾಫ್, ಜಿಕ್ಯೂ, ಮತ್ತು ಇತರೆ ಪ್ರಕಟಣೆಗಳಲ್ಲಿ, ಬೋರಿಸ್ ಜಾನ್ಸನ್ ರ ಬರವಣಿಗೆಗಳು ಇಸ್ಲಾಂ–ಭೀತಿ, ವಲಸೆ–ವಿರೋಧಿ, ಸಲಿಂಗಿ–ವಿರೋಧಿ, ಜನಾಂಗ–ದ್ವೇಷದ ಭಾಷೆಯನ್ನು ಒಳಗೊಂಡಿದ್ದವು. ಇದು ಬ್ರಿಟನ್ನಿನಲ್ಲಿ ವಲಸಿಗರು ಮತ್ತು ಅಲ್ಪ ಸಂಖ್ಯಾತರನ್ನು ಗುರಿಯಾಗಿಸಿತ್ತು. ಸೇಂಟ್ ಪ್ಯಾಟ್ರಿಕ್ ನ ಪ್ರಸಿದ್ದಿ ಸಾಂಪ್ರದಾಯಿಕ ಐರಿಶ್ರ್ ನ ರಜಾದಿನಗಳು, ಪ್ರತ್ಯೇಕತವಾದಿ ಪಿತೂರಿಯ ಭಾಗವಾಗಿವೆ ಎಂದು ಬೋರಿಸ್ ರು ಒಮ್ಮೆ ಟ್ವೀಟ್ ಮಾಡಿದ್ದರು. ಟೋರಿ ಪಕ್ಷದಲ್ಲಿ ಜಾನ್ಸನ್ ಕೂಡ ಕಡು ಬ್ರೆಕ್ಸಿಟ್ ಬೆಂಬಲಿಗರಲ್ಲಿ ಒಬ್ಬರು. ಯುರೋಪಿಯನ್ ಕೂಟದಿಂದ ಬ್ರಿಟನ್ ಹೊರ ಬರುವುದು ಮಾತ್ರವಲ್ಲ, ಅದು ಯಾವುದೇ ಒಪ್ಪಂದವಿಲ್ಲದೆ ಹೊರ ಬರಬೇಕೆಂಬುದು ಅವರ ವಾದ. ●



JANASHAKTHI KANNADA VARA PATRIKE August 5-11, 2019 Price: Rs. 10/- Date of Publication: 2 August 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

# ಪ್ರಸ್ತುತ ತಲೆಮಾರಿಗೆ ಹಿಡಿದ ಕೈಗನ್ನಡಿ 'ಡಿಯರ್ ಕಾಮ್ರೇಡ್'

**ಗಾಯಿತ್ರಿ,** ಎಸ್‌ಎಫ್‌ಐ ಕೋಲಾರ

"ಡಿಯರ್ ಕಾಮ್ರೇಡ್" ಈ ಶೀರ್ಷಿಕೆ ನೋಡಿದಾಕ್ಷಣ ಕೆಲವರಿಗೆ ಆಕರ್ಷಣೆ, ಮತ್ತೆ ಕೆಲವರಿಗೆ ವಿಕರ್ಷಣೆ ಸಹಜ. ಅದು ಆ ಪದದ ನೈಜತೆ, ಅದಕ್ಕಿರುವ ಗ್ಲಾಮರ್ ಮಾತ್ರವಲ್ಲದೆ ಗ್ರಾಮರ್ ಸಹ ಹೌದು. ಏಕೆಂದರೆ ಕಾಮ್ರೇಡ್ ಅಂದಾಕ್ಷಣ ಒಂದು ಪ್ರಶ್ನೆ, ತಿರುಗಿಬೀಳುವುದು, ಒಂದು ಹೋರಾಟ, ಒಂದು ರಾಜಿಯಾಗದೇ ಇರುವಂತದ್ದು, ತ್ಯಾಗದ ಗುಣ ನಮ್ಮ ಕಣ್ಣ ಮುಂದೆ ನಿಂತಂತೆ ಸಜೀವವಾಗಿ ಸಾಕ್ಷಾತ್ಕಾರವಾಗುತ್ತದೆ. ಅದು ಆ ಪದಕ್ಕಿರುವ ಗ್ರಾಮರ್. ಅದಕ್ಕಾಗಿ ಇದು ಇಷ್ಟವಾದವರಿಗೆ ಇಂಪಾಗಿ, ಇಷ್ಟವಾಗದವರಿಗೆ ಕಂಪಾಗಿ ಅನಿಸಬಹುದು. ಆದರೆ ಆ ಪದ–ದೃಷ್ಯಾರ್ಥದ ಬಗೆಗಿನ ಚರ್ಚೆ ಇಂದೇಕೆಂದರೆ "ಡಿಯರ್ ಕಾಮ್ರೇಡ್" ಎನ್ನುವ ಕಮ್ಯುನಿಷ್ಟ್ ಬ್ರಾಂಡ್ ಹೆಸರಿನಿಂದ ತೆಲುಗು ಚಿತ್ರರಂಗದ ತೆರೆಯ ಮೇಲೆ ಜುಲೈ 26ರಂದು ಒಂದು ಸಿನಿಮಾ ಆವಿಷ್ಕಾರವಾಯಿತು. ಕಮ್ಯುನಿಸ್ಟ್ ಹೆಸರಿನಿಂದಲೇ, ವಿಷಯದಿಂದಲೇ, ಇದಕ್ಕೂ ಮೊದಲೇ ಎಷ್ಟೋ ಸಿನಿಮಾಗಳು ಬಂದಿವೆ. ಆದರೆ ಇದು ಬೇರೆಯೇ ರೀತಿಯಲ್ಲಿದೆ ಅನಿಸಿತು. ಪಕ್ಕಾ ಕಮರ್ಷಿಯಲ್ ಸಿನಿಮಾಗಳಿಗಿಂತ ಇಂತಹ ಸಿನಿಮಾಗಳು ಬರಬೇಕಾದ ಅವಶ್ಯಕತೆ ತುಂಬಾ ಇದೆ.

ಸಿನಿಮಾ ಅಂದರೇನೇ ವ್ಯಾಪಾರ. ಅದರಲ್ಲೂ ತೆಲುಗು ಸಿನಿಮಾ ಮತ್ತಷ್ಟು ವ್ಯಾಪಾರಮಯವಾಗಿ ಓಟ ಕೀಳುತ್ತಿದೆ. ಈ ಮಧ್ಯಯುಗದಲ್ಲಿ ತುಂಬಾ ಯುವಮನಸ್ಸುಗಳ ಅಭಿಮಾನವನ್ನು ಹೊಂದಿರುವ ಹೊಸತರದ ನಟ ವಿಜಯ್ ದೇವರಕೊಂಡ ನಾಯಕ ಪಾತ್ರದಲ್ಲಿ ಕಾಣಿಸಿರುವುದು ಮತ್ತಷ್ಟು ಚರ್ಚೆಗೆ ದಾರಿಮಾಡಿಕೊಟ್ಟಿದೆ. ಶೀರ್ಷಿಕೆ ಹೆಸರು ಹಾಳುಮಾಡಿದರೇನೋ ಎಂದು ಅಥವಾ ಶೀರ್ಷಿಕೆ ಇದಾಗಿರುವುದರಿಂದ ಏನು ಚೆನ್ನಾಗಿರುತ್ತದೋ ಎಂದು ಮಾತನಾಡುವವರು, ಬರೆಯುವವರು, ದುರ್ವಿಮರ್ಶೆ, ಸದ್ವಿಮರ್ಶೆಗಳು ಬರುವುದು ಸಹಜ ಪ್ರಕ್ರಿಯೆ ತಾನೇ? ಇನ್ನು ಸಿನಿಮಾದ ವಿಷಯಕ್ಕೆ ಬಂದರೆ ಕಾಲೇಜು ಫೀಜುಗಳ ಬಗ್ಗೆ ಹೋರಾಡುವ ಸ್ಟೂಡೆಂಟ್ ಲೀಡರ್ 'ಚೈತನ್ಯ' ಪಾತ್ರ ವಿಜಯ್ ದೇವರಕೊಂಡ ಅವರದ್ದು. ವಿದ್ಯಾರ್ಥಿ ಸಂಘಗಳನ್ನು ಬಳಸಿಕೊಳ್ಳಬೇಕೆಂದು ನೋಡುವ ರಾಜಕೀಯ ನಾಯಕರೊಂದಿಗೆ ಘರ್ಷಣೆಗಳಿರುತ್ತವೆ. ಆ ಕ್ರಮದಲ್ಲಿ ಉದ್ಯೋಗಗಳು ಕೊಡದೆ ಮುಖಗಳನ್ನು ಸಹ ತೋರಿಸಿಕೊಳ್ಳಲಾಗದೆ ಹಾಸ್ಟಲ್ ನಲ್ಲೇ ಇದ್ದೇವೆಂದು ಹೇಳಿದ ಡೈಲಾಗ್ ರಾಜ್ಯಗಳಲ್ಲಿನ ಸಮಕಾಲೀನ ಯುವಜನರ ಸ್ಥಿತಿಗತಿಗಳಿಗೆ ಹಿಡಿದ ಕೈಗನ್ನಡಿಯಾಗಿದೆ. ಸಿನಿಮಾ ಎಂದಾಕ್ಷಣ ಪ್ರೀತಿ ಪ್ರೇಮ ಇವೆಲ್ಲಾ ಸಹಜ. ಪ್ರೀತಿಯಿಂದಲೇ ಸಿನಿಮಾ ಹುಟ್ಟಿತಾ ಎನ್ನುವಂತಿದೆ ಸಿನಿಮಾದ ವಸ್ತುಸ್ಥಿತಿ. ಅದೇ ಗುಣದಂತೆ ಅಪರ್ಣಾದೇವಿ (ರಶ್ಮಿಕಾ ಮಂದಣ್ಣ) ಎನ್ನುವ ಕ್ರಿಕೆಟರ್ ಳೊಂದಿಗೆ ಚೈತನ್ಯ(ವಿಜಯ್ ದೇವರಕೊಂಡ)ನಿಗೆ ಪ್ರೀತಿ ಮೊಳೆಯುತ್ತದೆ. ವಿದ್ಯಾರ್ಥಿಗಳ ಸಮಸ್ಯೆಗಳ ಕುರಿತಂತೆ ಗಲಾಟೆ ಮಾಡುವುದರಿಂದ ನಮಗೇನು ಬರುತ್ತದೆ.! ಹೋರಾಟಗಳಿಂದ ಯಾರು ಸಂತೋಷವಾಗಿ ಇರುತ್ತಾರೆ.! ಈಗಾಗಲೇ ದೆಹಲಿಯಲ್ಲಿ ವಿದ್ಯಾರ್ಥಿ ಸಂಘಗಳ ಗಲಾಟೆಯಲ್ಲಿ ನನ್ನ ಅಣ್ಣ ಕೊನೆಯುಸಿರೆಳೆದಿದ್ದಾನೆ ಎಂದು ಭಯಪಡುತ್ತಾಳೆ. ಆಕೆ ಹಾಗೆ ಅನ್ನುವುದು ಹೋರಾಟಗಾರರು ಪ್ರತಿದಿನ ತಮ್ಮ ಕುಟುಂಬದವರಿಂದ ಎದುರುಗೊಳ್ಳುವ ಮಾತುಗಳನ್ನು ನೆನಪು ಮಾಡುತ್ತದೆ.

ನಾಯಕ ನಟಿ ಅಪರ್ಣ, ಚೈತನ್ಯ ಅವರ ಮನೆಗೆ ಬಂದಾಗ ಅಲ್ಲಿನ ಸಂಭೋದನೆಗಳನ್ನು ಕೇಳಿಸಿಕೊಂಡು ಕಾಮ್ರೇಡ್ ಅಂದರೆ ಏನೆಂದು ಕೇಳುತ್ತಾಳೆ. ಅಲ್ಲಿ ಇರುವ ಇನ್ನೊಬ್ಬ ಆರ್ಟಿಸ್ಟ್ ವ್ಯಂಗ್ಯವಾಗಿ ಕಮ್ಮ–ರೆಡ್ಡಿ ಎರಡನ್ನೂ ಸೇರಿಸಿದರೆ ಕಾಮ್ರೇಡ್ ಆಗುತ್ತದೆ ಎಂದು ಹೇಳುತ್ತಾನೆ. ಅವರಿಗೇನು ಗೊತ್ತಮ್ಮಾ ಅಜ್ಜನನ್ನು ಕೇಳು ಎಂದು ಅವರ ಚಿಕ್ಕಮ್ಮ ಕಳುಹಿಸುತ್ತಾರೆ. ಎಂತಹ ಕಷ್ಟನಷ್ಟಗಳು ಎದುರಾದರೂ ನಮ್ಮ ಹಿಂದೆ ಸದಾ ಇರುವವನೇ ಕಾಮ್ರೇಡ್, ಹಾಗೆ ಇರಲು ಸಾಧ್ಯವಾಗುವವನು ಕಾಮ್ರೇಡ್ ಒಬ್ಬನೇ ಎಂದು ಆತ ಹೇಳುತ್ತಾನೆ. ಆ ಡೈಲಾಗ್ ಅನ್ನು ನಮ್ಮ ಮನಸ್ಸಿಗೆ ಬಂದಂತೆ ಚರ್ಚಿಸುವವರೂ ಇಲ್ಲದೇನಿಲ್ಲ. ಹಾಗೆ ತಪ್ಪು ತಿಳುವಳಿಕೆ ಹೇಳುವವರಿಗೆ ಉತ್ತರ ನೀಡುವುದಕ್ಕಾಗಿ ನಿರ್ಮಾಪಕ ಹೀಗೆ ಹೇಳಿಸಿದ್ದಾರೆಂದು ಅರ್ಥವಾಗುತ್ತದೆ. ಇಂದಿನ ವಿದ್ಯಾರ್ಥಿಗಳು, ಯುವಜನ ಕೆಂಪು ಬಾವುಟ ಅಂದರೆ ಏನೆಂದು, ಕಾಮ್ರೇಡ್ ಅಂದರೆ ಏನೆಂದು, ಸಹ ತಿಳಿಯದೆ ಇದ್ದಾರೆ. ಅವರನ್ನು ಆಲೋಚನೆಗೊಳಪಡಿಸುವುದಕ್ಕೆ ಇದು ಎಷ್ಟೋ ಉಪಯೋಗಕ್ಕೆ ಬರುತ್ತದೆ.




ಚೈತನ್ಯ ಮೇಲೆ ಆತನ ಅಜ್ಜ "ಮಾಕಿನೇನಿ ಸೂರ್ಯಂ" ಅವರ ಪ್ರಭಾವವಿರುತ್ತದೆ. ಅವರ ಮನೆಯ ಮೇಲೆ ಯಾವಾಗಲೂ ಕೆಂಪುಬಾವುಟ ಹಾರಾಡುತ್ತಿರುತ್ತದೆ. ಅವರ ಸ್ಟೂಡೆಂಟ್ ಯೂನಿಯನ್ ಕಚೇರಿಯಲ್ಲಿ ಸುಂದರಯ್ಯ, ಚೆಗುವೆರಾ ಜೊತೆಗೆ ಸಿ.ಪಿ.ಐ.ಎಂ. ಮೊದಲ ಪಾಲಿಟ್ ಬ್ಯೂರೋ ಸದಸ್ಯರ ಪೋಟೋಗಳು ಕಾಣಿಸುತ್ತವೆ. ಇವನ್ನೆಲ್ಲಾ ನೋಡಿದರೆ ಮಾರ್ಕ್ಸಿಸ್ಟ್ ಆಶಯಗಳಿಗೋಸ್ಕರ ಆ ಸಂಘದಲ್ಲಿ ಕೆಲಸ ಮಾಡುತ್ತಿದ್ದಾರೆನ್ನುವ ಅರ್ಥ ಸ್ಪಷ್ಟವಾಗುತ್ತದೆ. ಆದರೆ ಹಳೇಕಾಲದ ಹಾಗೆ ಕ್ರಾಂತಿಗೀತೆಗಳು, ನಿತ್ಯ ಹೋರಾಟಗಳು, ಹೋರಾಟಗಳಿಗಾಗಿ ಮಾತ್ರ ಪ್ರೇರೇಪಿಸುವಂತಹ ಸಿನಿಮಾ ಮಾತ್ರ ಅಲ್ಲ. ಈ ಸಿನಿಮಾದಿಂದ ಅವುಗಳನ್ನು ಆಶಿಸುವುದೆಂದರೆ ಇತರರು ಯಾರೂ ಆ ಸಿನಿಮಾ ನೋಡಬಾರದೆಂದು ಕೋರಿಕೊಳ್ಳುವುದೇ ಆಗುತ್ತದೆ. ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿ ಯುವ ನಾಯಕರಿಗೆ ಪ್ರೀತಿ–ಪ್ರೇಮ ಇದ್ದಂತೆ ಚೈತನ್ಯನಿಗೂ ಸಹ ಇರುತ್ತವೆ. ಕಮರ್ಷಿಯಲ್ ಸಿನಿಮಾ ಆಗಿರುವುದರಿಂದ ಸಹಜವಾಗಿ ಪ್ರೀತಿ ಸುತ್ತುತ್ತಾ ಇರುತ್ತದೆ. ಸ್ವಲ್ಪ ಸಮಯ ಹೋರಾಟ ಬಿಟ್ಟು ಬದಲಾಗಿದ್ದಾನೇನೋ ಎಂದುಕೊಳ್ಳುವಷ್ಟರಲ್ಲೇ ಚೈತನ್ಯನಲ್ಲಿ ಅಣುವಷ್ಟು ಸಹ ಪ್ರಶ್ನಿಸುವ ತತ್ವ ಕಡಿಮೆಯಾಗಿಲ್ಲವೆಂದು, ತಪ್ಪು ಘಟಿಸಿದ್ದು ನೋಡಿದರೆ ಕೋಪ ನೆತ್ತಿಗೇರಿ ಗಲಾಟೆಮಾಡುವ ಗುಣವನ್ನು ಬಿಡಲಾರನೆಂದು ತಿಳಿದುಹೋಗುತ್ತದೆ. ಅಪರ್ಣಾಳಿಗೆ ಎದುರಾದ ಸಂಘಟನೆಯಲ್ಲಿ ಭಯಪಡುವ, ಅವಳನ್ನು "ಚೈತನ್ಯ" ತಿರುಗಿಬೀಳುವಂತೆ ಮಾಡಿ, ಹೆಣ್ಣುಮಕ್ಕಳು ತಮ್ಮ ಜೀವನದ ಗುರಿಯನ್ನು ಮುಟ್ಟುವಂತೆ, ಅವರು ಉನ್ನತ ಸ್ಥಾನಕ್ಕೆ ಹೋಗುವುದಕ್ಕಾಗಿ ಪ್ರತಿಯೊಬ್ಬರೂ ಪ್ರೋತ್ಸಾಹಿಸಬೇಕೆನ್ನುತ್ತಾನೆ. ಆ ಕ್ರಮದಲ್ಲಿ ಮಹಿಳೆಯರನ್ನು ಲೈಂಗಿಕ ಹಿಂಸೆಗೆ ಗುರಿಮಾಡಿದವನಿಗೆ ತಕ್ಕ ಪಾಠ ಕಲಿಸುತ್ತಾನೆ. ನಮ್ಮ ಜೀವನದಲ್ಲಿ ನಮ್ಮ ಕಷ್ಟಗಳನ್ನು ಪರಿಹಾರ ಮಾಡುವ ಕಾಮ್ರೇಡ್ ರಂತೆ ಆಲೋಚಿಸುವವರು ಒಬ್ಬರಿದ್ದರೂ ಸಾಕು ನಾವು ಪ್ರಪಂಚದೊಂದಿಗೆ ಹೋರಾಡಬಲ್ಲೆವು. ನನ್ನ ಜೀವನದಲ್ಲಿ ಒಬ್ಬ ಕಾಮ್ರೇಡ್ ಇದ್ದಾನೆ, ಆದ್ದರಿಂದಲೇ ನಾನು ಈ ದಿನ ಗೆಲ್ಲಲು ಸಾಧ್ಯವಾಗಿದೆ ಎಂದು ಕಾಮ್ರೇಡ್ ಪ್ರಾಧಾನ್ಯತೆಯನ್ನು ಅಪರ್ಣಾದೇವಿ (ರಶ್ಮಿಕ ಮಂದಣ್ಣ) ಹೇಳುವುದರಿಂದ ಕಥೆ ಮುಗಿಯುತ್ತದೆ.

ಇದೆಲ್ಲಾ ಸಿನಿಮಾ ಆದರೆ ಸಿನಿಮಾದ ಸುತ್ತಲೂ, ಸಿನಿಮಾ ಹೊರಗಡೆ ಮತ್ತೊಂದು ಸಿನಿಮಾ ಇದೆ. ಇಂದು ದೇಶದಲ್ಲಿ ರಾಜ್ಯದಲ್ಲಿ ಇರುವ ರಾಜಕೀಯ ಪರಿಸ್ಥಿತಿಗಳಲ್ಲಿ ಕಾಮ್ರೇಡ್ ಎಂಬ ಭಾವವು ಬೆನ್ನ ಹಿಂದೆಯೇ ದಾಳಿಗಳನ್ನೆದುರಿಸುತ್ತಿರುವ ಸಂಗತಿ ನಮ್ಮೆಲ್ಲರಿಗೂ ಗೊತ್ತಿದೆ. ಇಂತಹ ಪ್ರತಿಕೂಲ ಸಂದರ್ಭಗಳಲ್ಲಿ ತನ್ನ ಸಿನಿಮಾಗೆ 'ಡಿಯರ್ ಕಾಮ್ರೇಡ್' ಎಂದು ಹೆಸರಿಟ್ಟ ನಿರ್ಮಾಪಕ "ಭರತ್ ಕಮ್ಮನು" ಅವರನ್ನು ಸಾಹಸವಂತ, ಧೈರ್ಯವಂತ ನಿರ್ಮಾಪಕರೆನ್ನದೆ ಇರಲಾರೆವು. ತನ್ನ ಚೊಚ್ಚಲ ಸಿನಿಮಾವನ್ನು ಈ ಶೀರ್ಷಿಕೆಯಡಿಯಲ್ಲೇ ನಾಲ್ಕು ಭಾಷೆಗಳಲ್ಲಿ ಬಿಡುಗಡೆ ಮಾಡುವುದು ಸಾಮಾನ್ಯ ವಿಷಯವೇನಲ್ಲ. ಈಗಾಗಲೇ ಬಾಲಿವುಡ್ ನಿರ್ಮಾಪಕ ಕರಣ್ ಜೋಹರ್ ಈ ಸಿನಿಮಾವನ್ನು ರಿಮೇಕ್ ಮಾಡಲು ಅನುಮತಿಯನ್ನು ಪಡೆದುಕೊಂಡಿದ್ದಾರೆ. ಒಟ್ಟಾರೆಯಾಗಿ ಕಮರ್ಶಿಯಲ್ ಆಗಿ ಸಹ ನಿರ್ಮಾಪಕ ಗೆಲುವು ಸಾಧಿಸಿದ್ದಾರೆ. ಸಾಕ್ಷಾತ್ ಪ್ರಧಾನ ಮಂತ್ರಿಗಳೇ ಜಾತಿ ಮತದ ಉನ್ಮಾದದಲ್ಲಿ ಹಿಟ್ಲರ್ ನ ಮಾದರಿಯಲ್ಲಿ ದೇಶವನ್ನು ನಾಶ ಮಾಡುತ್ತಿರುವ ಈ ಸಂದರ್ಭದಲ್ಲಿ, ಮತೋನ್ಮಾದಿಗಳು ದಾಳಿಗಳು ಎಸಗುತ್ತಿರುವ ಇಂದಿನ ಭಯಂಕರ ಪರಿಸ್ಥಿತಿಯಲ್ಲಿ ಮೌನವಿನ್ನು ಸಾಕು ನಡಿ "ಜಾತಿ, ಮತ ಮರೆತು ನಡೆ" ಎಂದು ಚೈತನ್ಯಪ್ರಸಾದ್ ಬರೆದ ಕೊನೆಯ ಹಾಡು ಶೀರ್ಷಿಕೆಗೆ ಹಾಗೂ ಸಿನಿಮಾಗೆ ಜೀವಾಧಾರ. ಪ್ರೇಕ್ಷಕರ ಮೆದುಳುಗಳನ್ನು ವಿಮರ್ಶೆಗೊಳಪಡಿಸುವ ಭಾವಾಧಾರ. ಜಾತಿ, ಮತ ಎನ್ನುವ ಭಾವನಾತ್ಮಕ ಗುಲಾಮಗಿರಿಯಲ್ಲಿ ಇನ್ನೆಷ್ಟು ದಿನ ಬದುಕೋಣ, ಸ್ವಂತ ಬಲವೇನೆಂದು ತಿಳಿದುಕೋ. ಹಳೆಯ ಮತ ಭಾವಗಳನ್ನು ಬದಲಾಯಿಸಲು ಕಾಮ್ರೇಡ್ ಗಳಂತೆ ಬದುಕು, ಒಳ್ಳೆಯದನ್ನು ಬೆಳೆಸುವುದಕ್ಕಾಗಿ ಕಾಮ್ರೇಡ್ ರಂತೆ ಇರು. ಈ ಸಮಾಜದಲ್ಲಿ ಬದಲಾವಣೆ ತರುವುದಕ್ಕಾಗಿ ಕಾಮ್ರೇಡ್ ಆಗಿ ಜೀವಿಸು ಅಂದು ಆ ಹಾಡು ತಿಳಿಸುತ್ತದೆ. ದಾಬೋಲ್ಕರ್ ರನ್ನು, ಕಲ್ಬುರ್ಗಿಯವರನ್ನು, ಪನ್ಸಾರೆಯವರನ್ನು, ಗೌರಿ ಲಂಕೇಶ್ ರಂತಹ ಮೇಧಾವಿಗಳನ್ನು, ಇಷ್ಟದ ಆಹಾರ ತಿಂದರೆಂದು ಮತ್ತಷ್ಟು ಜನರನ್ನು ಕೊಲ್ಲುತ್ತಿರುವ ಇಂದಿನ ಕೋಮುವಾದಿ ಗೂಂಡಾಗಳ ರಾಜ್ಯವನ್ನು ಎಚ್ಚರಿಸುತ್ತಿರುವಂತೆ ಇದೆ. "ಗೂಂಡಾಗಳ ರಾಜ್ಯೋದಯಕ್ಕೆ ಹೆದರುವುದು ಏಕೆ? ನಮ್ಮ ಧ್ವನಿ ಇನ್ ಕ್ವಿಲಾಬ್ ಜಿಂದಾಬಾದ್ ಚಿರಾಯುವಾಗಲಿ" ಎಂಬ ಭಾರತೀಯ 'ಯೂತ್ ಐಕಾನ್, ದಿ ಲೆಜೆಂಡ್ ಭಗತ್ ಸಿಂಗ್' ಉರಿಗಂಬದ ಮೇಲಿನಿಂದ ಈ ದೇಶದ ಯವಜನಕ್ಕೆ ತೋರಿಸಿದ ಆಶಯಮಾರ್ಗದ ದಿಕ್ಸೂಚಿ ಕೇಳಿಸುತ್ತದೆ. ಶಿಕ್ಷಣ, ಸಂಘಟನೆ, ಹೋರಾಟವೆಂಬ ಮೂರು ಧ್ವನಿಗಳ ಸ್ಫೂರ್ತಿ ಕಥೆಗಳನ್ನು ತುಂಬುವ ಮೊದಲೇ ಸಂವಿಧಾನದ ಮೇಲಿನ ದಾಳಿ, ದೇಶದಲ್ಲಿ ಹಿಂಸೆ, ಸರ್ಕಾರದ ಕೈಯಲ್ಲಿ ಗುಲಾಮರಾಗಿ ಎಷ್ಟೋ ಧಾರುಣಗಳನ್ನು, ದೌರ್ಜನ್ಯಗಳನ್ನು, ಲೂಟಿಗಳನ್ನು ಪ್ರಶ್ನಿಸದೆ "ನೋಡುವ ನೋಟ ಸತ್ತು.... ಮಾತು ಸತ್ತು... ಕಿವುಡಾಗಿ... ಸತ್ತ ಶವವಾಗಬಾರದು... ಇಷ್ಟವಾದುದಕ್ಕಾಗಿ... ಕಷ್ಟವಾದರೂ ಜೊತೆಯಾಗಿ ಹೋರಾಡು.... ಇಂಕ್ವಿಲಾಬ್ ಜಿಂದಾಬಾದ್ ಘೋಷಣೆಯನ್ನ ಚಿರಾಯುವಾಗುವಂತೆ ಮಾಡೆನ್ನುತ್ತಾನೆ.

ನಿನ್ನ ಜೀವನ ಹೋರಾಟದಲ್ಲಿ ಭುಜ ತಟ್ಟಿ ಹಿಂದಿರುವುದು, ಧ್ವಜವನ್ನಿಡಿದು ನಡೆಸುವುದು ಕಾಮ್ರೇಡ್ ಒಬ್ಬರೇ ಎಂದು Live like a comrade, be like a comrade ಎನ್ನುತ್ತಾ ಮಾರ್ಕ್ಸಿಸ್ಟ್ ತತ್ವಸಾರವನ್ನೆಲ್ಲಾ ಆ ಹಾಡು ಬೋಧಿಸುತ್ತದೆ. ವೆಸ್ಟರ್ನ್ ಮ್ಯೂಸಿಕ್ ನಿಂದ ಕ್ರಾಂತಿಯ ಔಷದಿಗೆ ಸಿಹಿಬಣ್ಣವನ್ನದ್ದಿ ಈ ತಲೆಮಾರಿಗೆ ಅವರ ಸ್ಟೈಲ್ ನಲ್ಲೇ ಒಂದು ಹೊಸ ಕಣ್ಣೋಟವನ್ನು ಈ 'ಡಿಯರ್ ಕಾಮ್ರೇಡ್' ತಂದುಕೊಟ್ಟಿದೆ.

**JANASHAKTHI KANNADA VARA PATRIKE:** Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**